# ಕರ್ನಾಟಕ ವಿಕಾಸ

KARNATAKA VIKAS

ಸೆಪ್ಟೆಂಬರ್ 2014 September 2014




## ನಿರುದ್ಯೋಗಿ ಯುವಜನತೆಗೆ ಉದ್ಯೋಗ ದೊರಕಿಸುವುದೇ ಸರ್ಕಾರದ ಸಂಕಲ್ಪ

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು
'ರಾಜೀವ್ ಗಾಂಧಿ ಚೈತನ್ಯ ಯೋಜನೆ'ಯಡಿ ಜಿಲ್ಲಾಮಟ್ಟದ ಉದ್ಯೋಗ ಮೇಳವನ್ನು
ಗದಗ ನಗರದಲ್ಲಿ ಉದ್ಘಾಟಿಸುತ್ತಿರುವುದು.

# ಧಾರವಾಡ ಜಿಲ್ಲೆ ನವಲಗುಂದ ತಾಲ್ಲೂಕಿನ ಗುಮ್ಮಗೋಳ ಗ್ರಾಮ ಪಂಚಾಯತಿ ಅಭಿವೃದ್ಧಿ ಚಿತ್ರಣ



# ಕರ್ನಾಟಕ ವಿಕಾಸ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾಸ ಪತ್ರಿಕೆ

ಸೆಪ್ಟೆಂಬರ್ 2014 ಸಂಪುಟ: 55
September 2014 Volume: 55
ಸಂಚಿಕೆ : 10
Issue : 10


## ಈ ಸಂಚಿಕೆಯೊಳಗೆ


5. ಸಚಿವಾಲಯದಿಂದ ಸಂದೇಶ

7. ಮುಖಪುಟ ವರದಿ

10. ವರದಿ

18. ಅಭಿವೃದ್ಧಿ ಅಧಿಕಾರಿಗಳ ಅಂಗಳದಿಂದ

27. ಕ.ವಿ.ಯ (ಕ್ಷ) ಪ್ರಶ್ನೆ – ಪ. ರಾಮಕೃಷ್ಣ ಶಾಸ್ತ್ರಿ

28 ಲೇಖನಗಳು – ಶ್ರೀಕಲಾ ಪೇತ್ರಿ
– ಹೆಚ್.ಜಿ. ಶಿವಾನಂದಮೂರ್ತಿ

41. ಕಾವ್ಯ ವಿಕಾಸ – ರುದ್ರಾಂಬಿಕ ಐ.ಓ.

42. ಪಂಚತಂತ್ರ ವರದಿ

43. ಸಕಾಲ ವರದಿ

44. ಸುತ್ತೋಲೆಗಳು






ಪ್ರಕಾಶಕರು
**ಕೆ. ಯಾಲಕ್ಕಿ ಗೌಡ**
ನಿರ್ದೇಶಕರು (ಪಂ.ರಾಜ್)
ಹಾಗೂ ಸರ್ಕಾರದ ಪದನಿಮಿತ್ತ
ಜಂಟಿ ಕಾರ್ಯದರ್ಶಿ

ಪ್ರಧಾನ ಸಂಪಾದಕರು
**ಬೂವನಹಳ್ಳಿ ನಾಗರಾಜ್**
ನಿರ್ದೇಶಕರು, ಸುವರ್ಣ ಗ್ರಾಮೋದಯ
ಯೋಜನೆ ಹಾಗೂ ಸರ್ಕಾರದ ಪದನಿಮಿತ್ತ
ಉಪ ಕಾರ್ಯದರ್ಶಿ

ಸಂಪಾದಕರು ಹಾಗೂ
ಸಾರ್ವಜನಿಕ ಸಂಪರ್ಕಾಧಿಕಾರಿ
**ವೈ. ಮಹಾಂಕಾಳಪ್ಪ**

ಸಹಾಯಕ ಸಂಪಾದಕರು
**ಡಾ॥ ಎಂ.ಎಸ್.ಮಂಜುನಾಥ**

ವ್ಯವಸ್ಥಾಪಕರು
**ಹೆಚ್.ಬಿ. ಗುರುಸ್ವಾಮಿ**

**ವಾರ್ಷಿಕ ಚಂದಾ**
ವ್ಯಕ್ತಿಗಳಿಗೆ ರೂ. 100/–
ಸಂಸ್ಥೆಗಳಿಗೆ ರೂ 120/–
ಬಿಡಿ ಪ್ರತಿ ರೂ. 10/–
ಚಂದಾ ಹಣವನ್ನು ಮನಿಯಾರ್ಡರ್ ಮೂಲಕ
ನಿಮ್ಮ ಸ್ಪಷ್ಟ ಅಂಚೆ ವಿಳಾಸ ಪಿನ್ ಕೋಡ್‌ನೊಂದಿಗೆ
ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು




**ಕಛೇರಿ ವಿಳಾಸ**
ಸಂಪಾದಕರು, ಕರ್ನಾಟಕ ವಿಕಾಸ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ1
ಬಹುಮಹಡಿಗಳ ಕಟ್ಟಡ, ಅಂಬೇಡ್ಕರ್ ವೀಧಿ
ಬೆಂಗಳೂರು – 560 001.
ದೂರವಾಣಿ : 080–22353857
www.rdpr.kar.nic.in
email : kvrdpr@gmail.com



**ವಿಶೇಷ ಸೂಚನೆ**
ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ
ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು
ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು

ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ
ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.







**ಮಾನ್ಯರೆ,**

'ಕರ್ನಾಟಕ ವಿಕಾಸ' ಮಾಸ ಪತ್ರಿಕೆಯು ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದ ಹಲವು ವಿಷಯಗಳನ್ನು ಹೊತ್ತುಕೊಂಡು ಸುಂದರವಾಗಿ ಮೂಡಿಬರುತ್ತಿದೆ. ಗ್ರಾಮ ಸಭೆಗೆ ಹೊಸ ಭಾಷ್ಯ ಬರೆದ 'ಕಾವಳಮೂಡೂರು' ಗ್ರಾಮ ಪಂಚಾಯತ್‌ನ ಯಶೋಗಾಥೆ ವಿಧಾನ ಮಂಡಲದ ಅಧಿವೇಶನವನ್ನೇ ನಾಚಿಸುವಂತೆ ಮಾಡಿದೆ. ಗ್ರಾಮ ಸಭೆಯಲ್ಲಿ ಅರ್ಥಪೂರ್ಣ ಚರ್ಚೆ ಹಾಗೂ ಭ್ರಷ್ಟಾಚಾರ ಮುಕ್ತ ಆಡಳಿತ ನಡೆಸಲು ಸಂಕಲ್ಪತೊಟ್ಟಿರುವುದು ನಿಜಕ್ಕೂ ಐತಿಹಾಸಿಕ ಘಟನೆಯೇ ಸರಿ.

ರಾಷ್ಟ್ರ ಧ್ವಜದ ಘನತೆಗೆ ಚ್ಯುತಿ ತರುವ ಘಟನೆಗಳು ಅಲ್ಲಲ್ಲಿ ನಡೆಯುತ್ತಿರುವ ಸಂಧರ್ಭದಲ್ಲಿ ಇಲಾಖೆಯ ಮುಖ್ಯಸ್ಥರು ಎಚ್ಚರಿಕೆಯಿಂದ ಸಂದೇಶ ರವಾನಿಸಿರುವುದು ಸಮಯೋಚಿತವಾಗಿದೆ. ಪಾಪುರವರ 'ಬದುಕುವ ಮಾತಿಲ್ಲ'ದೆ ಪತ್ರಿಕೆ ಕಳೆಗುಂದಿರುವಂತಿದೆ. ಆದ್ದರಿಂದ 'ಬದುಕುವ ಮಾತು' ಅಂಕಣವನ್ನು ಪುನಃ ಆರಂಭಿಸುವಂತೆ ವಿನಂತಿ

**ಸೋಮಶೇಖರಗೌಡ ಎ.ಸಿ.**
ಸಾ॥ ನಿಡಗುಂದಿ ತಾ॥ ರೋಣ, ಗದಗ

ಆಗಸ್ಟ್ 2014ರ ಕರ್ನಾಟಕ ವಿಕಾಸದಲ್ಲಿ ಡಾ॥ ಲಕ್ಷ್ಮೀಶ್ ಡಿ.ಆರ್ ಬರೆದಂತಹ ಆರೋಗ್ಯ ವಿಭಾಗದಲ್ಲಿನ ಲೇಖನ ಆರೋಗ್ಯ ಕಾಯ್ದುಕೊಳ್ಳುವವರಿಗೆ ದಾರಿದೀಪದಂತಿದೆ. ಮನೆಯಲ್ಲಿಯೇ ಸ್ಥೂಲಕಾಯದವರು ತೂಕವನ್ನು ಇಳಿಸಿಕೊಳ್ಳುವ ಸರಳ ಸುಲಭ ವಿಧಾನ ಲಾಭದಾಯಕವೇ ಸರಿ. ಆರೋಗ್ಯವೇ ಭಾಗ್ಯವೆಂಬ ವಿಚಾರಕ್ಕೆ ಪೂರಕವಾದ ಲೇಖನ, ಚಿಂತನೆ, ಸಕಾಲ ವರದಿ ಹಾಗೂ ಸುತ್ತೋಲೆಗಳು ಜನಸಾಮಾನ್ಯರಿಗೆ ಮಾಹಿತಿಯ ಕಣಜವಾಗಿವೆ. ಅಭಿವೃದ್ಧಿ ಅಧಿಕಾರಿಗಳ ಅಂಗಳದಿಂದ ಎಂಬ ಸ್ಥಿರ ಶೀರ್ಷಿಕೆಗೆ ಸ್ವಾಗತ. ಗ್ರಾಮೀಣಾಭಿವೃದ್ಧಿಯೇ ನಮ್ಮ ದೇಶದ ಸಮೃದ್ಧಿ.

**ಕೊತ್ತಲ ಮಹದೇವಪ್ಪ**
ಲೇಖಕ, ವಿನಾಯಕನಗರ
ಲಕ್ಷ್ಮೇಶ್ವರ, ಗದಗ – 582 116

ಕೇವಲ ಇಲಾಖೆ ಕಾರ್ಯಕ್ರಮಗಳು, ಕಾಮಗಾರಿಗಳಂತಹ ವಿಶೇಷ ಯೋಜನೆಗಳ ಮಾಹಿತಿಯನ್ನಷ್ಟೆ ಒದಗಿಸದೆ ಸಾರ್ವಜನಿಕರಿಗೆ ವಿಶೇಷವಾಗಿ ನಮ್ಮಂತಹ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಣಿಯಾಗುತ್ತಿರುವ ಅನೇಕ ಯುವ ಜನತೆಗೂ ನೆರವಾಗುತ್ತಿರುವ 'ಕರ್ನಾಟಕ ವಿಕಾಸ' ಪತ್ರಿಕೆಯು ಒಂದು ಬಹುಮುಖ ಪತ್ರಿಕೆಯಾಗಿದ್ದು ಇದರಲ್ಲಿ ಬಿತ್ತರಗೊಳ್ಳುವ ಪ್ರತಿಯೊಂದು ವಿಷಯಗಳು ಅತ್ಯಂತ ಉಪಯುಕ್ತವಾಗಿದೆ. ಸ್ಥಳೀಯ ಸಂಸ್ಥೆಗಳ ಕುರಿತು ಅವುಗಳ ರಚನೆ, ಕಾರ್ಯನಿರ್ವಹಣೆ ಮತ್ತು ಸಿಬ್ಬಂದಿ ವರ್ಗಗಳ ಕುರಿತಾಗಿ ಪ್ರಾಯೋಗಿಕ ಜ್ಞಾನ ನೀಡುವಂತಹ ಈ ಜ್ಞಾನ ಸುಧೆಗೆ ನನ್ನ ಅನಂತ ಧನ್ಯವಾದಗಳು.

**ಪರಮೇಶ್ವರ ನಾರಾಯಣ ಆಚಾರಿ**
ಮನೆ ನಂ.89, ಕಸ್ತೂರ ಬಾ ನಗರ
ಚಿಪಗಿ ಪೋ, ಶಿರಸಿ ತಾ, ಉ.ಕನ್ನಡ.

## ಸಚಿವಾಲಯದಿಂದ ಸಂದೇಶ



ಟಿ.ಎಂ. ವಿಜಯಭಾಸ್ಕರ್, ಭಾ.ಆ.ಸೇ
ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ

ಕರ್ನಾಟಕ ಸರ್ಕಾರ ಸಚಿವಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಬಹುಮಹಡಿ ಕಟ್ಟಡ, ಬೆಂಗಳೂರು.

ಪ್ರಿಯ ಬಂಧುಗಳೇ,

**ತೆರೆದ ಕೊಳವೆ ಬಾವಿಗಳು;**
**ದುರಂತಗಳು ಮರುಕಳಿಸದಿರಲಿ . . . .**

ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಖಾಸಗಿ ವ್ಯಕ್ತಿಗಳಿಂದ ಜಮೀನಿನ ನೀರಾವರಿಗಾಗಿ ಅಥವಾ ವಿವಿಧ ಸರ್ಕಾರಿ ಸ್ವಾಮ್ಯ ಸಂಸ್ಥೆ / ಇಲಾಖೆಗಳಿಂದ ಗ್ರಾಮೀಣ ನೀರು ಪೂರೈಕೆಗಾಗಿ ಕೊರೆದ ಕೊಳವೆ ಬಾವಿಗಳು ಹಲವಾರು ಸಂದರ್ಭಗಳಲ್ಲಿ ನೀರಿಲ್ಲದೆ ಅನುಪಯುಕ್ತವಾಗುತ್ತದೆ. ಇಂತಹ ತೆರೆದ ಕೊಳವೆ ಬಾವಿಗಳನ್ನು ಬೇಜವಾಬ್ದಾರಿತನದಿಂದ ಸಮರ್ಪಕವಾಗಿ ಮುಚ್ಚದೆ ಇರುವುದರಿಂದ ಏನೂ ಅರಿಯದ ಮುಗ್ಧ ಕಂದಮ್ಮಗಳು ತೆರೆದ ಕೊಳವೆ ಬಾವಿಗಳಲ್ಲಿ ಬಿದ್ದು ಜೀವ ಕಳೆದುಕೊಂಡ ಅವಘಡಗಳು ಇತ್ತೀಚೆಗಷ್ಟೆ ನಡೆದಿದ್ದು ನಿಜಕ್ಕೂ ವಿಷಾದನೀಯ. ಇದು ಅತ್ಯಂತ ಗಂಭೀರವಾದ ವಿಷಯ.

ಇಂತಹ ಅವಘಡಗಳನ್ನು ತಡೆಗಟ್ಟುವ ಸಲುವಾಗಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ವಿಫಲ/ನಿರುಪಯುಕ್ತ ಕೊಳವೆ ಬಾವಿಗಳನ್ನು ಸುರಕ್ಷಿತವಾಗಿ ಮುಚ್ಚುವ ಕುರಿತು ಅನುಸರಿಸಬೇಕಾದ ಕ್ರಮಗಳ ಬಗ್ಗೆ ಸರ್ಕಾರಿ ಆದೇಶದೊಂದಿಗೆ ಈಗಾಗಲೇ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಅಧ್ಯಕ್ಷರು, ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳ ಗಮನಕ್ಕೆ ತರಲಾಗಿದೆ. ಆದ್ದರಿಂದ ಮತ್ತೊಮ್ಮೆ ತೆರೆದ ಕೊಳವೆ ಬಾವಿ ದುರಂತಗಳು ಸಂಭವಿಸದಂತೆ ಎಚ್ಚರಿಕೆ ವಹಿಸಬೇಕಾಗಿದ್ದು ನಮ್ಮೆಲ್ಲಾ ಅಧಿಕಾರಿ ಸಿಬ್ಬಂದಿಗಳ ಗುರುತರ ಜವಾಬ್ದಾರಿಯಾಗಿದ್ದು, ಸ್ಥಳೀಯ ಜಿಲ್ಲಾಧಿಕಾರಿಗಳು ಮತ್ತು ಅವರ ವ್ಯಾಪ್ತಿಯಲ್ಲಿ ಬರುವ ಸಂಬಂಧಿಸಿದ ನಿಯಂತ್ರಣಾಧಿಕಾರಿಗಳ ಕರ್ತವ್ಯವೂ ಹೌದು. ಅಗತ್ಯ ಮುನ್ನೆಚ್ಚರಿಕೆ ಹಾಗೂ ಸುರಕ್ಷತಾ ಕ್ರಮಗಳು ಅನುಷ್ಠಾನಗೊಂಡಿರುವ ಬಗ್ಗೆ ಪ್ರತಿ ಮಾಹೆ

ಖಾತ್ರಿಪಡಿಸಿಕೊಳ್ಳಲು ಸ್ಥಳೀಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾವಾರು ಸಮಿತಿಯನ್ನು ಸಹ ರಚಿಸಲಾಗಿದೆ. ಸಂಬಂಧಿಸಿದಂತೆ ವಿವರಗಳನ್ನು ಈ ಸಂಚಿಕೆಯ 'ಸುತ್ತೋಲೆ' ವಿಭಾಗದಲ್ಲಿ ಪ್ರಕಟಿಸಲಾಗಿದೆ.

**"ನಿರುಪಯುಕ್ತ / ವಿಫಲವಾದ ಕೊಳವೆಬಾವಿಗಳನ್ನು ಮುಚ್ಚಿಸಿ, ಮಕ್ಕಳು ಅದರಲ್ಲಿ ಬೀಳುವುದನ್ನು ತಪ್ಪಿಸಿ".** . . . . ಎಂಬ ಸಂದೇಶವನ್ನು ಎಲ್ಲಾ ಗ್ರಾಮ ಮತ್ತು ತಾಲ್ಲೂಕು ಪಂಚಾಯತಿಗಳು ಪ್ರತಿ ಜನವಸತಿ ಪ್ರದೇಶಗಳಲ್ಲಿ ಗೋಡೆ ಬರಹಗಳನ್ನು ಬರೆಸಿ ಜನರಿಗೆ ಅರಿವು ಮೂಡಿಸಲು ಕ್ರಮ ಕೈಗೊಳ್ಳಬೇಕು. ಇಂತಹ ದುರಂತಗಳನ್ನು ತಪ್ಪಿಸುವಲ್ಲಿ ಸಾರ್ವಜನಿಕರ ಸಹಕಾರ ಅತ್ಯಂತ ಮಹತ್ವದ್ದಾಗಿರುತ್ತದೆ. ಆದ್ದರಿಂದ ಸರ್ಕಾರಿ ಅಥವಾ ಖಾಸಗಿ ಅಸುರಕ್ಷಿತ ಕೊಳವೆ ಬಾವಿ / ತೆರೆದ ಬಾವಿ ಕಂಡುಬಂದಲ್ಲಿ ಸಾರ್ವಜನಿಕರು ಸ್ಥಳೀಯ ಪಂಚಾಯತಿ ಅಧಿಕಾರಿಗಳ ಗಮನಕ್ಕೆ ತರಬೇಕು. ಈ ಬಗ್ಗೆ ಮತ್ತಷ್ಟು ಮುನ್ನೆಚ್ಚರಿಕೆ ವಹಿಸಿ ಅಗತ್ಯ ಕ್ರಮಗಳನ್ನು ಕೈಗೊಂಡು ಮುಗ್ಧ ಜೀವಗಳ ಬಲಿಯನ್ನು ತಡೆಗಟ್ಟಲು ನಿಮ್ಮೆಲ್ಲರ ಸಹಕಾರವಿರಲಿ.

## ನಿರುಪಯುಕ್ತ ಕೊಳವೆ ಬಾವಿಗಳಿಗೆ ಮರುಪೂರಣ ವ್ಯವಸ್ಥೆಯಾಗಲಿ . . . .

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನಿರುಪಯುಕ್ತ ಕೊಳವೆ ಬಾವಿಗಳಿಗೆ ಅಂತರ್ ಜಲ ಮರುಪೂರಣ ಗುಂಡಿ (Soak pits) ನಿರ್ಮಾಣ ಮಾಡಲು ಅವಕಾಶ ಕಲ್ಪಿಸಲಾಗಿದೆ. ಪ್ರತಿ ಗ್ರಾಮ ಪಂಚಾಯತಿಗೆ ಇಂತಹ ನಿರುಪಯುಕ್ತ ಕೊಳವೆ ಬಾವಿಗಳಿಗಾಗಿ ಮರುಪೂರಣ ವ್ಯವಸ್ಥೆಯನ್ನು ಕೈಗೊಳ್ಳಲು ಕಾಮಗಾರಿ ವಿವರಗಳನ್ನು ಈಗಾಗಲೇ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನೀಡಲಾಗಿದ್ದು, ನಿಯಮಾನುಸಾರ ಗ್ರಾಮ ಸಭೆ ಅನುಮೋದನೆ ಪಡೆದು ಅಗತ್ಯ ಕ್ರಮ ಕೈಗೊಳ್ಳುತ್ತೀರೆಂದು ಆಶಿಸುತ್ತೇನೆ.

(ಟಿ.ಎಂ. ವಿಜಯಭಾಸ್ಕರ್)

ಮುಖಪುಟ ವರದಿ

# ರಾಜೀವ್ ಗಾಂಧಿ ಚೈತನ್ಯ ಯೋಜನೆಯಡಿ ಗದಗ ಜಿಲ್ಲಾಮಟ್ಟದ ಉದ್ಯೋಗ ಮೇಳ-2014

ನಿರುದ್ಯೋಗಿ ಯುವಜನತೆಗೆ ಉದ್ಯೋಗ ಕಲ್ಪಿಸಿ ಸ್ವಾವಲಂಬಿಗಳನ್ನಾಗಿ ಮಾಡುವುದು ಸರ್ಕಾರದ ಪ್ರಮುಖ ಧ್ಯೇಯ

'ನಿರುದ್ಯೋಗಿ ಯುವಜನತೆ ದೇಶಕ್ಕೆ ಹೊರೆ ಅಲ್ಲ. ಅವಕಾಶ ಒದಗಿಸಿದಲ್ಲಿ ಅವರು ದೇಶದ ಆಸ್ತಿಯಾಗಿರುವುದರಲ್ಲಿ ಯಾವುದೇ ಸಂಶಯವಿಲ್ಲ'. ಈ ಹಿನ್ನೆಲೆಯಲ್ಲಿ ನಮ್ಮ ರಾಜ್ಯದಲ್ಲಿ "ರಾಜೀವ್ ಗಾಂಧಿ ಚೈತನ್ಯ ಯೋಜನೆ"ಯಡಿ ಒಟ್ಟು 2 ಲಕ್ಷ ಯುವ ಜನತೆಗೆ ಉದ್ಯೋಗ ಕಲ್ಪಿಸಲು ತೀರ್ಮಾನಿಸಲಾಗಿದೆ. ಇದಕ್ಕಾಗಿಯೇ ರಾಜ್ಯದ 5,629 ಗ್ರಾಮ ಪಂಚಾಯಿತಿಗಳಿಂದ ಒಟ್ಟಾರೆ 1.62 ಲಕ್ಷ ಯುವ ಜನತೆಯನ್ನು ಈಗಾಗಲೇ ಸ್ವಉದ್ಯೋಗ ಮತ್ತು ಕೌಶಲ್ಯಾಧಾರಿತ ತರಬೇತಿಯೊಂದಿಗೆ ಉದ್ಯೋಗ ಕಲ್ಪಿಸಲು ಗುರುತಿಸಲಾಗಿದೆ. ಗದಗ ಜಿಲ್ಲೆಯಿಂದ 1,076 ಯುವಜನತೆ ಕೌಶಲ್ಯಾಧಾರಿತ ತರಬೇತಿಯೊಂದಿಗೆ ಉದ್ಯೋಗ ಕಲ್ಪಿಸುವ ಕಾರ್ಯಕ್ರಮಕ್ಕೆ ಆಯ್ಕೆಯಾಗಿರುತ್ತಾರೆ. ಈ ಯುವ ಜನತೆಗೆ ಉದ್ಯೋಗ ಒದಗಿಸಲು 30ಕ್ಕೂ ಅಧಿಕ ಸಂಸ್ಥೆಗಳು ಇಂದು ನಮ್ಮ ಜಿಲ್ಲಾ ಮಟ್ಟದ ಉದ್ಯೋಗ ಮೇಳದಲ್ಲಿ ಭಾಗವಹಿಸಿರುವುದು ನಿಜಕ್ಕೂ ಒಂದು ಆಶಾದಾಯಕ ಸಂಗತಿಯಾಗಿದೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಎಚ್.ಕೆ.ಪಾಟೀಲರವರು ಗದಗದಲ್ಲಿ ದಿನಾಂಕ:14.08.2014ರಂದು ನಡೆದ ಜಿಲ್ಲಾ ಮಟ್ಟದ ಉದ್ಯೋಗ ಮೇಳವನ್ನು ಉದ್ಘಾಟಿಸಿ ಮಾತನಾಡಿದರು.




ಯೋಜನಾ ನಿರ್ದೇಶಕರು (ಡಿಆರ್‌ಡಿಎ) ಜಿಲ್ಲಾ ಪಂಚಾಯತ್, ಗದಗ

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ವತಿಯಿಂದ ಕರ್ನಾಟಕ ರಾಜ್ಯ ಜೀವನೋಪಾಯ ಸಂವರ್ಧನಾ ಸಂಸ್ಥೆ – ಸಂಜೀವಿನಿ, ಗದಗ ಜಿಲ್ಲಾ ಪಂಚಾಯತ್ ವತಿಯಿಂದ 'ರಾಜೀವ್ ಗಾಂಧಿ ಚೈತನ್ಯ ಯೋಜನೆ'ಯಡಿ ಪ್ರಪ್ರಥಮ ಬಾರಿಗೆ ಜಿಲ್ಲಾಮಟ್ಟದ ಉದ್ಯೋಗ ಮೇಳವನ್ನು ಗದಗ ಪಟ್ಟಣದ ಹೆಚ್.ಸಿ.ಇ.ಎಸ್ ಪದವಿ ಕಾಲೇಜಿನ ಆವರಣದಲ್ಲಿ ನಡೆಸಲಾಯಿತು.



**ಹಿನ್ನೆಲೆ :** ಗ್ರಾಮೀಣ ಪ್ರದೇಶದ ಯುವಜನರಿಗೆ ಸ್ವ-ಉದ್ಯೋಗ ಮತ್ತು ವೃತ್ತಿಪರ ಕೌಶಲ್ಯ ತರಬೇತಿ ನೀಡಿ ಉದ್ಯೋಗ ಕಲ್ಪಿಸುವ ಮಹತ್ವಾಕಾಂಕ್ಷೆಯಿಂದ ರಾಜೀವ್ ಗಾಂಧಿ ಚೈತನ್ಯ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಪ್ರತಿ ವರ್ಷ 2 ಲಕ್ಷ ಫಲಾನುಭವಿಗಳು (ಪ್ರತಿ ಗ್ರಾಮ ಪಂಚಾಯ್ತಿಯಿಂದ 40 ರಂತೆ) ಯುವ ಫಲಾನುಭವಿಗಳನ್ನು ಗ್ರಾಮ ಸಭೆಯ ಮೂಲಕ ಗುರುತಿಸಿ, ಅದರಲ್ಲಿ 1 ಲಕ್ಷ ಯುವ ಜನತೆಗೆ ಸ್ವ-ಉದ್ಯೋಗ ಹಾಗೂ 1 ಲಕ್ಷ ಯುವ ಜನತೆಗೆ ಕೌಶಲ್ಯ ತರಬೇತಿಯೊಂದಿಗೆ ಉದ್ಯೋಗ ಕಲ್ಪಿಸಲು ಯೋಜಿಸಲಾಗಿದೆ.

**ಗದಗ ಉದ್ಯೋಗ ಮೇಳದ ಉದ್ದೇಶ :** ಈಗಾಗಲೇ 2013-14ನೇ ಸಾಲಿನಲ್ಲಿ ಕೌಶಲ್ಯಾಧಾರಿತ ತರಬೇತಿಯೊಂದಿಗೆ ಉದ್ಯೋಗವನ್ನು ಆಯ್ಕೆ ಮಾಡಿಕೊಂಡಿರುವ ಫಲಾನುಭವಿಗಳಿಗೆ ಯೋಜನಾ ಅನುಷ್ಠಾನ ಸಂಸ್ಥೆಗಳ ಮೂಲಕ ಕೌಶಲ್ಯಾಧಾರಿತ ತರಬೇತಿಯೊಂದಿಗೆ ಉದ್ಯೋಗ ಕಲ್ಪಿಸಲು ಅವಕಾಶ ಮಾಡಿಕೊಡುವುದು. ಈ ಉದ್ಯೋಗ ಮೇಳವನ್ನು ಸಂಜೀವಿನಿ-ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆಯು ಗದಗ ಜಿಲ್ಲಾ ಪಂಚಾಯತಿ ಸಹಯೋಗದಿಂದ ಏರ್ಪಡಿಸಲಾಗಿತ್ತು.

**ಉದ್ಯೋಗ ಮೇಳಕ್ಕೆ ಹಾಜರಾದ ಹಾಗೂ ಆಯ್ಕೆಯಾದ ಫಲಾನುಭವಿಗಳ ವಿವರ**

| ಕ್ರ.ಸಂ | ತಾಲ್ಲೂಕು | ಒಟ್ಟು | ಹಾಜರಾಗಿದ್ದವರ ಸಂಖ್ಯೆ | ಆಯ್ಕೆಯಾದವರ ಸಂಖ್ಯೆ |
|---|---|---|---|---|
| 1 | ಗದಗ | 354 | 271 | 125 |
| 2 | ಮುಂಡರಗಿ | 97 | 81 | 42 |
| 3 | ನರಗುಂದ | 177 | 121 | 71 |
| 4 | ರೋಣ | 216 | 152 | 100 |
| 5 | ಶಿರಹಟ್ಟಿ | 232 | 195 | 120 |
| | ಒಟ್ಟು | 1076 | 820 | 458 |

ಯುವಜನರಿಗೆ ಆತ್ಮವಿಶ್ವಾಸ ತುಂಬುವ ಕೆಲಸವಾಗಬೇಕಿದೆಯೆಂದು ತಿಳಿಸಿದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಸಂಜೀವಿನಿ ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಯ ಅಭಿಯಾನ ನಿರ್ದೇಶಕರಾದ ಶ್ರೀ ಡಿ.ವಿ. ಸ್ವಾಮಿರವರು ರಾಜೀವ್ ಗಾಂಧಿ ಚೈತನ್ಯ ಯೋಜನೆ ಚಿಗುರೊಡೆದದ್ದು ಗದಗ ಜಿಲ್ಲೆಯಲ್ಲಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಕನಸಿನ ಸಾಕಾರ ರೂಪದಲ್ಲಿ ಈ ಯೋಜನೆಯಿಂದ ಗ್ರಾಮೀಣ ಯುವಜನತೆಗೆ ಉತ್ತಮ ಭವಿಷ್ಯ ರೂಪಿಸುವುದು ಇದರ ಪ್ರಮುಖ



ಉದ್ಯೋಗ ಮೇಳದ ಅಧ್ಯಕ್ಷತೆಯನ್ನು ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಶಾಂತವ್ವಾ ದಂಡಿನ ವಹಿಸಿದ್ದರು. ಶಿರಹಟ್ಟಿ ಶಾಸಕರಾದ ಶ್ರೀ ರಾಮಕೃಷ್ಣ ದೊಡ್ಡಮನಿ ಮಾತನಾಡಿ ಜನಸಂಖ್ಯೆ ಹೆಚ್ಚಳದಿಂದ ಆಗುತ್ತಿರುವ ಸಮಸ್ಯೆ ಪರಿಹಾರಕ್ಕೆ ಗ್ರಾಮೀಣ ಭಾಗದಲ್ಲಿರುವ ದೇಶದ ಶೇ.70ಕ್ಕೂ ಹೆಚ್ಚು ಉದ್ದೇಶವಾಗಿದೆ. ಮಾರುಕಟ್ಟೆಯಲ್ಲಿ ಬೇಡಿಕೆಯಿರುವ ಕೌಶಲ್ಯದ ಕೊರತೆಯನ್ನು ತುಂಬಲು ಇಂದಿನ ಅಗತ್ಯದ ವೃತ್ತಿ ಕೌಶಲ್ಯ ತರಬೇತಿ ನೀಡಲು ಅವಕಾಶ ಒದಗಿಸಲಾಗುತ್ತಿದೆ. ಸರ್ಕಾರದ ಪ್ರಯತ್ನ ಸಫಲವಾಗಲು ಯುವಜನರು ಸಕಾರಾತ್ಮಕವಾದ ಮನೋಭಾವದಿಂದ ಮುಂದಾಗಬೇಕೆಂದು ನುಡಿದರು.

ವರದಿ

# 1000 ನೀರಿನ ಶುದ್ಧೀಕರಣ ಘಟಕಗಳ ಲೋಕಾರ್ಪಣೆ

ಗ್ರಾಮೀಣ ಜನತೆಗೆ ಶುದ್ಧ ಕುಡಿಯುವ ನೀರನ್ನು ಸರಬರಾಜು ಮಾಡಲು ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ವತಿಯಿಂದ 2013–14ನೇ ಸಾಲಿನಲ್ಲಿ 1000 ನೀರಿನ ಶುದ್ಧೀಕರಣ ಘಟಕಗಳ ಸ್ಥಾಪನೆ ಬಗ್ಗೆ ಕಿರು ಹೊತ್ತಿಗೆಯನ್ನು ಸನ್ಮಾನ್ಯ ಮುಖ್ಯ ಮಂತ್ರಿಗಳು ದಿನಾಂಕ 30.07.2014ರಂದು ವಿಧಾನಸೌಧದಲ್ಲಿ ಬಿಡುಗಡೆ ಮಾಡಿದರು.

ರಾಜ್ಯದಲ್ಲಿ 59753 ಜನವಸತಿಗಳಿರುತ್ತವೆ. ಈ ಜನವಸತಿಗಳಿಗೆ ಕುಡಿಯುವ ನೀರನ್ನು ಕೊಳವೆಬಾವಿಗಳನ್ನು ಕೊರೆದು PWS, MWS, BWHP ಗಳ ಮೂಲಕ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಈ ಕೊಳವೆ ಬಾವಿಗಳನ್ನು ಜಲಮೂಲವಾಗಿ ಪರಿಗಣಿಸಿದಾಗ, ಇದರಲ್ಲಿ ರಾಸಾಯನಿಕ ಕಲುಷಿತೆಯನ್ನು (Chemical Contamination) ಹೊಂದಿರುತ್ತದೆ. ಈ ರಾಸಾಯನಿಕ ಕಲುಷಿತೆಯು ಫ್ಲೋರೈಡ್, ಕಬ್ಬಿಣಾಂಶ, ನೈಟ್ರೇಟ್, ಗಡಸುತನವನ್ನು ಹೊಂದಿರುತ್ತದೆ. ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ರಾಸಾಯನಿಕ ಕಲುಷಿತೆ ಹೊಂದಿರುವ ಜನವಸತಿಗಳ ವಿವರಗಳು ಕೆಳಕಂಡಂತಿವೆ:

| ದಿನಾಂಕ | ಫ್ಲೋರೈಡ್ | ಕಬ್ಬಿಣಾಂಶ | ನೈಟ್ರೇಟ್ | ಗಡಸುತನ |
|---|---|---|---|---|
| 01.04.2011ರ ಅಂತ್ಯಕ್ಕೆ | 3114 | 1813 | 1769 | 861 |
| 01.04.2012ರ ಅಂತ್ಯಕ್ಕೆ | 2806 | 938 | 1378 | 734 |
| 01.04.2013ರ ಅಂತ್ಯಕ್ಕೆ | 1503 | 556 | 755 | 377 |



ಗ್ರಾಮೀಣ ಜನತೆಗೆ ಶುದ್ಧ ಕುಡಿಯುವ ನೀರನ್ನು ಸರಬರಾಜು ಮಾಡಲು ಸರ್ಕಾರ ಶುದ್ಧ ಕುಡಿಯುವ ನೀರು ಸರಬರಾಜು ಘಟಕಗಳನ್ನು ಸ್ಥಾಪಿಸುತ್ತಿದೆ

ರಾಸಾಯನಿಕ ಕಲುಷಿತತೆ ಹೊಂದಿದ ನೀರನ್ನು ಕುಡಿಯುವುದರಿಂದ ಫ್ಲೋರೊಸಿಸ್, ಬ್ಲೂಬೇಬಿ ಸಿಂಡ್ರೋಮ್, ಅಜೀರ್ಣ ಮುಂತಾದ ಕಾಯಿಲೆಗಳು ಬರುತ್ತವೆ. ಈ ರಾಸಾಯನಿಕಗಳು BIS–10500–2012 ರಲ್ಲಿ ನಿಗಧಿಪಡಿಸಿರುವ ಮಿತಿಯಲ್ಲಿ ಇರಬೇಕಾಗುತ್ತದೆ. ಆದುದರಿಂದ, ಮಿತಿಗಿಂತ ಹೆಚ್ಚಾಗಿರುವ ರಾಸಾಯನಿಕ ಅಂಶಗಳನ್ನು ತೆಗೆಯಲು ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅಳವಡಿಸಲು ಕ್ರಮಕೈಗೊಳ್ಳಲಾಗುತ್ತಿದೆ.

ಇದಲ್ಲದೆ ಮೇಲ್ಮೈ ಜಲಮೂಲ ಲಭ್ಯತೆಯಿರುವ ಕಡೆಗಳಲ್ಲಿ ನದಿ, ಕಾಲುವೆ, ಕೆರೆಗಳನ್ನು ಉಪಯೋಗಿಸಿಕೊಂಡು ಅವುಗಳ ನೀರನ್ನು ಶುದ್ಧೀಕರಿಸಿ ರಾಸಾಯನಿಕ ಕಲುಷಿತ ಹೊಂದಿರುವ ಜನವಸತಿಗಳಿಗೆ ನೀಡಲು 365 ಬಹುಗ್ರಾಮ ಯೋಜನೆಗಳನ್ನು ರಾಜ್ಯದಲ್ಲಿ ರೂಪಿಸಲಾಗಿದೆ. ಮೇಲ್ಮೈ ಜಲಮೂಲಗಳು ಇಲ್ಲದ ಜಿಲ್ಲೆಗಳಲ್ಲಿ ಅಂತರ್ಜಲವನ್ನೇ




**ಸದ್ಯದ ಪರಿಸ್ಥಿತಿ:**

2002–03ರಲ್ಲಿ ಸುಮಾರು 100 ಶುದ್ಧೀಕರಣ ಘಟಕಗಳನ್ನು ಅಳವಡಿಸಲಾಗಿತ್ತು. ಈ ಘಟಕಗಳು ಸರಿಯಾದ ನಿರ್ವಹಣೆ ಇಲ್ಲದ ಕಾರಣ ಹಾಳಾಗಿರುತ್ತವೆ. ಇವುಗಳನ್ನು ದುರಸ್ತಿಗೊಳಿಸಿ ಕಾರ್ಯಾಚರಣೆಗೆ ತರಲಾಗಿದೆ. ತದನಂತರದಲ್ಲಿ 2011–12 ಹಾಗೂ 2012–13ನೇ ಸಾಲಿನಲ್ಲಿ 687 ಘಟಕಗಳನ್ನು ಅಳವಡಿಸಲು ಕ್ರಮಕೈಗೊಂಡಿದೆ.

ಅವಲಂಬಿಸಬೇಕಾಗಿದ್ದು, ಶಾಶ್ವತ ಪರಿಹಾರ ನೀಡುವವರೆಗೆ ತಾತ್ಕಾಲಿಕವಾಗಿ ಕುಡಿಯುವ ನೀರಿನಲ್ಲಿರುವ ರಾಸಾಯನಿಕಗಳನ್ನು ತೆಗೆಯಲು ಶುದ್ಧ ಕುಡಿಯುವ ನೀರಿನ ಘಟಕಗಳ ಅವಶ್ಯಕತೆಯಿರುತ್ತದೆ. ರಾಸಾಯನಿಕಯುಕ್ತ ನೀರನ್ನು ಕುಡಿದು ಜನರ ಆರೋಗ್ಯದ ಮೇಲಾಗುವ ದುಷ್ಪರಿಣಾಮವನ್ನು ತಡೆಯಲು ಶುದ್ಧ ನೀರಿನ ಘಟಕಗಳನ್ನು ಅಂತಹ ಜನವಸತಿಗಳಲ್ಲಿ ಅಳವಡಿಸಬೇಕಾಗುತ್ತದೆ.



## ಸರ್ಕಾರದ ಇಚ್ಛಾಶಕ್ತಿ:

ರಾಸಾಯನಿಕ ಕಲುಷಿತ ಹೊಂದಿರುವ ಜನವಸತಿಗಳ ಕುಡಿಯುವ ನೀರಿನಲ್ಲಿರುವ ಅಧಿಕ ಫ್ಲೋರೈಡ್, ಆರ್ಸೆನಿಕ್ ಹಾಗೂ ಇತರೆ ಕಲುಷಿತ ನೀರನ್ನು ಶುದ್ಧೀಕರಿಸಿ, ಶುದ್ಧ ಕುಡಿಯುವ ನೀರಿನ ಪೂರೈಕೆಗಾಗಿ 1000–ನೀರು ಶುದ್ಧೀಕರಣ ಘಟಕಗಳನ್ನು ಅಳವಡಿಸಲು ರಾಜ್ಯ ಸರ್ಕಾರವು 2013–14ರ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿದ್ದು, ಈ ರೀತ್ಯಾ ಕಾರ್ಯೋನ್ಮುಖವಾಗಿದೆ.

ನಗರ ಪ್ರದೇಶಗಳಿಗೆ ನೀಡುವಂತೆ, ಗ್ರಾಮೀಣ ಪ್ರದೇಶದಲ್ಲಿರುವ ಜನತೆಗೂ ಶುದ್ಧೀಕರಿಸಿದ ನೀರನ್ನು ಒದಗಿಸಲು ಸರ್ಕಾರ ಬದ್ಧವಾಗಿದೆ. ರಾಜ್ಯದಲ್ಲಿ ಫ್ಲೋರೈಡ್, ಆರ್ಸೆನಿಕ್ & ನೈಟ್ರೇಟ್ ಮತ್ತಿತರ ವಿಷಕಾರಕ ಅಂಶಗಳನ್ನು ಹೊಂದಿರುವ 5875 ಗ್ರಾಮಗಳಿದ್ದು, ನೀರಿನ ಸಮಸ್ಯೆಗಳನ್ನು ಎದುರಿಸುತ್ತಿರುವ ಗ್ರಾಮಗಳಲ್ಲಿ ಗದಗ ಜಿಲ್ಲೆಯಲ್ಲಿ ಅಳವಡಿಸಿರುವ ಶುದ್ಧೀಕರಣ ಘಟಕಗಳ ಮಾದರಿಯಲ್ಲಿ ನೀರು ಶುದ್ಧೀಕರಣ ಘಟಕಗಳನ್ನು ಅಳವಡಿಸಲು ಕ್ರಮ ಕೈಗೊಂಡಿದೆ. ಈ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರ 2013–14ರ ಆಯವ್ಯಯದಲ್ಲಿ ರೂ.1,400.00 ಕೋಟಿಗಳನ್ನು ಒದಗಿಸಿದೆ.

## ಯೋಜನೆಯ ಮಹತ್ವ:

ಶುದ್ಧ ನೀರಿನ ಘಟಕಗಳನ್ನು ಸ್ಥಾಪಿಸಿ, ಶುದ್ಧ ನೀರು ಪೂರೈಸುವುದರಿಂದ ಅಶುದ್ಧ ನೀರಿನಿಂದಾಗಿ ಬರುವ ರೋಗಗಳನ್ನು ತಡೆಗಟ್ಟಿ ಜನರನ್ನು ಆರೋಗ್ಯವಂತರನ್ನಾಗಿ ಮಾಡಬಹುದಾಗಿದೆ. ಜನರಿಗೆ ಅವಶ್ಯಕವಾದ ಮೂಲಭೂತ ಬೇಡಿಕೆಯನ್ನು ಸರ್ಕಾರವು ಪೂರೈಸಬಹುದಾಗಿದೆ.

## ಯೋಜನೆಯ ಅನುಷ್ಠಾನ ಮತ್ತು ಪಾರದರ್ಶಕತೆ:

- ಕುಡಿಯುವ ನೀರಿನ ಘಟಕಗಳನ್ನು ಕೇಂದ್ರ ಸರ್ಕಾರದ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಕಾರ್ಯಕ್ರಮದಡಿಯಲ್ಲಿ (NRDWP) ವೆಚ್ಚ ಭರಿಸಿ ಅನುಷ್ಠಾನಗೊಳಿಸಲಾಗುವುದು.

- ವರ್ಷಪೂರ್ತಿ ಶುದ್ಧ ಕುಡಿಯುವ ನೀರು ಒದಗಿಸುವಲ್ಲಿ ಆರ್ಸೆನಿಕ್, ಫ್ಲೋರೈಡ್, ಟಿ.ಡಿ.ಎಸ್, ನೈಟ್ರೇಟ್, ಕಬ್ಬಿಣ, lead, heavy metal, ರಾಸಾಯನಿಕ ಹಾಗೂ ಬ್ಯಾಕ್ಟೀರಿಯಾ ಕಲುಷಿತೆಗಳು ನಿಗದಿತ ಪ್ರಮಾಣ ಮೀರಿದ ಗ್ರಾಮೀಣ ಪ್ರದೇಶಗಳ ಬೋರ್‌ವೆಲ್‌ಗಳ ಬಳಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಲು ಕರ್ನಾಟಕ ಸರ್ಕಾರವು ನಿರ್ಧರಿಸಿದೆ. ಈ ನಿಟ್ಟಿನಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಕರ್ನಾಟಕ ಸರ್ಕಾರ, B.O.T. ಆದಾರದಲ್ಲಿ R.F.P. ಗಳನ್ನು ಆಹ್ವಾನಿಸಿದೆ.

- ಕುಡಿಯುವ ನೀರಿನಲ್ಲಿ ಅಧಿಕ ಫ್ಲೋರೈಡ್, ಆರ್ಸೆನಿಕ್ ಹಾಗೂ ಇತರೆ ಕಲುಷಿತ ನೀರನ್ನು ಹೊಂದಿರುವ ಗ್ರಾಮೀಣ ಜನವಸತಿಗಳಿಗೆ ಶುದ್ಧ ಕುಡಿಯುವ ನೀರಿನ ಪೂರೈಕೆಗಾಗಿ 1000–ನೀರು ಶುದ್ಧೀಕರಣ ಘಟಕಗಳನ್ನು ಅಳವಡಿಸಲು KTPP ನಿಯಮಾನುಸಾರ ಟೆಂಡರ್ ಕರೆಯಲಾಗಿದೆ.

- ಶುದ್ಧ ನೀರಿನ ಘಟಕಗಳನ್ನು ಆರ್ಸೆನಿಕ್, ಫ್ಲೋರೈಡ್, ಟಿ.ಡಿ.ಎಸ್, ನೈಟ್ರೇಟ್, ಕಬ್ಬಿಣ, lead, heavy metal, ರಾಸಾಯನಿಕ ಹಾಗೂ ಬ್ಯಾಕ್ಟೀರಿಯಾ ಕಲುಷಿತೆಗಳು ನಿಗದಿತ ಪ್ರಮಾಣ

ಮೀರಿದ ಜನವಸತಿಗಳಲ್ಲಿ (BIS 10500: 2012 – ಮಾನದಂಡಗಳಂತೆ (Annexure-II) ಸ್ಥಾಪಿಸಬೇಕಾಗುತ್ತದೆ. ಘಟಕಗಳು ಮುಖ್ಯವಾಗಿ ಕುಡಿಯಲು/ಅಡುಗೆ–ಇವುಗಳಿಗೆ ನಿಗದಿತ ನೀರನ್ನು ಒದಗಿಸಬೇಕಾಗುತ್ತದೆ.

- ಘಟಕಗಳ ಸಾಮರ್ಥ್ಯವು ಗಂಟೆಗೆ 500 ಲೀಟರಿನಿಂದ–4000 ಲೀಟರ್‌ಗಳು. ಅನುಬಂಧ–2ರಲ್ಲಿ ಜಲಮೂಲಗಳಿಂದ ಪಡೆದ ಕಚ್ಚಾ ನೀರಿನ ರಾಸಾಯನಿಕ ಕಲುಷಿತೆಗಳ ವಿವರಗಳನ್ನು ಕೊಡಲಾಗಿದೆ. ಆದಾಗ್ಯೂ ಬಿಡ್‌ದಾರರು ಘಟಕಗಳನ್ನು ಸ್ಥಾಪಿಸುವ/ ವಿನ್ಯಾಸಗೊಳಿಸುವ

- ಜನಸಾಮಾನ್ಯರಿಗೆ ಸ್ಥಳದಲ್ಲಿಯೇ ಲೀಟರ್‌ಗೆ 10 ಪೈಸೆಯಂತೆ ಶುದ್ಧೀಕರಿಸಿದ ನೀರನ್ನು ಸರಬರಾಜು ಮಾಡಲಾಗುವುದು. ಆದಾಗ್ಯೂ ಲೀಟರ್‌ಗೆ ರೂ. 10 ಪೈಸೆ ದರವನ್ನು 2ನೇ ವರ್ಷ್ಯಾಂತ್ಯದಲ್ಲಿ ಹಾಗೂ 4ನೇ ವರ್ಷಾಂತ್ಯದಲ್ಲಿ ಪರಿಷ್ಕರಿಸ ಲಾಗುವುದು.(ಘಟಕದ ವಿದ್ಯುತ್ ದರದಲ್ಲಿ ಶೇ.20 ಏರಿಕೆಯಾದಲ್ಲಿ) ಒಪ್ಪಂದವು 7 ವರ್ಷ ಚಾಲ್ತಿಯಲ್ಲಿರುತ್ತದೆ. ನಂತರ ಪೂರ್ಣ ಘಟಕ/ಇನ್‌ಫ್ರಾಸ್ಟ್ರಕ್ಚರ್ ಇಲಾಖೆಗೆ ಹಸ್ತಾಂತರಿಸ ಬೇಕಾಗುತ್ತದೆ. ಅದರಂತೆ ಒಂದು ಸಾವಿರ ಘಟಕಗಳನ್ನು ಅಳವಡಿಸಲು ಕರ್ನಾಟಕ ಸರ್ಕಾರ 2013–14ನೇ ಸಾಲಿನಲ್ಲಿ ಹಮ್ಮಿಕೊಂಡಿದೆ.



ಮೊದಲು ಕಚ್ಚಾ ನೀರನ್ನು ತಮ್ಮ ಪ್ರಯೋಗಾಲಯದಲ್ಲಿಯೇ ವಿಶ್ಲೇಷಣೆ/ ಪರೀಕ್ಷೆಗೊಳಪಡಿಸಬೇಕು.

- ಗ್ರಾಮೀಣ ಜನತೆಗೆ ನೇರವಾಗಿ ಒಂದು ರೂಪಾಯಿ ಮೌಲ್ಯದ ಎರಡು ನಾಣ್ಯಗಳನ್ನು ಆಟೋಮ್ಯಾಟಿಕ್ ನೀರು ಶುದ್ಧೀಕರಣ ಯಂತ್ರದಲ್ಲಿ ಹಾಕುವ ಮೂಲಕ 20 ಲೀಟರ್ ಶುದ್ಧ ಕುಡಿಯುವ ನೀರನ್ನು ಪಡೆದುಕೊಳ್ಳಬಹುದಾಗಿದೆ.

- 1000 ಶುದ್ಧೀಕರಣ ಘಟಕಗಳ ಸಂರಕ್ಷಣಾ ಕೊಠಡಿಗಳ ನಿರ್ಮಾಣದ ಜವಾಬ್ದಾರಿಯನ್ನು ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಗಮದ (KRIDL) ಸಂಸ್ಥೆಗೆ, ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ/86/ಗ್ರಾನೀಸ(5)/2013 (ಭಾ–1), ಬೆಂಗಳೂರು ದಿನಾಂಕ:22/10/2013 ರಲ್ಲಿ ವಹಿಸಲಾಗಿದೆ. ಅದರಂತೆ 1000 ಶುದ್ಧೀಕರಣ ಘಟಕಗಳ ಸಂರಕ್ಷಣ ಕೊಠಡಿಗಳ

ಕಾಮಗಾರಿಗಳನ್ನು ನಿರ್ವಹಿಸಲು ಐದು ಮಾದರಿಯ ಕಟ್ಟಡಗಳ ನಕ್ಷೆಗಳು ಮತ್ತು ಅಂದಾಜು ಪತ್ರಿಕೆಗಳನ್ನು ಸರ್ಕಾರಕ್ಕೆ ಸಲ್ಲಿಸಿ, ಸರ್ಕಾರವು ಸ್ಥಳೀಯ ಭೌಗೋಳಿಕ ಹಿನ್ನಲೆಯಲ್ಲಿ ವಾಸ್ತವಿಕತೆಯನ್ನು ಆಧರಿಸಿ ಗರಿಷ್ಟ ಆರ್ಥಿಕ ಮಿತವ್ಯಯ ಅನುಸರಿಸಿ ಅಂದಾಜು ಪಟ್ಟಿಯ ಮಿತಿಯೊಳಗೆ ಸಂರಕ್ಷಣಾ ಕೊಠಡಿಗಳನ್ನು ನಿರ್ಮಿಸಲು ಆದೇಶಿಸಿರುತ್ತದೆ.

ಸರ್ಕಾರವು ಅನುಮೋದಿಸಿರುವ ಐದು ಮಾದರಿ ಕಟ್ಟಡಗಳ ವಿವರ:

| Sl.No. | Description | Estimated Cost |
|---|---|---|
| 1 | Model Estimate for One-side Aluminum Glazing with GI sheet Roofing for Water Purification Plant | Rs.5,36,000=00 |
| 2 | Model Estimate for Two-side Aluminum Glazing with GI Sheet Roofing for Water Purification Plant | Rs.5,21,000=00 |
| 3 | Model Estimate for Water Purification Plant with UPVC Materials | Rs.5,36,000=00 |
| 4 | Model Estimate for Water Purification Plant with Puff Materials | Rs.5,36,000=00 |
| 5 | Model Estimate for Water Purification Plant with EPS Materials | Rs.5,36,000=00 |

- ಕೆಆರ್‌ಐಡಿಎಲ್ ಸಂಸ್ಥೆಯು ನಿಗದಿತ ಜನವಸತಿಗಳಲ್ಲಿ ಕಟ್ಟಡವನ್ನು ನಿರ್ಮಿಸುತ್ತಿದೆ.
- Input ನೀರನ್ನು/ಕಚ್ಚಾ ನೀರನ್ನು ಉಚಿತವಾಗಿ ಒದಗಿಸುತ್ತದೆ ಹಾಗೂ ಘಟಕಕ್ಕೆ ಅವಶ್ಯವಿರುವ 6 ಘಂಟೆಗಳ ಕಾಲ 3-phase ವಿದ್ಯುತ್/ single phase ವಿದ್ಯುತ್ ಒದಗಿಸಲು ಕ್ರಮ ಕೈಗೊಳ್ಳಲು ಪ್ರಯತ್ನಿಸುತ್ತದೆ.
- ತ್ಯಾಜ್ಯ ನೀರಿನ ಸುರಕ್ಷಿತ ವಿಲೇವಾರಿ ಹಾಗೂ ಸಂಸ್ಕರಣೆ ಮಾಡಿದ ನೀರಿನ ಬಳಕೆ ಕುರಿತು ಜಾಗ್ರತೆ ವಹಿಸುವುದು ಅವಶ್ಯ. ಶುದ್ಧ ನೀರಿನ ಮಹತ್ವ, ಗುಣಮಟ್ಟ, ಘಟಕಗಳ ಬಗೆಗೆ ಅರಿವು ಮೂಡಿಸುವ ಕಾರ್ಯಕ್ರಮ ಕೈಗೊಳ್ಳಲಾಗುವುದು.



**ಯೋಜನೆಯ ಅವಧಿ**

- ಶುದ್ಧೀಕರಣ ಘಟಕಗಳನ್ನು ಅಳವಡಿಸಲು ಕಾರ್ಯಾದೇಶ ನೀಡಿದ ನಂತರ 3 ತಿಂಗಳುಗಳ ಅವಧಿಯನ್ನು ನೀಡಲಾಗಿದೆ. ತದನಂತರದಲ್ಲಿ 7 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ (O&M) ಜವಾಬ್ದಾರಿಯೊಂದಿಗೆ ಸರ್ಕಾರವು ಅರ್ಹ ಸಂಸ್ಥೆಗಳಿಗೆ ಈ ಜವಾಬ್ದಾರಿಯನ್ನು ನೀಡಲಿದೆ. ಕಾರ್ಯಾನುಷ್ಠಾನದ ವಿವರಗಳನ್ನು ಅನುಭಂದ–4ರಲ್ಲಿ ನೀಡಲಾಗಿದೆ.


**ಸೇವಾ ಸಂಸ್ಥೆಗಳ ಪಾತ್ರ**

- ಆಸಕ್ತ ಸಹಕಾರಿ ಸಂಸ್ಥೆಗಳು/ಸೇವಾ ಸಂಸ್ಥೆಗಳು/ ಸರ್ಕಾರೇತರ ಸಂಸ್ಥೆಗಳು ಶುದ್ಧ ನೀರಿನ ಘಟಕ ಸ್ಥಾಪನೆ ಮಾಡಲು ಮತ್ತು ನಿರ್ವಹಣೆ ಮಾಡಲು ಮುಂದೆ ಬಂದರೆ ಅಂತಹ ಸಂಸ್ಥೆಗಳಿಗೆ ವಿಶೇಷ ಪ್ರೋತ್ಸಾಹ ನೀಡಲಾಗುವುದು. ಈ ಕುರಿತು ಪ್ರತ್ಯೇಕ ಸುತ್ತೋಲೆಯನ್ನು ಹೊರಡಿಸಲಾಗುವುದು.

**ಶುದ್ಧೀಕರಣ ಕಾರ್ಯವಿಧಾನ:**

ಅಶುದ್ಧ ನೀರಿನ ಶುದ್ಧೀಕರಣವನ್ನು ಕೆಳಗೆ ಕಾಣಿಸಿದ ಹಂತಗಳಲ್ಲಿ ಮಾಡಲಾಗುತ್ತದೆ.

1. **ಸ್ಯಾಂಡ್ ಫಿಲ್ಟರ್** : ಶುದ್ಧ ನೀರಿನ ಘಟಕದಲ್ಲಿ ಮೊದಲು ಸ್ಯಾಂಡ್ ಫಿಲ್ಟರ್ ಮೂಲಕ ಪ್ರಕೃತಿ ಸಹಜ ಸೋಸುವಿಕೆಯಿಂದ ನೀರು ಕಲ್ಮಷಗಳಿಂದ






ಮುಕ್ತವಾಗುತ್ತದೆ. ಇಲ್ಲಿ ವಿವಿಧ ಆಕಾರದ ಉಸುಕಿನ, ಸ್ಥರಗಳಲ್ಲಿ ನೀರು ಹಾಯ್ದು ಮೊದಲ ಹಂತದ ಶುದ್ಧೀಕರಣವಾಗುತ್ತದೆ.

2. **ಆಕ್ಟಿವೇಟೆಡ್ ಕಾರ್ಬನ್ ಫಿಲ್ಟರ್ಸ್:** ಈ ಹಂತದಲ್ಲಿ ನೀರು ಬಣ್ಣ ಹಾಗೂ ವಾಸನೆಯಿಂದ ಮುಕ್ತವಾಗುವುದಲ್ಲದೆ ಜೈವಿಕ ಶೇಷಗಳು, ಕ್ಲೋರಿನ್ ಇಲ್ಲದಂತಾಗುತ್ತದೆ.

ಮೆಂಬ್ರೇನಲ್ಲಿ (ಸೂಕ್ಷ್ಮ ಪರೆ) ಹಾಯಿಸಲಾಗುವುದು. ಈ ಕ್ರಿಯೆಯಿಂದ ಕೆಲವು ಭಾಗ ನೀರು ಬೇರ್ಪಡೆಗೊಂಡು ಶುದ್ದ ನೀರಿಗಾಗಿ ಹೊರಬರುವುದು ಉಳಿದ ನೀರು ನೀರಿನಲ್ಲಿ ಕರಗಿದ ಫ್ಲೋರೈಡ್, ಕಾರ್ಬೋನೇಟ್, ಸಲ್ಫೇಟ್, ಸಿಲಿಕಾ ಹಾಗೂ ನೀರಿನಲ್ಲಿ ತೇಲಬಹುದಾದ ವಸ್ತುಗಳಲ್ಲದೇ ರೋಗಾಣುಗಳನ್ನೊಳಗೊಂಡು ತ್ಯಾಜ್ಯವಾಗಿ ಹೊರಬರುವುದು.



3. **ಸಾಫ್ಟನರ್ :** ಡೋಜಿಂಗನಿಂದಗಿ ಗಡಸು ನೀರು ಈ ಹಂತದಲ್ಲಿ ಮೃದು ನೀರಾಗುತ್ತದೆ. ಅಧಿಕ ಪ್ರಮಾಣದಲ್ಲಿರು ಕ್ಯಾಲ್ಸಿಯಂ, ಮ್ಯಾಗ್ನೇಸಿಯಂ ಲವಣಗಳನ್ನು ಇಲ್ಲಿ ಕಡಿಮೆಗೊಳಿಸಲಾಗುತ್ತದೆ.
4. **ಮೈಕ್ರೊ ಫಿಲ್ಟರೇಶನ್ :** ಇದೊಂದು ರೀತಿ ಸೂಕ್ಷ್ಮ ಸೋಸುವಿಕೆ, ಧೂಳಿನಿಂದ ಹಿಡಿದು ಎಲ್ಲ ರೀತಿಯ ಸೂಕ್ಷ್ಮ ಕಣಗಳು ಇಲ್ಲಿ ಸೋಸಲ್ಪಡುತ್ತವೆ.
5. **ಆರ್.ಓ.(ರಿವರ್ಸ್ ಓಸ್ಮಾಸಿಸ್) :** ಈ ಪ್ರಕ್ರಿಯೆಯಲ್ಲಿ ಹೆಚ್ಚು ಲವಣಾಂಶದ ನೀರನ್ನು ಅಧಿಕ ಒತ್ತಡದಿಂದ
6. **ಯು.ವ್ಹಿ :** ಈ ಹಂತದಲ್ಲಿ ಶುದ್ದ ನೀರು ಅಲ್ಟ್ರಾವ್ಹಾಲೇಟ್ ಕಿರಣಗಳ ಸಂಪರ್ಕಕ್ಕೆ ಬಂದು ಯಾವುದಾದರೂ ಈ ರೀತಿ ಶುದ್ಧೀಕರಣಗೊಂಡ ನೀರು ಜನರಿಗೆ ಅತ್ಯಲ್ಪ ಬೆಲೆಯಲ್ಲಿ ಲಭ್ಯವಾಗುವುದು.
7. ಶುದ್ಧ ನೀರು ಮುಂದಿನ 48 ಗಂಟೆಗಳ ಕಾಲ ಬ್ಯಾಕ್ಟೀರಿಯಾಗಳಿಂದ ಕಲುಷಿತವಾಗಬಾರದೆಂದು ಕ್ಲೋರಿನ್ ಡೈಯಾಕ್ಸೈಡ್ ಬೆರೆಸಲಾಗುತ್ತದೆ.

ಅನುಬಂಧ –1

**ಸರಬರಾಜುದಾರರು ಶುದ್ಧ ನೀರಿನ ಘಟಕದಲ್ಲಿ ಮುಖ್ಯವಾಗಿ ಒದಗಿಸಬೇಕಾದ ಅಂಗಗಳು :**

**R.O. System Components, ಮಾಪಕ ಉಪಕರಣ – Controls.**

| (A) R.O. System - ಭಾಗಗಳು | (B) ಮಾಪಕ ಉಪಕರಣ - Controls |
|---|---|
| * ಇನ್‌ಲೆಂಟ್ ಪಂಪ್ | * ಒತ್ತಡ ಮಾಪಕಗಳು |
| * ಆ್ಯಂಟಿ ಸೀಲೆಚಿಟ್ ಡೋಸಿಂಗ್ ಸಿಸ್ಟಂ | * ಫ್ಲೋ ಇಂಡಿಕೇಟರ್ಸ್ |
| * ಪೂರ್ಣ ಸ್ವಯಂ ಚಾಲಿತ ಅಲ್ಟ್ರಾ ಸೋಸುವ ಘಟಕ | * ಟೈಮರ್ ಫಾರ್ ಆಟೋಫ್ಲಾಶ್ |
| * ಅಧಿಕ ಒತ್ತಡ ಪಂಪ್ | * ಹೈಪ್ರೆಷರ್ ಸ್ವಿಚ್ ಮತ್ತು ಲೋ ಪ್ರೆಷರ್ ಸ್ವಿಚ್ |
| * ಪ್ರೆಷರ್ ವೆಸಲ್ | * ಆಟೋ ಫ್ಲಷಿಂಗ್ ಸಿಸ್ಟಂ ಮತ್ತು ಸೊಲೆನಾಯಿಡ್ ವಾಲ್ವ್ |
| * ಮೊರೆ | * ಎಲೆಕ್ಟ್ರಿಕ್ ಕಂಟ್ರೋಲ್ ಪ್ಲಾನರ್ ವಿತ್ "ಎ" ಮೀಟರ್, ವೋಲ್ಟ್ ಮೀಟರ್ ಇಂಡಿಕೇಟರ್ ಆನ್/ಆಫ್ ಸ್ವಿಚ್ |
| * ಪಿ.ಹೆಚ್. ಕರೆಕ್ಷನ್ ಸಿಸ್ಟಂ | |
| * ಅಲ್ಟ್ರಾ ವೈಯಲೆಟ್ ಸಿಸ್ಟಂ | * ಪ್ರೆಷರ್ ಕಂಟ್ರೋಲ್ ವಾಲ್ವ್ |
| * ಕ್ಲೀನಿಂಗ್ ಸಿಸ್ಟಂ | * ಡಿಜಿಟಲ್ ಕಂಡಕ್ಟಿವಿಟಿ ಅಥವಾ ಟಿ.ಡಿ.ಎಸ್. ಮೀಟರ್ |
| * ಮೈಕ್ರಾನ್ ಕಾಟ್ರಿಡ್ಜ್ ಫಿಲ್ಟರ್ | * 2 ಸಂಖ್ಯೆ 1 ರೂಪಾಯಿ ನಾಣ್ಯವನ್ನು ಹಾಕಿ 20 ಲೀಟರ್ ಅಥವಾ 1 ಸಂಖ್ಯೆಯ 1 ರೂಪಾಯಿ ನಾಣ್ಯವನ್ನು ಹಾಕಿ 10 ಲೀಟರ್/ ಸಂಗ್ರಹಿಸಲು ಎಟಿಡಬ್ಲು/ಎನಿ ಟೈಮ್ ವಾಟರ್ ಕಾಡ್ ಸಿಸ್ಟಂ – ಆಟೋಮೇಷನ್ |
| * ಕಚ್ಚಾ ನೀರು ತೊಟ್ಟಿ | |
| * ಪ್ರಾಡಕ್ಟ್ ವಾಟರ್ ಟ್ಯಾಂಕ್ | |
| * ಪೈಪಿಂಗ್ ಫ್ರಮ್ ಆರ್.ಓ. ಸಿಸ್ಟಂ ಟು ಪ್ರಾಡಕ್ಟ್ ವಾಟರ್ ಟ್ಯಾಂಕ್ | |
| * ಆರ್.ಓ. ಸಿಸ್ಟಂ ಮತ್ತು ಸಾಮಗ್ರಿ ಸಂಗ್ರಹಗಳನ್ನು ಸ್ಥಾಪಿಸಲು ಸೂಕ್ತ ಎಂಕ್ಲೋಸರ್ | |

## ಅನುಬಂಧ – 2
## ನೀರಿನ ಗುಣಮಟ್ಟ (BIS 10500:2012) ರಂತೆ

| ಕ್ರ. ಸಂ. | ಗುಣಧರ್ಮ | ಕನಿಷ್ಟ ಮಿತಿ | ಗರಿಷ್ಟ ಮಿತಿ |
|---|---|---|---|
| 1 | ಬಗ್ಗಡ (ಎನ್.ಟಿ.ಯು) | | 1.00 |
| 2 | ಬಣ್ಣ (ಕೋಬಾಲ್ಟ್ ಸ್ಕೇಲ್) | | 5.00 |
| 3 | ಬಣ್ಣ ಮತ್ತು ವಾಸನೆ | | Agreeable |
| 4 | ಪಿ.ಹೆಚ್ | | 6.5 to 8.5 |
| 5 | ಒಟ್ಟು ಗಡಸುತನ (caco3) (mg/lit) | | 200 |
| 6 | ಒಟ್ಟಾರೆ ಕರಗಿದ ಲವಣಾಂಶ (mg/lit) | 100–250 | 500 |
| 7 | ಕ್ಲೋರೈಡ್ (Cl ನಂತೆ) (mg/lit) | | 250 |
| 8 | ಸಲ್ಫೇಟ್ (so4 ರಂತೆ) (mg/lit) | | 200 |
| 9 | ಫ್ಲೋರೈಡ್ (F ನಂತೆ) (mg/lit) | | 1.00 |
| 10 | ನೈಟ್ರೇಟ್ (No3 ನಂತೆ) (mg/lit) | | 45 |
| 11 | ಕ್ಯಾಲ್ಸಿಯಂ (ca ರಂತೆ) (mg/lit) | | 75 |
| 12 | ಮೆಗ್ನೀಷಿಯಂ (mg ರಂತೆ) (mg/lit) | | 30 |
| 13 | ಕಬ್ಬಿಣ (Fe ನಂತೆ) (mg/lit) | | 0.30 |
| 14 | ಆರ್ಸೆನಿಕ್ (As ನಂತೆ) (mg/lit) | | 0.01 |
| 15 | ಮ್ಯಾಂಗನೀಸ್ (Mn ನಂತೆ) (mg/lit) | | 0.10 |
| 16 | ತಾಮ್ರ (Cu ನಂತೆ) (mg/lit) | | 0.05 |
| 17 | ಜಿಂಕ್ (Zm ನಂತೆ) (mg/lit) | | 5.00 |
| 18 | ರೆಸಿಡ್ಯುಯಲ್ ಫ್ರೀ ಕ್ಲೋರಿನ್ (mg/lit) | | 0.20 |
| 19 | ಬ್ಯಾಕ್ಟೀರಿಯಾ (MPN/100Ml) | | 0.00 |
| 20 | ಯುರೇನಿಯಂ | | 60 |

ಅಭಿವೃದ್ಧಿ ಅಧಿಕಾರಿಗಳ ಅಂಗಳದಿಂದ . . .

# ಗುಮ್ಮಗೋಳ ಗ್ರಾಮ ಪಂಚಾಯತ್ ಸಾಧನೆಗಳು



ಶ್ರೀ ಜಗದೀಶ್. ಎ. ಹಡಪದ್
94485 65062

ಗುಮ್ಮಗೋಳ ಗ್ರಾಮ ಪಂಚಾಯತಿಯು ಧಾರವಾಡ ಜಿಲ್ಲೆಯ ನವಲಗುಂದ ತಾಲೂಕಿನ ವ್ಯಾಪ್ತಿಗೆ ಒಳಪಡುತ್ತದೆ. ವಿವಿಧ ಅಭಿವೃದ್ಧಿ ಯೊಜನೆಗಳಡಿ ಮಾಡಿರುವ ವಿಶಿಷ್ಟ ಸಾಧನೆಗಳ ವಿವರಗಳು ಒಂದು ಕಿರು ಚಿತ್ರಣವನ್ನು ಇಲ್ಲಿ ನಿಡಲಾಗಿದೆ.

**ಶೇ. ನೂರರಷ್ಟು ಕರವಸೂಲಿ :** ಗುಮ್ಮಗೋಳ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ 2 ಗ್ರಾಮಗಳಲ್ಲಿ ಸಮುದಾಯವೇ ಸ್ವ ಪ್ರೇರಿತವಾಗಿ ನೀರಿನ ಕರ ಹಾಗೂ ಪಂಚಾಯತಿಯು ವಿಧಿಸುವ ಎಲ್ಲ ಕರಗಳನ್ನು ಖುದ್ದಾಗಿ ಬಂದು ತಾವೇ ಗ್ರಾಮ ಪಂಚಾಯತಿಗೆ ಭರ್ತಿ ಮಾಡುತ್ತಿದ್ದು, ಕರ್ನಾಟಕ ರಾಜ್ಯದಲ್ಲಿಯೇ 100ಕ್ಕೆ 100ರಷ್ಟು ಕರವಸೂಲಿ ಮಾಡಿ ರಾಜ್ಯಕ್ಕೆ ಮಾದರಿಯಾಗಿದೆ. ಹಾಗೂ ಕರವಸೂಲಿಗಳಿಂದ ಸಂಗ್ರಹಿಸಲಾದ ಹಣದಲ್ಲಿ ರೂ.12.00 ಲಕ್ಷಗಳ ನಿಶ್ಚಿತ ಠೇವಣಿಯೆಂದು ಬ್ಯಾಂಕಿನಲ್ಲಿಟ್ಟು ಸದರಿ ಹಣದಿಂದ ಬರುವ ಬಡ್ಡಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

**ಸ್ವಂತ ಸಂಪನ್ಮೂಲದಿಂದ ಪಂಚಾಯತಿ ಕಟ್ಟಡ :** ಗುಮ್ಮಗೋಳ ಗ್ರಾಮ ಪಂಚಾಯುತಿಯಲ್ಲಿ 2007–08ನೇ ಸಾಲಿನ ವರೆಗೆ ಸ್ವಂತ ಕಟ್ಟಡವಿರದೆ ಗ್ರಾಮ ಪಂಚಾಯತಿಯು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿತ್ತು. 2004–05ನೇ

ಧಾರವಾಡ ಜಿಲ್ಲೆ ಗುಮ್ಮಗೋಳ ಗ್ರಾಮ ಪಂಚಾಯತಿಯ ಅಭಿವೃದ್ಧಿ ಚಿತ್ರಣ. . .



*ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗುಮ್ಮಗೋಳ ಗ್ರಾಮ ಪಂಚಾಯತ್, ನವಲಗುಂದ ತಾಲ್ಲೂಕು, ಧಾರವಾಡ ಜಿಲ್ಲೆ

ಸಾಲಿನಿಂದ 2009–10ನೇ ಸಾಲಿನ ವರೆಗೆ ಗ್ರಾಮ ಪಂಚಾಯತಿಯಿಂದ ಸಂಗ್ರಹಿಸಲಾದ ವಿವಿಧ ಕರಗಳಲ್ಲಿ ವಿವಿಧ ಚಟುವಟಿಕೆಗಳಿಗೆ ಖರ್ಚು ಭರಿಸಿ ಶಿಲ್ಕು ಉಳಿದ ಅನುದಾನದಲ್ಲಿ ಒಟ್ಟು ರೂ.18.00 ಲಕ್ಷಗಳಲ್ಲಿ ವ್ಯವಸ್ಥಿತ, ಸುಸಜ್ಜಿತ, ಸುಂದರವಾದ ಕಟ್ಟಡವನ್ನು ನಿರ್ಮಿಸಿ ಮಾದರಿಯಾಗಿದೆ.

**ಶುದ್ಧ ಕುಡಿಯುವ ನೀರಿನ ಸರಬರಾಜು :** ಗುಮ್ಮಗೋಳ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ 2 ಗ್ರಾಮಗಳಿಗೆ ನೆದರಲ್ಯಾಂಡ ಹಾಗೂ ರಾಜೀವ್ ಗಾಂಧೀ ಸಬ್‌ಮೀಶನ್ ಯೋಜನೆಯಡಿಯಲ್ಲಿ ನಲ್ಲಿ ನೀರು ಸರಬರಾಜು ಅನುಷ್ಠಾನ ಕಾರ್ಯವನ್ನು ಪ್ರತಿ ಮನೆಮನೆಗೂ ಸೌಲಭ್ಯವನ್ನು ಒದಗಿಸಲಾಗಿದ್ದು, ಸದರಿ ಯೋಜನೆಯು ಉಸ್ತುವಾರಿ ಹಾಗೂ ನಿರ್ವಹಣೆಯನ್ನು ಆಯಾ ವಾರ್ಡಿನ ನೀರು ಮತ್ತು ನೈರ್ಮಲ್ಯ ಸಮಿತಿಯ ಉಸ್ತುವಾರಿಯಲ್ಲೇ ಗ್ರಾಮಪಂಚಾಯತಿಯಿಂದ ನೇಮಿಸಲಾದ ಸಿಬ್ಬಂದಿ ಮುಖಾಂತರ ಜರುಗಿಸಲಾಗುತ್ತಿದೆ.

**ಘನತ್ಯಾಜ್ಯ ವಸ್ತು ವಿಲೇವಾರಿ :** ಗುಮ್ಮಗೋಳ ಗ್ರಾಮದ ಉತ್ತರ ದಿಕ್ಕಿನಲ್ಲಿ ಗ್ರಾಮದಲ್ಲಿಯ ಎಲ್ಲ ವಾರ್ಡಗಳಿಂದ ಸಂಗ್ರಹಿಸಲಾದ ಘನ ಮತ್ತು




ತ್ಯಾಜ್ಯ ವಸ್ತುಗಳನ್ನು ಸಂಗ್ರಹಿಸಿ ಕಾಂಪೋಸ್ಟ ಯಾರ್ಡಗೆ ಸ್ಥಳಾಂತರಿಸಿ, ಎರೆಹುಳು ಗೊಬ್ಬರ ತಯಾರಿಸಲು ಪ್ರಾರಂಭಿಕ ಚಟುವಟಿಕೆಗಳನ್ನು ಕೈಗೊಳ್ಳಲಾಗಿದೆ. ಈ ಕಾರ್ಯಕ್ರಮದ ಪೂರಕವಾಗಿ ಗುಮ್ಮಗೋಳ ಹಾಗೂ ಬ್ಯಾಲ್ಯಾಳ ಗ್ರಾಮಕ್ಕೆ ಒಟ್ಟಾರೆ ನಾಲ್ಕು ತಳ್ಳುವ ವಾಹನಗಳನ್ನು ತೆಗೆದುಕೊಂಡಿದ್ದು, ಎಲ್ಲ ಕಸವನ್ನು ವಿಲೇವಾರಿ ಮಾಡಲು ನೀರು ಮತ್ತು ನೈರ್ಮಲ್ಯ ಸಮಿತಿಗಳಿಂದ ಉಳಿತಾಯ ಮಾಡಿದ ಹಣದಲ್ಲಿ ರೂ. 3.15 ಲಕ್ಷಗಳು ಸಂದಾಯ ಮಾಡಿ ಹೊಸ ಪರಿಸರ ಸ್ನೇಹಿ ಮಾಹನವನ್ನು ಖರೀದಿಸಲಾಗಿದೆ.

**ಒಳಚರಂಡಿ ವ್ಯವಸ್ಥೆ :** ಗುಮ್ಮಗೋಳ ಹಾಗೂ ಬ್ಯಾಲ್ಯಾಳ ಗ್ರಾಮದಲ್ಲಿ 100ಕ್ಕೆ 100ರಷ್ಟು ಒಳಚರಂಡಿ ಯೋಜನೆಯನ್ನು ಅಳವಡಿಸ ಲಾಗಿದ್ದು, ಗ್ರಾಮದ ಎಲ್ಲ ಕುಟುಂಬಗಳು ಬಳಕೆ ಮಾಡುವ ಎಲ್ಲ ದ್ರವ ತ್ಯಾಜ್ಯ ಊರ ಹೊರಗಿನ ನಿಗದಿತ ಸ್ಥಳಕ್ಕೆ ವ್ಯವಸ್ಥಿತವಾಗಿ ತಲುಪುತ್ತದೆ. ಈ ವ್ಯವಸ್ಥೆಯನ್ನು ಕಲ್ಪಿಸಲು ಗ್ರಾಮ ಪಂಚಾಯತಿ ಯಿಂದ ಪ್ರತಿ ವಾರ್ಡಿಗೆ ಸಿಬ್ಬಂದಿಯನ್ನು ನೇಮಿಸಲಾಗಿದ್ದು, ಆಯಾ ವಾರ್ಡಿನ ನೀರು ಮತ್ತು ನೈರ್ಮಲ್ಯ ಸಮಿತಿಯು ಉಸ್ತುವಾರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಸದರಿ ಸಿಬ್ಬಂದಿಯ ಕಾರ್ಯವು ಸುಗಮವಾಗಿ ಸಾಗಲು ಆಯಾ ಸಮಿತಿಗಳಿಂದ ಸಿಬ್ಬಂದಿಗೆ ಮೊಬೈಲ್ ಗಳನ್ನು ಒದಗಿಸಲಾಗಿದ್ದು, ಪ್ರತಿ ತಿಂಗಳು ಪ್ರತಿ ಸಿಬ್ಬಂದಿಗೆ ರೂ. 100 ರಂತೆ ದೂರವಾಣಿ ಖರ್ಚಿಗಾಗಿ ಸಮಿತಿಯವರು ಸಂದಾಯ ಮಾಡುತ್ತಾರೆ.

**ವಾಣಿಜ್ಯ ಮಳಿಗೆ ನಿರ್ಮಾಣ :** ಗುಮ್ಮಗೋಳ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳ ಸ್ವಸಹಾಯ ಸಂಘಗಳು ಉತ್ಪಾದಿಸಿದ ವಸ್ತುಗಳ ಮಾರಾಟಕ್ಕೆ ಅನುಕೂಲ ಮಾಡುವ ದೃಷ್ಠಿಯಿಂದ ವಾಣಿಜ್ಯ ಮಳಿಗೆ ನಿರ್ಮಿಸಿರುವದು, ಸ್ವಸಹಾಯ

ಸಂಘಗಳ ಆರ್ಥಿಕ ಸ್ಥಿತಿ ಉತ್ತಮಗೊಳ್ಳಲು ಪರಿಣಾಮಕಾರಿ ಪ್ರಯೋಗವಾಗಿ ಪರಿಣಮಿಸಿದೆ.

**ಜನರ ವಂತಿಗೆಯಿಂದ ಜಲನಿರ್ಮಲ ಯೋಜನೆ:** ಗುಮ್ಮಗೋಳ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಗುಮ್ಮಗೋಳ ಗ್ರಾಮದ ಜನರಿಗೆ ಶುದ್ಧ




ಕುಡಿಯುವ ನೀರಿನ ಪೂರೈಕೆಗಾಗಿ ಯೋಜನೆಯ ಅಂದಾಜು ವೆಚ್ಚದ ಶೇ. 10 ರಷ್ಟನ್ನು ಪ್ರತಿ ಮನೆ, ಪ್ರತಿ ಕುಟುಂಬಕ್ಕೆ ರೂ. 1000/– ದಂತೆ ವಂತಿಗೆ ಸಂಗ್ರಹಿಸಿ ಹಾಗೂ ಶೇ. 5 ರಷ್ಟು ಗ್ರಾಮ ಪಂಚಾಯತಿಯಿಂದ ಭರಿಸಿ ಜಲನಿರ್ಮಲ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ.

ಸರ್ಕಾರದ ಮಾರ್ಗಸೂಚಿಗೆ ಅನುಗುಣವಾಗಿ ಕಾಲಕಾಲಕ್ಕೆ ವಾರ್ಡ ಸಭೆ, ಗ್ರಾಮ ಸಭೆ, ಮ.ಗಾ.ರಾ.ಗ್ರಾ.ಉ.ಖಾ ಯೋಜನೆಯ ಸಾಮಾಜಿಕ ಲೆಕ್ಕ ಪರಿಶೋಧನೆ, ಜಮಾಬಂದಿ, ವಾರ್ಷಿಕ ಆಯವ್ಯಯವನ್ನು ಕಡ್ಡಾಯವಾಗಿ ನಡೆಸಲಾಗುತ್ತಾ ಬಂದಿದೆ.

**ಪರಿಸರ ಸ್ನೇಹಿ ಶೌಚಾಲಯ** : ಭಗಿರಥ ಸ್ವಯಂ ಸೇವಾ ಸಂಸ್ಥೆ, ಧಾರವಾಡ ಇವರ ಸಹಯೋಗದೊಂದಿಗೆ ಗುಮ್ಮಗೋಳ ಗ್ರಾಮ ಪಂಚಾಯತಿ ಆವರಣದಲ್ಲಿ ಪರಿಸರ ಸ್ನೇಹಿ ಶೌಚಾಲಯವನ್ನು ನಿರ್ಮಿಸಿ ಅದರಲ್ಲಿ ಸದರಿ ಘಟಕದಲ್ಲಿ ಬೇರ್ಪಡೆಯಾಗಿ ಬರುವ ಘನ ಮತ್ತು ದ್ರವ ವಸ್ತುಗಳನ್ನು ಗ್ರಾಮ ಪಂಚಾಯತಿ ಆವರಣದಲ್ಲಿರುವ ಕೈತೋಟಕ್ಕೆ ಬಳಸಿ ಆರೋಗ್ಯ ಕಾಪಾಡುವಲ್ಲಿ ಹಾಗೂ ಪರಿಸರ ಕಲುಷಿತವಾಗುವದನ್ನು ಯಶಸ್ವಿಯಾಗಿ ತಡೆಹಿಡಿದಿದ್ದಾರೆ.

**ರಾಜ್ಯ ಸರಕಾರದ ರಜತ ನೈರ್ಮಲ್ಯ ಹಾಗೂ ನೈರ್ಮಲ್ಯ ಪ್ರಶಸ್ತಿ:** 2010–11ನೇ ಸಾಲಿನಲ್ಲಿ ರಾಜ್ಯ ಸರಕಾರದ "ರಜತ ನೈರ್ಮಲ್ಯ ಹಾಗೂ ನೈರ್ಮಲ್ಯ" ಪ್ರಶಸ್ತಿ ಲಭಿಸಿದೆ.

**ನಿರ್ಮಲ ಗ್ರಾಮ ಪುರಸ್ಕಾರ** : ಕೇಂದ್ರ ಸರಕಾರದ 2007–08ನೇ ಸಾಲಿನ "ನಿರ್ಮಲ ಗ್ರಾಮ ಪುರಸ್ಕಾರ" ಗ್ರಾಮ ಪಂಚಾಯತಿಗೆ ಲಭಿಸಿದೆ.

**ಪೌಷ್ಟಿಕ ಸಸಿಗಳ ನಿರ್ವಹಣೆ** : ಗುಮ್ಮಗೋಳ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ 2 ಗ್ರಾಮಗಳಲ್ಲಿ ಮ.ಗಾಂ.ರಾ.ಗ್ರಾ.ಉ.ಖಾ.ಯೋಜನೆಯಲ್ಲಿ ಶೇ. 50 ರಷ್ಟು ಮನೆಗಳಿಗೆ ಪೌಷ್ಟಿಕ ಸಸಿಗಳನ್ನು ನಿರ್ವಹಣೆಗೆ ಕೊಡಲಾಗಿದೆ.

**ಸೋಲಾರ್ ದೀಪದ ಅಳವಡಿಕೆ** : ಗುಮ್ಮಗೋಳ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ 2 ಗ್ರಾಮಗಳಲ್ಲಿ ಶೇ. 25 ರಷ್ಟು ಬೀದಿ ದೀಪಗಳಲ್ಲಿ ಸೋಲಾರ್ ದೀಪಗಳನ್ನು ಅಳವಡಿಸಲಾಗಿದೆ.

**ಮಳೆನೀರು ಕೊಯ್ಲು** : ಮಳೆನೀರು ಕೊಯ್ಲು ಕಾರ್ಯಕ್ರಮದಡಿ ಗುಮ್ಮಗೋಳ ಹಾಗೂ ಬ್ಯಾಲ್ಯಾಳ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಗ್ರಾಮಪಂಚಾಯತ ಕಟ್ಟಡಗಳಲ್ಲಿ ಈ ಯೋಜನೆಯನ್ನು ಅಳವಡಿಸಿ ಮಳೆಯಿಂದ ನೀರನ್ನು ಸಂಗ್ರಹಿಸಿ, ದಿನಬಳಕೆಗಾಗಿ ಉಪಯೋಗಕ್ಕಾಗಿ ಬಳಸುತ್ತಿದ್ದಾರೆ.

**ಅಡುಗೆ ತ್ಯಾಜ್ಯದಿಂದ ಅಡುಗೆ ಅನಿಲ :** ಅಂಗನವಾಡಿ ಕೇಂದ್ರಗಳಲ್ಲಿ ಕಸದ ತೊಟ್ಟಿಗೆ ಹಾಕುವಂತಹ ಕಸ, ಮುಸುರೆಯನ್ನು ಬಯೋಗ್ಯಾಸ ಘಟಕಕ್ಕೆ ಹಾಕಿ ಅದರಿಂದ ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳಿಗೆ ತಯಾರಿಸುವ ಅಡುಗೆಗೆ ಅನಿಲವನ್ನುಬಳಸಲು ವಿನೂತನ ಪ್ರಯೋಗವನ್ನು ಮಾಡಿ ಎರಡು ಅಂಗನವಾಡಿ ಕೇಂದ್ರಗಳಲ್ಲಿ ಹಾಗೂ ಗ್ರಾಮ ಪಂಚಾಯತ ಆವರಣದಲ್ಲಿ ಒಟ್ಟು ಮೂರು ಘಟಕಗಳನ್ನು ನಿರ್ಮಿಸಿ ಅದರ ಸದುಪಯೋಗ ವನ್ನು ಪಡೆದಿದ್ದಾರೆ. (ಪ್ರತಿ ಘಟಕಕ್ಕೆ ರೂ. 8,000/– ದಂತೆ ಅಂದಾಜು ವೆಚ್ಚ)

## ಸಾಧನೆಗೆ ಮೊದಲು ಗುಮ್ಮಗೋಳ ಗ್ರಾಮ ಪಂಚಾಯತ್ ಚಿತ್ರಣ

- ಗ್ರಾಮ ಪಂಚಾಯತಿ ಸ್ವಂತ ಕಟ್ಟಡವಿಲ್ಲದೆ, ಗ್ರಾಮ ಪಂಚಾಯುತಿ ಆಡಳಿತವನ್ನು ಬಾಡಿಗೆ ಕಟ್ಟಡದಲ್ಲಿಯೆ ನಿರ್ವಹಿಸಲಾಗುತ್ತಿತ್ತು.



- ಕುಡಿಯುವ ನೀರಿನ ಸರಬರಾಜು ಸಮರ್ಪಕ ವಾಗಿರಲಿಲ್ಲ. ಜನರು ಹಳ್ಳ, ಸರವ, ಗುಂಡಿ, ಕೆರೆಗಳಲ್ಲಿ ಕುಡಿಯುವ ನೀರಿಗಾಗಿ ಬಳಸುತ್ತಿದ್ದರು ಹಾಗೂ ಕೃಷಿ ಬಳಕೆಗೆ ಕೂಡಾ ಯೋಗ್ಯವಾದ ನೀರು ಸಿಗುತ್ತಿರಲಿಲ್ಲ.
- ಗ್ರಾಮದಲ್ಲಿಯ ಒಳಚರಂಡಿ ವ್ಯವಸ್ಥೆಯಿಲ್ಲದೆ, ಚರಂಡಿಯ ನೀರು ರಸ್ತೆ ಮೇಲೆ ನಿಂತು, ರಸ್ತೆಯಲ್ಲಿ ಸಂಚಾರ ಮಾಡವುದು ಕಷ್ಟವಾಗಿತ್ತು. ಇದರಿಂದ ಆರೋಗ್ಯದ ಮೇಲೆ ದುಷ್ಪಪರಿಣಾಮ ಬಿರುತ್ತಿತ್ತು.
- ಗ್ರಾಮದಲ್ಲಿನ ರಸ್ತೆಗಳು ಬಹಳ ಹದಗೆಟ್ಟಿದ್ದವು ಮತ್ತು ಸಂಚಾರಕ್ಕೆ ಯೋಗ್ಯವಿರಲಿಲ್ಲ.
- ಗ್ರಾಮ ಪಂಚಾಯತಿಯ ಕರ ಭರ್ತಿ ಮಾಡುವ ಮನೋಭಾವನೆಯೆ ಜನರಿಗೆ ಇರಲಿಲ್ಲ. ಗ್ರಾಮ ಪಂಚಾಯತಿ ಕರ ವಸೂಲಿಯು ವರ್ಷದ ಬೇಡಿಕೆಗೆ ಅನುಗುಣವಾಗಿ ಶೇಕಡಾ 10% ಕ್ಕಿಂತಾ ಕಡಿಮೆ ಯಾಗಿತ್ತು.
- ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ರೈತರ ಹೊಲಗಳಿಗೆ ನೀರಾವರಿ ಸೌಲಭ್ಯವಿಲ್ಲದೆ ಆರ್ಥಿಕ ಸ್ಥಿತಿ ಹಾಗೂ ಬೆಳೆಯ ಪ್ರಮಾಣ ಕೂಡಾ ತುಂಬಾ ಕಡಿಮೆಯಾಗಿತ್ತು.
- ಗ್ರಾಮ ಪಂಚಾಯತಿ ಆಡಳಿತದಲ್ಲಿ ಪಾರದರ್ಶಕ ಹಾಗೂ ಪ್ರಾಮಾಣಿಕ ಇಲ್ಲದ್ದರಿಂದ ಜನರಿಗೆ ವಿಶ್ವಾಸ ಕಡಿಮೆಯಾಗಿತ್ತು.

## ಸಾಧನೆಗೆ ಪೂರಕ ಅಂಶಗಳು

- ಗ್ರಾಮಗಳ ಕುಡಿಯುವ ನೀರಿನ ಸರಬರಾಜು ವ್ಯವಸ್ಥೆಯನ್ನು ಗ್ರಾಮದ ನೀರು ಬಳಕೆದಾರರ ಒಳಗೊಂಡು ಸಮಿತಿಗೆ ಹೊಣೆಗಾರಿಕೆ ವಹಿಸಿ ಕಾರ್ಯಾಚರಣೆ ಮತ್ತು ಸಮುದಾಯಕ್ಕೆ ವರ್ಗಾಯಿಸಲಾಗಿದೆ.
- ಗ್ರಾಮ ಪಂಚಾಯತ ನೀರಿನ ಮತ್ತು ಇತರ ಕರಗಳ ವಸೂಲಾತಿಯನ್ನು ಪ್ರತಿ ತಿಂಗಳು ಪಡಿತರಿಗೆ ಆಹಾರ ಹಂಚುವ ದಿನದಂದು ಕರ ವಸೂಲಾತಿಯನ್ನು ಸಂಗ್ರಹಿಸುವ ಸಂಪ್ರದಾಯ ಮಾಡಲಾಗುತ್ತಿದೆ.

- ಕುಡಿಯುವ ನೀರಿನ ಬಳಕೆದಾರರು ತಾವು ಬಳಸುವ ಸೌಲಭ್ಯಕ್ಕೆ ಪ್ರತಿಯಾಗಿ ಅದಕ್ಕೆ ತಗಲುವ ವೆಚ್ಚ ಬರಿಸುವ ಸಾಮೂಹಿಕ ಮನಃ ಪರಿವರ್ತನೆ ಮಾಡಲಾಗಿದೆ.
- ಸಾರ್ವಜನಿಕ ಆಸ್ತಿಗಳನ್ನು ಹಾಳು ಮಾಡದಂತೆ ಅವುಗಳನ್ನು ರಕ್ಷಿಸಲು ಸಾರ್ವಜನಿಕರಿಗೆ ಅರಿವು ಮೂಡಿಸಲಾಗಿದೆ.
- ಗ್ರಾಮ ಪಂಚಾಯತಿ ಹಾಗೂ ಸಮಿತಿಗಳ ಜಮಾ, ಖರ್ಚು ಪಾರದರ್ಶಕವಾಗಿರುವಂತೆ ಅವುಗಳನ್ನು ಸಮಿತಿಗಳ ಸಭೆ, ವಾರ್ಡ ಸಭೆ ಮತ್ತು ಗ್ರಾಮ ಸಭೆಗಳಲ್ಲಿ ಕಾಲಕಾಲಕ್ಕೆ ಚರ್ಚಿಸುವುದು. ಜವಾಬಂದಿಕಾರ್ಯಕ್ರಮಗಳ ಮೂಲಕ ಪಾರದರ್ಶಕತೆ ಸಾಧಿಸಲಾಗಿದೆ.
- ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಸರ್ಕಾರದಿಂದ ಬರುವಂತಹ ಅಭಿವೃದ್ಧಿ ಕಾಮಗಾರಿಗಳನ್ನು ಉತ್ತಮ ಗುಣಮಟ್ಟ ಹಾಗೂ ಪರಿಣಾಮಕಾರಿ ಅನುಷ್ಠಾನಗೊಳಿಸುವುದು, ಸ್ವಯಂ ಪೂರ್ಣತೆ ಮತ್ತು ಸುಸ್ಥಿರತೆ, ಸಮೂದಾಯದ ಆತ್ಮ ವಿಶ್ವಾಸ ಹೆಚ್ಚಿಸಿದೆ.
- ಜನರ ಜನಪ್ರತಿನಿಧಿಗಳ ಸಮುದಾಯದ ಜೊತೆಗೆ ಗ್ರಾಮ ಪಂಚಾಯತಿಯ PDO, ಕಾರ್ಯದರ್ಶಿ, ಸಿಬ್ಬಂದಿ ವರ್ಗ ಉತ್ತಮ ಬಾಂಧವ್ಯ ಹಾಗೂ ಸಮನ್ವಯತೆ ಸಾಧಿಸಲಾಗಿದೆ.

## ಸಾಧನೆಗೆ ಕಾರಣಕರ್ತರು

ಈ ವಿಶಿಷ್ಟ ಸಾಧನೆಗೆ ಜನರ ಸಹಭಾಗಿತ್ವ ಮತ್ತು ಜನಪ್ರತಿನಿಧಿಗಳ ಸಹಕಾರ, ಗ್ರಾಮ ಪಂಚಾಯತಿಯ ಪಾರದರ್ಶಕ ಆಡಳಿತ, ಗ್ರಾಮೀಣ ಪ್ರದೇಶದ ಅಭಿವೃದ್ಧಿಯಲ್ಲಿ ಬದಲಾವಣೆಯಿಂದ ಪರಿವರ್ತ ನೆಗೊಂಡಿದೆ. ಒಂದು ರಥಕ್ಕೆ ಎರಡು ಚಕ್ರಗಳು ಸಮಾನ



ರೀತಿಯಲ್ಲಿ ಹೇಗೆ ಚಲಿಸುತ್ತವೆಯೋ ಹಾಗೆ ಗ್ರಾಮ ಪಂಚಾಯತ್ ಜನಪ್ರತಿನಿಧಿಗಳು ಹಾಗೂ ಜನರ ಸಹಭಾಗಿತ್ವ ಕಾರಣವಾಗಿದೆ. ಜನಪ್ರತಿನಿಧಿಗಳ ಹಾಗೂ ಗ್ರಾಮೀಣ ಸಮುದಾಯದ ಜೊತೆಗೆ ಗ್ರಾಮ ಪಂಚಾಯತಿಯ ಸಿಬ್ಬಂದಿ ಸಮನ್ವಯ ಸಾಧಿಸಿ ಗ್ರಾಮೀಣ ಅಭಿವೃದ್ಧಿಯ ಚಿಂತನೆ ಮಾಡಿರವುದು ಗುಮ್ಮಗೋಳ ಗ್ರಾಮ ಪಂಚಾಯತ್ ಸಾಧನೆಗೆ ಸಾಕ್ಷಿಯಾಗಿದೆ.

**ಪರಿಣಾಮ ಹಾಗೂ ಪ್ರಸ್ತುತ ಬದಲಾವಣೆಗಳು**

- ಸಮುದಾಯವು ತನ್ನ ಪ್ರಾಥಮಿಕ ಸೌಲಭ್ಯಕ್ಕಾಗಿ ಗ್ರಾಮ ಪಂಚಾಯತ ಅಥವಾ ಸರ್ಕಾರದ ಕಡೆಗೆ ನೋಡುವ ಪ್ರವೃತ್ತಿಯನ್ನು ನಿಲ್ಲಿಸಿದೆ.

- ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಸಂಪೂರ್ಣ ಸ್ವಚ್ಚತೆ ಸಾಧಿಸುವ ನಿಟ್ಟಿನಲ್ಲಿ ಸಂಪೂರ್ಣ ನೈರ್ಮಲ್ಯ ಆಂದೋಲನದ ಅಡಿಯಲ್ಲಿ ಜನ




  ಜಾಗೃತಿ ಮೂಡಿದೆ. ಪ್ರತಿ ಕುಟುಂಬಕ್ಕೆ, ಅಂಗನವಾಡಿ ಶಾಲೆಗಳಲ್ಲಿ ಶೌಚಾಲಯ ನಿರ್ಮಿಸುವಲ್ಲಿ ಜನರ ಪರಿವರ್ತನೆಯಾಗಿ 2007–08 ನೇ ಸಾಲಿನಲ್ಲಿ ನಿರ್ಮಲ ಗ್ರಾಮ ಪುರುಸ್ಕಾರಕ್ಕೆ ಭಾಜನವಾಗಿರುವುದು.

- ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಸ್ವ ಸಹಾಯ ಸಂಘಗಳು, ಯುವಕ ಹಾಗೂ ಯುವತಿಯರ ಸಂಘಗಳು, ಬ್ಯಾಂಕಗಳು ಮತ್ತು ಸರ್ಕಾರಿ ಇಲಾಖೆ ಸಿಬ್ಬಂದಿಗಳು, ಗ್ರಾಮ ಪಂಚಾಯತಿ ಚಟುವಟಿಕೆಗಳಲ್ಲಿ ಸಂಪೂರ್ಣ ಭಾಗವಹಿಸಿ ಅವುಗಳು ತನ್ನ ಆರ್ಥಿಕ ಸ್ಥಿತಿ ಹೆಚ್ಚಿಸಿಕೊಂಡಿರುತ್ತಾರೆ.

- ನೀರಿನಿಂದ ಹಾಗೂ ಸ್ವಚ್ಚತೆಯಿಲ್ಲದ ಕಾರಣ ಉಂಟಾಗುವ ಸಾಂಕ್ರಾಮಿಕ ರೋಗಗಳು ಕಡಿಮೆಯಾಗಿದ್ದು, ನೈರ್ಮಲ್ಯದ ಅಡಿ ಕೈಗೊಂಡ ಕ್ರಮಗಳಿಂದಾಗಿ ಸಮೂದಾಯದ ಆರೋಗ್ಯ ಉತ್ತಮಗೊಂಡಿದೆ. ತನ್ಮೂಲಕ ಪ್ರತಿ ಕುಟುಂಬಕ್ಕೆ ಚಿಕಿತ್ಸೆಗೆ ವೆಚ್ಚವಾಗುವ ಪ್ರಮಾಣ ಕಡಿಮೆಯಾಗಿದೆ. ಫಲಪ್ರದ ದುಡಿಯುವ ಅವರ ಶಕ್ತಿ ಹೆಚ್ಚಿಸಿ ಸಮುದಾಯದ ಆರ್ಥಿಕ ಪರಿಸ್ಥಿತಿ ಉತ್ತಮಗೊಂಡಿದೆ.

- ಗ್ರಾಮ ಪಂಚಾಯತ್‌ನಿಂದ ಮತ್ತು ವಿವಿಧ ಸರ್ಕಾರಿ ಇಲಾಖೆಗಳ ಕಾಮಗಾರಿಗಳ ಅನುಷ್ಠಾನದಲ್ಲಿ ಪರಿಶೀಲಿಸುವಿಕೆ ಪಾಲ್ಗೊಳುವಿಕೆ ಪರಿಣಾಮಕಾರಿಯಾಗಿದೆ.

- ಗ್ರಾಮದಲ್ಲಿ ಯಾವುದೇ ವ್ಯಾಜ್ಯ ವಗೈರೆಗಳನ್ನು ಗ್ರಾಮದ ಹಿರಿಯರ ಸಮ್ಮುಖದಲ್ಲಿ ಪರಿಹರಿಸಿಕೊಳ್ಳುವ ಪರಂಪರೆ ಕಾರಣದಿಂದ ಪೊಲೀಸ್ ಅಥವಾ ನ್ಯಾಯಾಲಯ ಕಟ್ಟೆಯನ್ನು ಹತ್ತದೆ ಇರುವುದು ಗಮನಾರ್ಹ ಸಂಗತಿಯಾಗಿದೆ.

**ಅಡೆತಡೆಗಳು / ವಿರೋಧಗಳು ಹಾಗೂ ಕಂಡುಕೊಂಡ ಪರಿಹಾರ**

- ಸ್ವಚ್ಚತೆ ಹಾಗೂ ನೈರ್ಮಲ್ಯದ, ಬಯಲು ಮಲ ವಿಸರ್ಜನೆ ಮುಕ್ತಗೊಳಿಸಲು ಕಾರ್ಯಕ್ರಮಗಳು



ಮಾಡುವಾಗ ಅಡೆತಡೆಗಳು, ವಿರೋಧ ಬಂದರೂ ಸಹ ಸ್ಥಳೀಯರ, ಮಹಿಳಾ ಸಮುದಾಯದವರು ಹಾಗೂ ಸಂಘಟನೆಗಳು ಮುತುವರ್ಜಿ ವಹಿಸಿ, ಹಿರಿಯರ ಮಾರ್ಗದರ್ಶನದಿಂದ ಜನರಿಗೆ ತಿಳುವಳಿಕೆ ನೀಡಿ ಪರಿಹಾರ ಕಂಡುಕೊಳ್ಳಲಾಗಿತು.

- ಕರ ವಸೂಲಿ ಪಾವತಿಸುವಲ್ಲಿ ಜನರು ಹಿಂದೇಟು ಹಾಕಿದರು. ಪಂಚಾಯತಿಯು ಸ್ಥಳಿಯ ಸರ್ಕಾರ, ಅದಕ್ಕೆ ತನ್ನದೆ ಆದ ನಿಯಮ ಹಾಗೂ ಜವಾಬ್ದಾರಿ ಇರುತ್ತದೆ. ಸಿಬ್ಬಂದಿಗೆ ಹಾಗೂ ಗ್ರಾಮದ ನಿರ್ವಹಣೆಗೆ ಹಾಗೂ ಸಮಗ್ರ ಅಭಿವೃದ್ಧಿಗೆ ಕರ ವಸೂಲಿಯು ಅವಶ್ಯಕವಾಗಿದೆ, ಎಂದು ಜನರಿಗೆ ಮನವರಿಕೆ ಮಾಡಿ ಕರವಸೂಲಿ ತೊಂದರೆಯನ್ನು ಪರಿಹರಿಸಿ ಕೊಳ್ಳಲಾಯಿತು.

## ಉತ್ತಮ ಪ್ರಯೋಗಗಳಿಂದ ಕಲಿತ ಪಾಠ

- ಗ್ರಾಮ ಪಂಚಾಯತ್ ಆಡಳಿತದಲ್ಲಿ ಜನರ ಹಾಗೂ ಸಮುದಾಯದ ಸಹಬಾಗಿತ್ವ ಅತೀ ಮುಖ್ಯ ಪಾತ್ರ ವಹಿಸುತ್ತದೆ.
- ಗ್ರಾಮ ಪಂಚಾಯತಿ ಆಡಳಿತದಲ್ಲಿ ಜನರು ಪಾಲ್ಗೊಳ್ಳುವಿಕೆಯಿಂದ ಪಾರದರ್ಶಕತೆ ಹಾಗೂ ಪ್ರಾಮಾಣಿಕತೆ ಕಂಡು ಬರುತ್ತದೆ.

## ನಮ್ಮ ಸಂದೇಶ

- ಗ್ರಾಮ ಪಂಚಾಯತ್ ಆಡಳಿತ ಮಂಡಳಿಯು ತಮ್ಮದು ಸ್ಥಳಿಯ ಸರ್ಕಾರ ಎಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು ಪಂಚಾಯತಿ ವ್ಯಾಪ್ತಿಯ ಮೂಲಭೂತ ಸೌಕರ್ಯಗಳ ನಿರ್ವಹಣೆಗೆ ಸಂಪನ್ಮೂಲ ಕ್ರೂಢಿಕರಿಸಬೇಕು ಮತ್ತು ಪಂಚಾಯತಿಯ ಜವಾಬ್ದಾರಿಯಾಗಿರುವುದನ್ನು ತಿಳಿದುಕೊಂಡಿರಬೇಕು.
- ಗ್ರಾಮ ಪಂಚಾಯತ್ ಆಡಳಿತದಲ್ಲಿ ಸ್ವಂತ ಸಂಪನ್ಮೂಲಗಳನ್ನು ಕ್ರೂಡಿಕರಿಸುವುದು ಅವಶ್ಯಕವಾಗಿದೆ. ನಾವು ಸರ್ಕಾರದ ಯಾವುದೇ ಯೋಜನೆ ಅಥವಾ ಅನುದಾನವನ್ನು ಅವಲಂಭಿತವಾಗದೆ ನಮ್ಮ ಸ್ವಂತ ಸಂಪನ್ಮೂಲ ದಿಂದ ಆಡಳಿತ ನಡೆಸಲು ಸಹಕಾರಿಯಾಬೇಕು.
- ಗ್ರಾಮ ಪಂಚಾಯತಿ ಆಡಳಿತದಲ್ಲಿ ಜನರ ಸಹಬಾಗಿತ್ವದಿಂದ ಪಾರದರ್ಶಕತೆ ಕಂಡು ಬರುತ್ತದೆ. ಹಾಗೂ (ಗ್ರಾಮ ಪಂಚಾಯತ) ಆಡಳಿತದ ಖರ್ಚು ವೆಚ್ಚವನ್ನು ತಿಳಿಯಲು ಸಹಕಾರಿಯಾಗುತ್ತದೆ.
- ಸಂಪೂರ್ಣ ನೈರ್ಮಲ್ಯ ಆಂದೋಲನದ ಅಡಿಯಲ್ಲಿ ಗ್ರಾಮವನ್ನು ಬಯಲು ಮಲ ವಿಸರ್ಜನೆ ಮುಕ್ತ ಗ್ರಾಮವನ್ನಾಗಿಸಲು ಸಹಕಾರಿಯಾಗುತ್ತದೆ.
- ಗ್ರಾಮೀಣ ಜನರ ಬದುಕು ಕುರಿತು, ಚಿಂತನೆಯನ್ನು ಮನಗಂಡು, ಜನರ, ಜನಪ್ರತಿನಿಧಿಗಳ, ಸಮುದಾಯ ಹಾಗೂ ಗ್ರಾಮ ಪಂಚಾಯತಿ ಸಿಬ್ಬಂದಿ ವರ್ಗ ಸಮನ್ವಯತೆಯನ್ನು ಸಾಧಿಸಬೇಕು.
- ಗಾಂಧೀಜಿಯವರು ಹೇಳಿದಂತಹ "ಗ್ರಾಮ ಸ್ವರಾಜ್" ಕಲ್ಪನೆಯನ್ನು ಸಹಕಾರಗೊಳಿಸುವ ನಿಟ್ಟಿನಲ್ಲಿ ಪ್ರಯತ್ನ ಮಾಡುವ ಬಗ್ಗೆ ನಾವೆಲ್ಲಾ ಸಕಾರಾತ್ಮವಾಗಿ ಚಿಂತಿಸಿ ಕ್ರಮ ಕೈಗೊಂಡಲ್ಲಿ ಗ್ರಾಮಿಣಾಭಿವೃದ್ಧಿ ಸಾದ್ಯವಾಗುತ್ತದೆ.

ಅಭಿವೃದ್ಧಿ ಅಧಿಕಾರಿಗಳ ಅಂಗಳದಿಂದ . . .

# ಕುರಿದೊಡ್ಡಿ – ಒಂದು ಯಶೋಗಾಥೆ

* ಕೆ. ಮಲ್ಲೇಶ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಗ್ರಾಮೀಣ ಜನರಿಗೆ ದನದ ಕೊಟ್ಟಿಗೆ, ಕುರಿ/ಮೇಕೆ ದೊಡ್ಡಿ ಹಾಗೂ ವೈಯಕ್ತಿಕ ಕೋಳಿ ಸಾಕಾಣಿಕೆ ಕೇಂದ್ರಗಳನ್ನು ನಿರ್ಮಿಸಲು ನೆರವು ನೀಡುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಚಿಂತಿಸಿದ ಫಲವಾಗಿ ಯೋಜನೆಯಡಿ ಮೇಲ್ಕಂಡ ವೈಯಕ್ತಿಕ ಕಾಮಗಾರಿಗಳನ್ನು ತೆಗೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಗ್ರಾಮೀಣ ಪ್ರದೇಶದ ರೈತರ ಜಮೀನುಗಳಲ್ಲಿ ಕೃಷಿಯೇತರ ಕೂಲಿ ಕಾರ್ಮಿಕರಿಗೆ ಅನುಕೂಲವಾಗುವಂತೆ ಪಶು ಸಂಗೋಪನಾ ಇಲಾಖೆಯ ಕಾಮಗಾರಿಗಳನ್ನು ಆದ್ಯತಾ ಕಾಮಗಾರಿಗಳ 11 ನೇ ಪ್ರವರ್ಗದಡಿ ತೆಗೆದುಕೊಳ್ಳಲು ಉದ್ಯೋಗ ಖಾತರಿ ಯೋಜನೆಯ ಮಾರ್ಗಸೂಚಿಗಳಲ್ಲಿ ಅವಕಾಶ ಕಲ್ಪಿಸಿದೆ. ಇಂತಹ ಸೌಲಭ್ಯಗಳನ್ನು ಪಡೆಯಲು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಬಡತನ ರೇಖೆಗಿಂತ ಕೆಳಮಟ್ಟದಲ್ಲಿರುವ ಎಲ್ಲಾ ವರ್ಗಗಳ ಕುಟುಂಬಗಳು, ಭೂ ಸುಧಾರಣಾ, ಇಂದಿರಾ ಆವಾಜ್ ಯೋಜನೆಯ ಫಲಾನುಭವಿಗಳು, ಬುಡಕಟ್ಟು ಹಾಗೂ ಪಾರಂಪರಿಕ ಅರಣ್ಯವಾಸಿಗಳು ಈ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ.

> ಉದ್ಯೋಗ ಖಾತರಿ ಯೋಜನೆಯಡಿ ದನದ ಕೊಟ್ಟಿಗೆ, ಕುರಿ/ಮೇಕೆ ದೊಡ್ಡಿ ಹಾಗೂ ವೈಯಕ್ತಿಕ ಕೋಳಿ ಸಾಕಾಣಿಕೆ ಕೇಂದ್ರಗಳನ್ನು ನಿರ್ಮಿಸಬಹುದು . . .



ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನ ಸಕ್ಕರೆಗೊಲ್ಲಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಒಂದು ಕುಗ್ರಾಮದ ಹೆಸರು ಕೋಲಿಗೆರೆ. ಇಲ್ಲಿನ ಬಹುಪಾಲು ಜನರ ವೃತ್ತಿ ವ್ಯವಸಾಯವಾಗಿದೆ. ಈ ಗ್ರಾಮದ ಲಕ್ಷ್ಮೀದೇವಮ್ಮ

* ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಸಕ್ಕರೆಗೊಲ್ಲಹಳ್ಳಿ ಗ್ರಾಮ ಪಂಚಾಯತಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. 561204 ಮೊ : 89716 57475

ಎಂಬ ಮಹಿಳೆ ತನ್ನ ಅಂಗವಿಕಲ ಮಗ ನಾಗರಾಜನೊಂದಿಗೆ ವಾಸಿಸುತ್ತಿದ್ದು ತಮ್ಮ ಜೀವನೋಪಾಯಕ್ಕೆ ಕುರಿಸಾಕಾಣಿಕೆ ಅವಲಂಬಿಸಿದ್ದಾರೆ. ಕಡುಬಡತನದಲ್ಲಿದ್ದ ಲಕ್ಷ್ಮೀದೇವಮ್ಮಳ ಕುಟುಂಬಕ್ಕೆ 2013-14ನೇ ಸಾಲಿನಲ್ಲಿ MGNREGA ಅಡಿ ಕುರಿಸಾಕಾಣಿಕೆಗೆ ಒಂದು ಶೆಡ್ ನಿರ್ಮಿಸಿಕೊಟ್ಟಿದ್ದು ಅವರಿಗೆ ತುಂಬಾ ಸಹಾಯಕಾರಿ ಯಾಗಿದೆ.

ಫಲಾನುಭವಿಯಾದ ಲಕ್ಷ್ಮೀದೇವಮ್ಮನವರ ಮಾತಿನಲ್ಲೇ ಹೇಳುವುದಾದರೆ **"ಸುಮಾರು 15 ವರ್ಷಗಳಿಂದ ಜೀವನೋಪಾಯಕ್ಕಾಗಿ ನಾನು ಕುರಿ ಸಾಕಾಣಿಕೆಯನ್ನು ಅವಲಂಬಿಸಿದ್ದೇವೆ. ನಮ್ಮ ಮನೆಯಲ್ಲಿ ಸುಮಾರು 30 ಕುರಿಗಳಿದ್ದು, ಅವುಗಳನ್ನು ನಾವು ವಾಸಿಸುವ ಮನೆಯ ಮುಂದಿನ ರಸ್ತೆಯ ಬದಿಯಲ್ಲಿ ಕೊಪ್ಪದಲ್ಲಿ (ಬಿದಿರಿನ ತಡಿಕೆ) ಕೂಡುತ್ತಿದ್ದೇವೆ. ಆದರೆ ಗ್ರಾಮ ಪಂಚಾಯತಿಯವರು ಈಗ ಕುರಿಗಳಿಗಾಗಿ ಒಂದು ಪ್ರತ್ಯೇಕ ಶೆಡ್ ಕಟ್ಟಿಕೊಳ್ಳಲು ಸಹಾಯ ಮಾಡಿದ್ದು ನಮಗೆ ತುಂಬಾ ಅನುಕೂಲವಾಗಿದೆ. ಮನೆ ಮುಂಬಾಗ ಈಗ ತುಂಬ ಸ್ವಚ್ಛವಾಗಿದೆ. ಈ ಮೊದಲು ನಾವು ಕುರಿ ಗಂಜಲು ತುಳಿದು ಓಡಾಡಬೇಕಾಗಿತ್ತು. ಈಗ ಅದರಿಂದ ಮುಕ್ತವಾಗಿದೆ. ಒಟ್ಟಾರೆ MGNREGA ನಮ್ಮ ಬದುಕಿಗೆ ಸಂಜೀವಿನಿಯಂತಾಗಿದೆ"** ಎಂದು ಪ್ರತಿಕ್ರಿಯಿಸಿರುವುದು ಯೋಜನೆಯ ಯಶೋಗಾಥೆಗೆ ಸಾಕ್ಷಿಯಾಗಿದೆ.

---

## ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳೆ, ಗಮನಿಸಿ . . . .

**"ಅಭಿವೃದ್ಧಿ ಅಧಿಕಾರಿಗಳ ಅಂಗಳದಿಂದ"** . . . . .

ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳೆ, ಸ್ಥಳೀಯ ವಿಧಾನಸಭೆಗಳೆಂದೇ ಕರೆಯಲ್ಪಡುವ ಗ್ರಾಮ ಪಂಚಾಯತ್‌ಗಳಲ್ಲಿ ತಾವುಗಳು ನಿರ್ವಹಿಸುವ ಅಭಿವೃದ್ಧಿಪರ ಕಾರ್ಯಚಟುವಟಿಕೆಗಳು ಮತ್ತು ಒದಗಿಸುವ ಕಾಮಗಾರಿಗಳ ಮಾಹಿತಿ, ಸ್ಥಳೀಯ ಮಟ್ಟದಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಂಡ ಅಭಿವೃದ್ಧಿ ಯೋಜನೆಗಳು, ಮುಂತಾದವುಗಳ ಫಲಶೃತಿಯಿಂದುಂಟಾದ ಯಶೋಗಾಥೆಗಳು ಹಾಗೂ ಸ್ಥಳೀಯ ಸಾಧಕರ ಬಗ್ಗೆ ಅಗತ್ಯ ಮಾಹಿತಿಯನ್ನು ವರ್ಣ ಛಾಯಾಚಿತ್ರಗಳೊಂದಿಗೆ **"ಕರ್ನಾಟಕ ವಿಕಾಸ"** ಪತ್ರಿಕೆಗೆ ಪ್ರಕಟಣೆಗಾಗಿ ಕಳುಹಿಸ ಬಹುದಾಗಿದೆ.

**'ಅಭಿವೃದ್ಧಿ ಅಧಿಕಾರಿಗಳ ಅಂಗಳದಿಂದ'** ಎಂಬ ಶೀರ್ಷಿಕೆಯಡಿ ನೀವುಗಳು ನೀಡುವ ಅಭಿವೃದ್ಧಿಪರ ಮಾಹಿತಿಯನ್ನು **"ಕರ್ನಾಟಕ ವಿಕಾಸ"** ಪತ್ರಿಕೆಯಲ್ಲಿ ಪ್ರಕಟಗೊಳಿಸಲು ತಿರ್ಮಾನಿಸಲಾಗಿದೆ. ಆದ್ದರಿಂದ ತಾವುಗಳು ನಿಡುವ ಮಾಹಿತಿಯನ್ನು ತಮ್ಮ ಸಂಪೂರ್ಣ ಅಂಚೆ ವಿಳಾಸದೊಂದಿಗೆ ಹಾರ್ಡ್ ಕಾಪಿಯೊಂದನ್ನು ರವಾನಿಸಿ ಸಾಫ್ಟ್ ಕಾಪಿಯನ್ನು ಕನ್ನಡ ನುಡಿ ತಂತ್ರಾಂಶ ಬಳಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಲು ಕೋರಿದೆ.

**ಸಂಪಾದಕರು, ಕರ್ನಾಟಕ ವಿಕಾಸ**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ. 1, ಬಹುಮಹಡಿಗಳ ಕಟ್ಟಡ, ಅಂಬೇಡ್ಕರ್ ವೀಧಿ ಬೆಂಗಳೂರು - 560 001.
ದೂರವಾಣಿ : 080-22353857 **email : kvrdpr@gmail.com**

– **ಸಂಪಾದಕರು**

ಕವಿಯ(ಕ್ಷ) ಪ್ರಶ್ನೆಗಳು...

# ಕುಡಿಯುವ ನೀರು ಕದಡುವುದು ಯಾರು?

ಅದೊಂದು ಚಿಕ್ಕ ಪಟ್ಟಣ. ಹತ್ತಾರು ಮನೆಗಳಿಗೆ ಕುಡಿಯುವ ನೀರು ಪೂರೈಸುವುದು ನಗರ ಪಂಚಾಯತ್. ಈ ನೀರಿನ ಶುದ್ಧೀಕರಣ ನಡೆಯುವುದು ಹತ್ತಿರದ ಜಲಾಶಯದಲ್ಲಿ. ಅದನ್ನು ನೋಡಲು ಹೋದಾಗ ಜಲಾಶಯದ ಹಳ್ಳದಲ್ಲಿ ನೀರು ಕಡಮೆಯಿದ್ದ ಬೇಸಿಗೆಯ ಸಮಯವಾಗಿತ್ತು. ಒಂದು ಕಟ್ಟೆ ಹಾಕಿ ನೀರನ್ನು ನಿಲ್ಲಿಸುವ ಸ್ಥಳ ನೋಡಿ ಹೊಟ್ಟೆ ತೊಳಸುವಂತಾಯಿತು. ನೀರಿನಲ್ಲಿ ಸಂಗ್ರಹವಾಗಿದ್ದುದು ಪ್ಲಾಸ್ಟಿಕ್ ಕವರ್‌ಗಳು, ಗೋಣಿಚೀಲಗಳು, ಹರಿದ ಬಟ್ಟೆಗಳು, ಕಾಗದ ಚೂರುಗಳು. ಅದೇ ನೀರು ಶುದ್ಧವಾಗಿ ಜನಗಳ ಮನೆಗಳ ನಲ್ಲಿಯತ್ತ ಹರಿಯುತ್ತಿತ್ತು.

ಜತೆಗೆ ನಗರ ಪಂಚಾಯತಿಯ ನೌಕರನಿದ್ದ. ಏನಪ್ಪ, ಇದೇ ನೀರನ್ನು ಜನ ಕುಡಿಯಬೇಕೆ? ಎಂದು ಕೇಳಿದೆ. ಅದಕ್ಕೆ ಆತ ನೋಡಿ ಸಾರ್ ಇಲ್ಲಿಗೆ ಮಳೆನೀರಿನೊಂದಿಗೆ ಎಲ್ಲರ ಮನೆಗಳ ಮುಂದಿರುವ ಚರಂಡಿಗಳ ನೀರೂ ಶೇಖರವಾಗುತ್ತದೆ. ಜನಗಳಿಗೆ ಕಸ ಸಂಗ್ರಹಕ್ಕೆ ಅಂತ ನಾವು ಒಂದು ಬುಟ್ಟಿ ಕೊಟ್ಟಿರುತ್ತೇವೆ. ಕಸ ಸಾಗಿಸಲು ವಾರಕ್ಕೊಮ್ಮೆ ನಮ್ಮ ವಾಹನವೂ ಹೋಗುತ್ತದೆ. ಆದರೆ ನಿರ್ವಹಣೆಯ ವೆಚ್ಚವೆಂದು ಕೊಡಬೇಕಾದ ಎರಡು ರೂಪಾಯಿ ಉಳಿಸಲು ನಮ್ಮಲ್ಲಿ ಕಸ ಇಲ್ಲ ಎಂದು ಜನ ಹೇಳುತ್ತಾರೆ. ಕಸವನ್ನು ಮನೆ ಮುಂದಿನ ಚರಂಡಿಗೆ ತುಂಬಿಸುತ್ತಾರೆ. ಇದೇ ಕಸ, ಪ್ಲಾಸ್ಟಿಕ್, ಬಟ್ಟೆ ಎಲ್ಲ ಬಂದು ಸೇರುವುದು ಈ ಜಲಾಶಯಕ್ಕೆ. ಈ ಜಲಾಶಯ ಬಿಟ್ಟರೆ ಕುಡಿಯುವ ನೀರಿನ ಅನ್ಯ ಜಲಮೂಲಗಳಿಲ್ಲ ಎಂದು ಅಸಹಾಯಕ ದನಿಯಿಂದ ಹೇಳಿದ.



**ಈ ಮಾತು ಕೇಳಿ ನನ್ನ ಮನಸ್ಸಿನಲ್ಲಿ ಕಲವು ಪ್ರಶ್ನೆಗಳು ಮೂಡಿದವು**

1. ಕಸ ಶೇಖರಣೆಗೆ ಪಂಚಾಯತ್ ಬುಟ್ಟಿಗಳನ್ನು ನೀಡಿರುವಾಗ ಅದನ್ನು ಸಂಗ್ರಹಿಸಿ ಕೊಡಬೇಕಾದ ಜವಾಬ್ದಾರಿಯುತರಾದ ಪೌರರು ಹಣ ಉಳಿತಾಯದ ಲೋಭದಿಂದ ಕಸವನ್ನು ಚರಂಡಿಗೆ ಎಸೆಯುವುದು ನ್ಯಾಯವೇ?
2. ನಮ್ಮ ಪರಿಸರವನ್ನು ಶುಚಿಯಾಗಿಡಬೇಕಾದ ನಾವೇ ಅದನ್ನು ಮರೆತು ಮಳೆಗಾಲದಲ್ಲಿ ಕೃತಕ ನೆರೆಯ ಸೃಷ್ಟಿಗೆ ಕಾರಣಕರ್ತರಾಗಿ ಅದರಿಂದ ಅನಾಹುತವಾದಾಗ ಆಡಳಿತದ ಮೇಲೆ ಗೂಬೆ ಕೂರಿಸುವುದು ನಗೆಪಾಟಲಲ್ಲವೆ?
3. ಕುಡಿಯುವ ನೀರು ಅತ್ಯಮೂಲ್ಯ. ಜೀವರಾಶಿಗೆ ಅಮೃತವಾಗಿರುವ ಅದರ ನೆಲೆಗೆ ನಾವು ಎಸೆಯುವ ತ್ಯಾಜ್ಯವೆಲ್ಲ ಸೇರಿ ಆರೋಗ್ಯಕ್ಕೆ ಮಾರಕವಾಗಬಹುದೆಂಬುದು ನಮಗೆ ತಿಳಿಯಬೇಡವೆ?
4. ಕನಿಷ್ಠ ನಮ್ಮ ಮನೆಯ ಮುಂದೆ ನಾವು ಶುಚಿಯಾಗಿಡುತ್ತೇವೆ ಎನ್ನುವ ನಾಗರಿಕ ಪ್ರಜ್ಞೆ ಪ್ರತಿಯೊಬ್ಬನಲ್ಲಿಯೂ ಜಾಗೃತವಾಗಿದ್ದರೆ ಕಸ ವಿಲೇವಾರಿಯತ್ತ ಆಡಳಿತಗಳು ತಲೆ ಕೆಡಿಸಿಕೊಳ್ಳಬೇಕಾದ ಅನಿವಾರ್ಯ ಇಲ್ಲ ಅಲ್ಲವೆ?
5. ಸಾರ್ವಜನಿಕ ವ್ಯವಸ್ಥೆಯನ್ನು ಕೆಡಿಸಲು ನಾವೇ ಪರೋಕ್ಷ ಕಾರಣರಾಗುವ ಬದಲು ಇಂಥ ಸಮಸ್ಯೆಗಳ ನಿವಾರಣೆಗೆ ಪ್ರತ್ಯಕ್ಷವಾಗಿ ಒಂದು ಚಿಂತನೆ ಮಾಡಿ ನಾವಿರುವ ಊರಿನ ಜನರಿಗೆ ಕಸವನ್ನು ಕಡ್ಡಾಯವಾಗಿ ಒಂದೆಡೆ ವಿಲೇವಾರಿ ಮಾಡುವತ್ತ ಒಮ್ಮತ ಮೂಡಿಸಬಹುದಲ್ಲವೆ?

**– ಪ.ರಾಮಕೃಷ್ಣ ಶಾಸ್ತ್ರಿ**
ಅಂಚೆ ತೆಂಕಕಾರಂದೂರು 574217, ಬೆಳ್ತಂಗಡಿ ತಾಲೂಕು ದ.ಕ. 9483352306




# ಪಂಚಾಯತ್ ರಾಜ್ ಆಡಳಿತದಲ್ಲಿ–ತಂತ್ರಾಂಶಗಳು




ಶ್ರೀಕಲಾ ಪೇತ್ರಿ

ತ್ವರಿತ ಹಾಗೂ ಸಮರ್ಪಕ ಸೇವೆಗಾಗಿ ಸ್ಥಳೀಯ ಆಡಳಿತದಲ್ಲಿ ಅಳವಡಿಸಿಕೊಂಡಿರುವ ತಂತ್ರಾಂಶಗಳ ಬಗ್ಗೆ ಒಂದು ಕಿರು ಚಿತ್ರಣ

ತ್ವರಿತ ಹಾಗೂ ಸಮರ್ಪಕ ನಾಗರಿಕ ಸೇವೆಗಳನ್ನು ನೀಡಲು ನಮ್ಮ ರಾಜ್ಯದ ಪಂಚಾಯತ್ ಆಡಳಿತ ವ್ಯವಸ್ಥೆಯಲ್ಲಿ ಹಲವಾರು ತಂತ್ರಾಂಶಗಳನ್ನು ಯಶಸ್ವಿಯಾಗಿ ಅಳವಡಿಸಿ ಬಳಸಿಕೊಳ್ಳಲಾಗುತ್ತಿದೆ. ತಂತ್ರಾಂಶಗಳನ್ನು ಬಳಸಬೇಕಾದರೆ ಪ್ರತಿಯೊಂದು ಗ್ರಾಮ ಪಂಚಾಯತಿಯು ಕಡ್ಡಾಯವಾಗಿ ಇಂಟರ್ನೆಟ್ (ಅಂತರ್ಜಾಲ) ಸೌಲಭ್ಯವನ್ನು ಹೊಂದಿರಲೇಬೇಕಾಗುತ್ತದೆ. ಇಂದು ಕರ್ನಾಟಕ ರಾಜ್ಯದ ಹಳ್ಳಿಗಾಡಿನ ಮೂಲೆಮೂಲೆಯಲ್ಲಿರುವ ಪ್ರತೀ ಗ್ರಾಮ ಪಂಚಾಯತಿಯು ಅಂತರ್ಜಾಲ ವ್ಯವಸ್ಥೆಯನ್ನು ಹೊಂದಿದೆ ಎಂದರೆ ಗ್ರಾಮೀಣ ಅಭಿವೃದ್ಧಿ ಆಗಿದೆ ಎಂದೇ ಹೇಳಬಹುದಾಗಿದೆ. ಈ ಅಂತರ್ಜಾಲ ವ್ಯವಸ್ಥೆಯನ್ನು ಪ್ರತಿಯೊಂದು ಗ್ರಾಮ ಪಂಚಾಯತ್ ಕಾರ್ಯಾಲಯ ಹೊಂದಿರುವುದರಿಂದಲೇ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅನೇಕ ಬಹುಪಯೋಗಿ, ಜನೋಪಯೋಗಿ ಕೆಲಸಗಳು ತಂತ್ರಾಂಶಗಳ ಬಳಕೆಯಿಂದ ಸುಸೂತ್ರವಾಗಿ ನಡೆಯುತ್ತಿವೆ.

## ಪಂಚತಂತ್ರ




ಒಂದು ಮನೆಗೆ ತಳಪಾಯ ಎಷ್ಟು ಮುಖ್ಯವೋ, ಅಷ್ಟೇ ಮುಖ್ಯವಾಗಿ ಕಾರ್ಯನಿರ್ವಹಿಸುವ ಪಂಚಾಯತ್ ರಾಜ್ ವ್ಯವಸ್ಥೆಯ ಒಂದು ತಂತ್ರಾಂಶವೆಂದರೆ ಪಂಚತಂತ್ರ. ಬಹುಶ: ಎಲ್ಲಾ ತಂತ್ರಾಂಶಗಳಿಗೂ ಈ ಪಂಚತಂತ್ರ ಯಜಮಾನನಿದ್ದಂತೆಯೇ ಎಂದು ಹೇಳಬಹುದಾಗಿದೆ ಅಥವಾ ದೊಡ್ಡಣ್ಣನಿದ್ದಂತೆಯೇ ಎಂದು ಹೇಳಬಹುದಾಗಿದೆ. ಈ ತಂತ್ರಾಂಶದ ವಿಳಾಸ : www.panchatantra.kar.nic.in

ಡಾಟಾ ಎಂಟ್ರಿ ಆಪರೇಟರ್, ಚೇರ್ಕಾಡಿ ಗ್ರಾಮ ಪಂಚಾಯತ್–576215 ಉಡುಪಿ ತಾಲೂಕು ಮತ್ತು ಜಿಲ್ಲೆ

**"ಪಂಚತಂತ್ರ ಇದು ಕಥೆಯಲ್ಲ ಪಂಚಾಯತಿ ತಂತ್ರಾಂಶ ತಂತ್ರಾಂಶದೊಳಗೆ ಅಡಗಿದೆ ಪಂಚಾಯತಿ ಸಾರಾಂಶ"**

ಹೌದು ಈ ಪಂಚತಂತ್ರ ತಂತ್ರಾಂಶದೊಳಗೆ ಇಡೀ ಗ್ರಾಮ ಪಂಚಾಯತ್‌ನ ಸಮಗ್ರ ಮಾಹಿತಿಯೇ ಅಡಕವಾಗಿರುತ್ತದೆ.

**ಅರ್ಜಿ ಸ್ವೀಕೃತಿ**

ಗ್ರಾಮ ಪಂಚಾಯತ್ ವ್ಯಾಪ್ತಿಯ ಯಾರಾದರೂ ಒಬ್ಬ ಗ್ರಾಮಸ್ಥ ಯಾವುದಾದರೂ ಯೋಜನೆಯ ಸೌಲಭ್ಯ ಕೋರಿ ಗ್ರಾಮ ಪಂಚಾಯತ್‌ಗೆ ಅರ್ಜಿ ಸಲ್ಲಿಸಿದರೆ ಸದರಿ ಅರ್ಜಿಯು ಪಂಚತಂತ್ರ ತಂತ್ರಾಂಶದಲ್ಲಿ ದಾಖಲಾಗುತ್ತದೆ. ಅಲ್ಲದೇ ಗ್ರಾಮಸ್ಥರು ನೀಡಿದ ದೂರು ಅರ್ಜಿ, ಸಲಹೆ ಅರ್ಜಿ, ಲೈಸೆನ್ಸ್ ಅರ್ಜಿ ಮುಂತಾದ ಅರ್ಜಿಗಳು ಕೂಡಾ ಈ ತಂತ್ರಾಂಶದಲ್ಲಿ ದಾಖಲಿಸಲ್ಪಡುತ್ತದೆ.

**ಸಭಾ ಮಾಹಿತಿ**

ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ನಡೆಯುವ ವಾರ್ಡ್ ಸಭೆ, ಗ್ರಾಮ ಸಭೆ, ವಿಶೇಷ ಸಭೆ, ಸ್ಥಾಯಿ ಸಮಿತಿ ಸಭೆ, ಸಾಮಾನ್ಯ ಸಭೆ ಹೀಗೆ ಎಲ್ಲಾ ಸಭೆಗಳ ಮಾಹಿತಿಗಳನ್ನು ಅಳವಡಿಸುವ ಸೌಲಭ್ಯವನ್ನು ಈ ತಂತ್ರಾಂಶ ಹೊಂದಿದೆ.

**ಸಕಾಲ ಅರ್ಜಿ**

ಪಂಚಾಯತ್ ರಾಜ್ ವ್ಯವಸ್ಥೆಗೆ ಸರ್ಕಾರ ನಿಗದಿಪಡಿಸಿದ ಸಕಾಲ ಸೇವೆಯಡಿ ನೀಡಬಹುದಾದ ಸೇವೆಗಳ ಅರ್ಜಿಗಳನ್ನು ಪಂಚತಂತ್ರ ತಂತ್ರಾಂಶದ ಮುಖಾಂತರವೇ ಅಳವಡಿಸುವುದಾಗಿದೆ.

**ಸ್ವ-ಸಹಾಯ ಸಂಘಗಳ ಮಾಹಿತಿ**

ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿರುವ ಸ್ವಸಹಾಯ ಸಂಘಗಳ ವಿವರಗಳನ್ನು ಕೂಡಾ ಈ ತಂತ್ರಾಂಶದಲ್ಲಿ ದಾಖಲಿಸಲಾಗುತ್ತದೆ.

**ಕಾಮಗಾರಿ ವಿವರ**

ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ನಡೆಯುವ ಪ್ರತಿಯೊಂದು ಕಾಮಗಾರಿಗಳ ವಿವರಗಳನ್ನು ಸದರಿ ತಂತ್ರಾಂಶದಲ್ಲಿ ದಾಖಲಿಸಲಾಗುತ್ತದೆ. ಅಲ್ಲದೇ ಕಾಮಗಾರಿಯ ಅಂದಾಜು ಮೊತ್ತ, ಕಾಮಗಾರಿಗೆ ಪಾವತಿಸಿದ ಮೊತ್ತ, ಕಂಟ್ರಾಕ್ಟರ್ ವಿವರ, ಕಾಮಗಾರಿ ಪೂರ್ಣಗೊಂಡಿದೆಯೇ? ಇತ್ಯಾದಿ ವಿವರಗಳನ್ನೂ ಕೂಡಾ ದಾಖಲಿಸಲಾಗುತ್ತದೆ.

**ನಿರ್ಮಲ ಭಾರತ ಅಭಿಯಾನ**

ನಿರ್ಮಲ ಭಾರತ ಅಭಿಯಾನ ಯೋಜನೆಯಡಿ, ಗ್ರಾಮದಲ್ಲಿ ಶೌಚಾಲಯ ಹೊಂದಿರುವ ಮನೆ ಮತ್ತು ಶೌಚಾಲಯ ಹೊಂದಿಲ್ಲದ ಮನೆಗಳ ವಿವರಗಳನ್ನು ಕೂಡಾ ಅಳವಡಿಸಲಾಗುತ್ತದೆ.

**ಸಾಮಾನ್ಯ ಮಾಹಿತಿ**

ಗ್ರಾಮ ಪಂಚಾಯತ್‌ನ ಸಾಮಾನ್ಯ ಮಾಹಿತಿಗಳನ್ನು ಎಂದರೆ ಶಿಕ್ಷಣ, ಕೃಷಿ, ಪಶುಸಂಗೋಪನೆ, ಆರೋಗ್ಯ, ಸಹಕಾರ ಮತ್ತು ವ್ಯವಸಾಯೋತ್ಪನ್ನ ಮಾರುಕಟ್ಟೆ ಇತ್ಯಾದಿ ಮಾಹಿತಿಗಳನ್ನು ಈ ತಂತ್ರಾಂಶದಲ್ಲಿ ಅಳವಡಿಸ ಲಾಗುತ್ತದೆ.

**ಗ್ರಾ.ಪಂ. ಸದಸ್ಯರು ಮತ್ತು ಸಿಬ್ಬಂದಿ ಮಾಹಿತಿ**

ಗ್ರಾಮ ಪಂಚಾಯತ್‌ನ ಸದಸ್ಯರ ಮಾಹಿತಿ, ಸಿಬ್ಬಂದಿಗಳ ಮಾಹಿತಿಗಳನ್ನು ಕೂಡಾ ಈ ತಂತ್ರಾಂಶದಲ್ಲಿ ಅಳವಡಿಸಿ, ಪ್ರಸ್ತುತ ಇಡೀ ರಾಜ್ಯದಲ್ಲಿ ಸಿಬ್ಬಂದಿಗಳ ಇ-ಹಾಜರಾತಿಗೂ ಅವಕಾಶ ಕಲ್ಪಿಸಲಾಗಿದೆ.

**ತೆರಿಗೆ ಮತ್ತು ಶುಲ್ಕಗಳು**


ಗ್ರಾಮಸ್ಥರಿಂದ ಸ್ವೀಕರಿಸುವ ಕಟ್ಟಡ ತೆರಿಗೆ, ಮನರಂಜನಾ ತೆರಿಗೆ, ಕಟ್ಟಡ / ಉದ್ಯಮ ಪರವಾನಿಗೆ ಶುಲ್ಕ, ನೀರಿನ ತೆರಿಗೆ ಇನ್ನಿತರ ಎಲ್ಲಾ ಶುಲ್ಕಗಳು ಪಂಚತಂತ್ರ ತಂತ್ರಾಂಶದಲ್ಲಿ ದಾಖಲಿಸಲಾಗುತ್ತದೆ.

**ಸ್ವೀಕೃತಿ ಮತ್ತು ವೆಚ್ಚದ ವಿವರ**

ಇದಲ್ಲದೆ ಗ್ರಾಮ ಪಂಚಾಯತ್‌ನ ನಿರ್ಮಲ ಭಾರತ್ ಅಭಿಯಾನ, ನಿರ್ಮಲ ಗ್ರಾಮ ಪುರಸ್ಕಾರ, ಸಿಬ್ಬಂದಿ ವೇತನ ಖಾತೆ, ಆಶ್ರಯ ಸಾಲ ವಸೂಲಾತಿ,


13ನೇ ಹಣಕಾಸು ಯೋಜನೆ ಹೀಗೆ ಪ್ರತಿಯೊಂದು ಯೋಜನೆಗಳ, ಗ್ರಾಮ ಪಂಚಾಯತ್ ನಿಧಿ ಮತ್ತು ನೀರು ಸರಬರಾಜು ಯೋಜನೆಗಳ ಸರಕಾರದ ಅನುದಾನ ಮತ್ತು ಸ್ವಂತ ಸಂಪನ್ಮೂಲಗಳ ಸ್ವೀಕೃತಿಗಳನ್ನು, ಮತ್ತು ಖರ್ಚಾದ ವೆಚ್ಚಗಳನ್ನು ಈ ತಂತ್ರಾಂಶದಲ್ಲಿ ದಾಖಲಿಸಬೇಕಾಗಿದೆ.

## ವರದಿಗಳು





ಈ ಎಲ್ಲಾ ಅಂಕಿ – ಅಂಶಗಳನ್ನು, ಮಾಹಿತಿಗಳನ್ನು ದಾಖಲಿಸುವುದರಿಂದ ಟ್ರೈಯಲ್ ಬ್ಯಾಲೆನ್ಸ್, ಬ್ಯಾಲೆನ್ಸ್ ಶೀಟ್, ಸಮತೋಲನ ಪಟ್ಟಿ ಮಾತ್ರವಲ್ಲದೆ ಮೇಲೆ ತಿಳಿಸಿದಂತೆ ದಾಖಲಿಸಿದ ಪ್ರತಿಯೊಂದು ಮಾಹಿತಿಗೂ ಅತ್ಯುತ್ತಮವಾದ ವಿವಿಧ ರೀತಿಯ ವರದಿಗಳು ಸೃಷ್ಟಿಸಲ್ಪಡುತ್ತದೆ.

## ನಾಗರಿಕರ ವೀಕ್ಷಣೆಗೆ




ಈ ಮೇಲೆ ತಿಳಿಸಿದ ಎಲ್ಲಾ ಮಾಹಿತಿಗಳ ವರದಿಗಳನ್ನು, (ಪಂಚಾಯತ್–ಪಂಚಾಯತ್ ಅಂತರ್‌ಜಾಲ ತಾಣ) (Panchayat Portal) ಮೂಲಕ ಕರ್ನಾಟಕದ ಪ್ರತಿಯೊಬ್ಬ ನಾಗರಿಕರು ಪ್ರತಿಯೊಂದು ಗ್ರಾಮ ಪಂಚಾಯತ್ ನ ಮಾಹಿತಿಗಳನ್ನು ವೀಕ್ಷಿಸಬಹುದಾಗಿದೆ.




ಅಲ್ಲದೆ www.panchatantra.kar.nic.in/stat ಮೂಲಕವೂ ಕರ್ನಾಟಕ ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್ ಗಳ ಸಮಗ್ರ ಮಾಹಿತಿಗಳನ್ನು ಯಾವುದೇ ಪಾಸ್‌ವರ್ಡ್‌ನ ಅವಶ್ಯಕತೆ ಇಲ್ಲದೆ ವೀಕ್ಷಿಸಬಹುದಾಗಿದೆ.


## ಪಡಿತರ ಚೀಟಿ




ಇದಲ್ಲದೆ, ಆಹಾರ ಇಲಾಖೆಗೆ ಸಂಬಂಧಿಸಿದಂತೆ, ಗ್ರಾಮಸ್ಥರ ಪಡಿತರ ಚೀಟಿಯ ಸಮಸ್ಯೆಗಳಿಗೆ ಪೂರಕವಾಗಿ, ಪಡಿತರ ಚೀಟಿ ಹೊಂದಿಲ್ಲದವರಿಗೆ ಹೊಸ ಪಡಿತರ ಚೀಟಿಗೆ ಅರ್ಜಿ ಸಲ್ಲಿಸುವಿಕೆ, 2010ರ

ಹಿಂದಿನ ಪಡಿತರ ಚೀಟಿಯ ಫೋಟೋ ಮತ್ತು ಬೆರಳಚ್ಚು ಸೆರೆ ಹಿಡಿಯುವಿಕೆ, ಪಡಿತರ ಚೀಟಿಯ ವಿಳಾಸ ಮತ್ತು ಹೆಸರು ಬದಲಾವಣೆ, ಪಡಿತರ ಚೀಟಿಯ ವಿತರಣೆಗೆ ಸಂಬಂಧಿಸಿದಂತೆ ಬೆರಳಚ್ಚು ಸೆರೆಹಿಡಿಯುವಿಕೆ ಕಾರ್ಯವನ್ನು ಈ ಪಂಚತಂತ್ರ ತಂತ್ರಾಂಶದ ಮೂಲಕವೇ ಮಾಡಲಾಗುತ್ತದೆ


**ನಾಗರಿಕರ ವೀಕ್ಷಣೆಗೆ**




ಕರ್ನಾಟಕ ರಾಜ್ಯದ ಎಲ್ಲಾ ನಾಗರಿಕರು www.ahara.kar.nic.in ತಂತ್ರಾಂಶದಲ್ಲಿ ತಮ್ಮ ಪಡಿತರ ಚೀಟಿಯ ಸ್ಥಿತಿಗತಿಗಳನ್ನು ಯಾವುದೇ ಪಾಸ್ ವರ್ಡ್ ಉಪಯೋಗಿಸದೇ ನೋಡಬಹುದಾಗಿದೆ.

**ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ**

ಹಳ್ಳಿಗಾಡಿನ ಜನರು ಉದ್ಯೋಗವಿಲ್ಲದೆ ದೂರದ ನಗರಗಳಿಗೆ ವಲಸೆ ಹೋಗದಂತೆ ತಡೆಯಲು ಜಾರಿಗೆ ಬಂದ ಯೋಜನೆಯೇ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ. ಈ ಯೋಜನೆಯ ಪ್ರಕಾರ ಒಂದು ಕುಟುಂಬಕ್ಕೆ 100 ದಿನದ ಉದ್ಯೋಗ ನೀಡಲಾಗುತ್ತದೆ. ಈ ಯೋಜನೆಗೆ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು www.nrega.nic.in ತಂತ್ರಾಂಶದಲ್ಲಿ ಅಳವಡಿಸಲಾಗುತ್ತದೆ.




ಸದರಿ ತಂತ್ರಾಂಶದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ತಮ್ಮ ಹೆಸರನ್ನು ನೋಂದಣಿ ಮಾಡಿದ ವಿವರ, ಉದ್ಯೋಗ ಚೀಟಿ ವಿತರಣೆಯ ವಿವರ, ಕೂಲಿಕಾರ್ಮಿಕರ ಬ್ಯಾಂಕ್ ಖಾತೆ ವಿವರ, ಈ ಯೋಜನೆಯಡಿ ನಿರ್ವಹಿಸಬಹುದಾದ ಕಾಮಗಾರಿ ವಿವರ, ಉದ್ಯೋಗ ಬೇಡಿಕೆಯ ವಿವರ, ಉದ್ಯೋಗ ಬೇಡಿಕೆಗೆ ಅನುಗುಣವಾಗಿ ಇ–ಎನ್.ಎಮ್.ಆರ್ ಸೃಜನೆ, ಅದಕ್ಕೆ ತಕ್ಕಂತೆ ಪಾವತಿ ವಿವರಗಳು, ಕಾಮಗಾರಿಗಳ ಫೋಟೋ ಅಳವಡಿಕೆ ಮುಂತಾದ ಮಾಹಿತಿಗಳನ್ನು ಅಳವಡಿಸಲಾಗುತ್ತದೆ.


**ನಾಗರಿಕರ ವೀಕ್ಷಣೆಗೆ**




ಈ ಯೋಜನೆಯಡಿಯಲ್ಲಿ ಗ್ರಾಮಸ್ಥರು ಯಾವ ದಿನಾಂಕದಂದು ತಮ್ಮ ಹೆಸರನ್ನು ನೋಂದಣಿ ಮಾಡಿಕೊಳ್ಳಲಾಗಿದೆ? ಯಾವ ದಿನಾಂಕದಂದು ಉದ್ಯೋಗ ಚೀಟಿ ವಿತರಣೆ ಮಾಡಲಾಗಿದೆ? ಎಷ್ಟು ದಿನಗಳ ಉದ್ಯೋಗ ನೀಡಲಾಗಿದೆ? ಎಷ್ಟು ಮೊತ್ತವನ್ನು ಪಾವತಿಸಲಾಗಿದೆ? ಯಾವ ಕಾಮಗಾರಿಗೆ ಸಂಬಂಧಿಸಿದಂತೆ ಎಷ್ಟು ಮೊತ್ತವನ್ನು ಪಾವತಿಸಲಾಗಿದೆ? ಎಂಬಿತ್ಯಾದಿ ಮಾಹಿತಿಗಳನ್ನು www.nrega.nic.in

ತಂತ್ರಾಂಶದಿಂದಲೇ ಜನರು ಯಾವುದೇ ಪಾಸ್ ವರ್ಡ್‌ನ ಅವಶ್ಯಕತೆ ಇಲ್ಲದೇ ಪಡೆಯಬಹುದಾಗಿದೆ. ಈ ತಂತ್ರಾಂಶದಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯದ ಪ್ರತೀ ಗ್ರಾಮ ಪಂಚಾಯತ್‌ನ ಸಮಗ್ರ ಮಾಹಿತಿಯನ್ನು ಕೂಡಾ ನಾಗರಿಕರು ಪಡೆಯಬಹುದಾಗಿದೆ.


## ವಸತಿ ಯೋಜನೆ




ರಾಜ್ಯದಲ್ಲಿ ವಾಸಿಸುವ ವಸತಿ ರಹಿತರಿಗೆ ವಸತಿ ನಿರ್ಮಿಸಲು ಸಹಾಯವಾಗುವಂತೆ ಸರಕಾರದಿಂದ ವಿವಿಧ ವಸತಿ ಯೋಜನೆಗಳಡಿಯಲ್ಲಿ ಸಹಾಯ ಧನವನ್ನು ನೀಡಲಾಗುತ್ತದೆ.

ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿರುವ ಅರ್ಹ ವಸತಿ ರಹಿತರನ್ನು ಹಳ್ಳಿಯ ವಿಧಾನಸಭೆಯಾದ ಗ್ರಾಮ ಸಭೆಯ ಮೂಲಕ ಬಸವ ವಸತಿ ಯೋಜನೆ, ಇಂದಿರಾ ಆವಾಜ್ ಯೋಜನೆ ಮುಂತಾದ ವಸತಿ ಯೋಜನೆಗಳಡಿಯಲ್ಲಿ ಆಯ್ಕೆ ಮಾಡಲಾಗುತ್ತದೆ. ಆಯ್ಕೆ ಮಾಡಿದ ಫಲಾನುಭವಿಗಳ ವಿವರಗಳನ್ನು www.ashraya.kar.nic.in/ashrayanew ತಂತ್ರಾಂಶದಲ್ಲಿ ಅಳವಡಿಸಿ, ರಾಜೀವ ಗಾಂಧಿ ವಸತಿ ನಿಗಮದಿಂದ ಅನುಮೋದನೆ ಪಡೆದುಕೊಳ್ಳಲಾಗುತ್ತದೆ. ಹೀಗೆ ಅನುಮೋದನೆ ಪಡೆದ ಫಲಾನುಭವಿಗಳ ಮನೆ ಕಾಮಗಾರಿ ಪ್ರಾರಂಭಿಸಿದ ನಂತರ ಪಂಚಾಂಗ, ಗೋಡೆ, ಮಾಡು, ಸಂಪೂರ್ಣ ಹೀಗೆ 4 ಹಂತಗಳ ಜಿಪಿಎಸ್ ಪ್ರಗತಿಯನ್ನು ತಂತ್ರಾಂಶದ ಮೂಲಕ ಅಳವಡಿಸಿದಾಗ, ರಾಜೀವ ಗಾಂಧಿ ವಸತಿ ನಿಗಮದಿಂದ ನೇರವಾಗಿ ಫಲಾನುಭವಿಯ ಬ್ಯಾಂಕ್ ಖಾತೆಗೆ ಹಂತವಾರು ಸಹಾಯಧನವನ್ನು ಬಿಡುಗಡೆ ಮಾಡಲಾಗುತ್ತದೆ.

## ಸಾರ್ವಜನಿಕ ವೀಕ್ಷಣೆಗೆ




ಕರ್ನಾಟಕ ರಾಜ್ಯದ ವಸತಿ ಯೋಜನೆಗೆ ಸಂಬಂಧಿಸಿದಂತೆ, ಬಸವ ವಸತಿ ಯೋಜನೆ, ಇಂದಿರಾ ಆವಾಜ್ ಯೋಜನೆ ಮುಂತಾದ ವಸತಿ ಯೋಜನೆಗಳ ಮಾಹಿತಿಗಳನ್ನು ಜನಸಾಮಾನ್ಯರು www.ashraya.kar.nic.in ತಂತ್ರಾಂಶದ ಮೂಲಕ ಪಡೆಯಬಹುದಾಗಿದೆ. ಈ ತಂತ್ರಾಂಶದಿಂದ ವಸತಿ ಯೋಜನೆಗಳ ಬಗ್ಗೆ ಮಾಹಿತಿ, ವಸತಿ ಯೋಜನೆಗೆ ಸಂಬಂಧಿಸಿದ ಸುತ್ತೋಲೆಗಳು, ವಸತಿ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳ ವಿವರ, ಫಲಾನುಭವಿಗಳಿಗೆ ಬಿಡುಗಡೆಯಾದ ಅನುದಾನ ಮುಂತಾದ ಮಾಹಿತಿಗಳು ದೊರೆಯುತ್ತವೆ. ಕರ್ನಾಟಕ ರಾಜ್ಯದ ಪ್ರತಿಯೊಬ್ಬ ಜನಸಾಮಾನ್ಯನು ಕೂಡಾ ಯಾವುದೇ ಪಾಸ್ ವರ್ಡ್ ನ ಅವಶ್ಯಕತೆ ಇಲ್ಲದೆ ಪ್ರತಿ ಗ್ರಾಮ ಪಂಚಾಯತ್‌ನ ವಸತಿ ಯೋಜನೆಗಳ ಸಮಗ್ರ ಮಾಹಿತಿಯನ್ನು ಈ ತಂತ್ರಾಂಶದಿಂದ ಪಡೆಯಬಹುದಾಗಿದೆ.

ರಾಜ್ಯದ ಪ್ರತಿಯೊಂದು ಗ್ರಾಮ ಪಂಚಾಯತ್‌ನ ಸಮಗ್ರ ಮಾಹಿತಿಗಳನ್ನು ತಂತ್ರಾಂಶದಲ್ಲಿ ಅಳವಡಿಸುವುದರಿಂದ ದೇಶದ/ಪ್ರಪಂಚದ ಯಾವುದೇ ಭಾಗದಲ್ಲಿ ಮಾಹಿತಿಗಳನ್ನು ಪಡೆದುಕೊಳ್ಳಬಹುದಾಗಿದೆ. ಹಳ್ಳಿ ಹಳ್ಳಿಯ ಚಿತ್ರಣಗಳನ್ನು ಕಂಪ್ಯೂಟರ್ ಪರದೆಯ ಮೇಲೆ ವೀಕ್ಷಿಸಬಹುದಾಗಿದೆ. ಪ್ರತೀ ಗ್ರಾಮದ ಅಂಕಿ–ಸಂಖ್ಯೆಗಳ ಮಾಹಿತಿಗಳನ್ನು ಸಂಗ್ರಹ ಮಾಡಬಹುದಾಗಿದೆ. ಹೀಗೆ ಪಂಚಾಯತ್ ರಾಜ್ ವ್ಯವಸ್ಥೆಯು ಪ್ರತಿಯೊಂದು ಯೋಜನೆಗಳು ತಂತ್ರಾಂಶಗಳ ಮೂಲಕ ದಾಖಲಿಸಲ್ಪಡುವುದರಿಂದ ಪಾರದರ್ಶಕತೆಯನ್ನು ಕಾಯ್ದುಕೊಂಡಂತಾಗಿ ಜನಸ್ನೇಹಿಯಾಗುತ್ತವೆ.

# ಜಲಾನಯನಗಳ ಸುಸ್ಥಿರ ಕೃಷಿಗೆ ತೋಟದ ಬೆಳೆ – ಹಲಸು



ಹೆಚ್.ಜಿ.ಶಿವಾನಂದಮೂರ್ತಿ, ಭಾ.ಅ.ಸೇ.,
94481 26246

ತೋಟದ ಬೆಳೆಯಾಗಿ ಹಲಸನ್ನು ಬೆಳೆಸಿ ಪ್ರಯೋಜನವನ್ನು ಪಡೆಯುವ ಬಗ್ಗೆ ವಿವರ

ನಮ್ಮ ದೇಶದಲ್ಲಿ ಬೆಳೆಯುವ ಉತ್ಕೃಷ್ಟ ಹಣ್ಣುಗಳಲ್ಲಿ ಉಪೇಕ್ಷಿತ ಹಣ್ಣು ಹಲಸು. ಸದಾ ಹಸಿರಿನಿಂದ ಕೂಡಿರುವ ಹಲಸಿನ ಮರ ಒಣ ಭೂಮಿಯ ಜಲಾನಯನಗಳ ಜೀವ ವೈವಿಧ್ಯತೆಯ ರಕ್ಷಣೆಗೆ ಹೇಳಿಸಿದ ಮರವಾಗಿದೆ. ಹಲಸು ವಿಶ್ವದಲ್ಲಿ ಬೆಳೆಯುವ ಹಣ್ಣುಗಳಲ್ಲೇ ಅತಿ ದೊಡ್ಡ ಗಾತ್ರದ ಹಣ್ಣಾಗಿದೆ, ಕೆಲವೊಂದು ಹಣ್ಣುಗಳು 70 ಕೆ.ಜಿ.ವರೆಗೂ ತೂಗುತ್ತದೆ ಮತ್ತು ಎಲ್ಲಾ ವಿಧದ ಮಣ್ಣಿನಲ್ಲಿ ಬೆಳೆಯುವಂತಹ ಮರ. ಮಾವಿನ ಜೊತೆಗೆ ಹಲಸಿಗೂ ಧಾರ್ಮಿಕ ಮತ್ತು ಶುಭ ಕಾರ್ಯಗಳಲ್ಲಿ ಸಮಾನ ಸ್ಥಾನವಿದೆ. ವೈಶಿಷ್ಟ್ಯವೆಂದರೆ ಹಲಸು ಭಾರತದ ಎಲ್ಲಾ ರಾಜ್ಯಗಳಲ್ಲಿ ಬೆಳೆಯುತ್ತಿದ್ದರೂ, ಉತ್ತರ ಭಾರತದಲ್ಲಿ ಇದಕ್ಕೆ ಕೇವಲ ತರಕಾರಿಯ ಸ್ಥಾನ. ಅವರಿಗೆ ಹಲಸಿನ ಹಣ್ಣಿನ ವಾಸನೆಯೂ ಹಿಡಿಸುವುದಿಲ್ಲ. ಆದರೆ ದಕ್ಷಿಣ ಭಾರತದ ಬಯಲು ಪ್ರದೇಶಗಳಲ್ಲಿ ಇದು ಮುಖ್ಯವಾಗಿ ಹಣ್ಣಿನ ಬೆಳೆ ಹಾಗೂ ಪಶ್ಚಿಮಘಟ್ಟದ ಪ್ರದೇಶದಲ್ಲಿ ವಿವಿಧ ಹಲಸಿನ ಜಾತಿಯ ಮರಗಳನ್ನು ಮರಮುಟ್ಟಿಗಾಗಿ (ಟಿಂಬರ್‌ಗಾಗಿ) ಈವರೆಗೆ ಹಲಸನ್ನು ಹೊಲದ ಬದುವಿನ ಮೇಲೆ ಮತ್ತು ಮನೆಯ ಆವರಣದಲ್ಲಿ ಬೆಳೆಯುತ್ತಿದ್ದಾರೆ.



## ಭಾರತದಲ್ಲಿ ಹಲಸು:

ಭಾರತದಲ್ಲಿ ಹೆಚ್ಚಾಗಿ ಕೇರಳ, ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಅಸ್ಸಾಂ, ಪಶ್ಚಿಮ ಬಂಗಾಳ, ಈಶಾನ್ಯ ರಾಜ್ಯಗಳು ಮತ್ತು ಅಂಡಮಾನ್–ನಿಕೋಬಾರ್ ದ್ವೀಪಗಳಲ್ಲಿ ಬೆಳೆಯಲಾಗುತ್ತಿದೆ. ಕರ್ನಾಟಕ ರಾಜ್ಯದಲ್ಲಿ ಸುಮಾರು 11333 ಹೆಕ್ಟೇರ್ ಪ್ರದೇಶದಲ್ಲಿದ್ದು 2.60 ಲಕ್ಷ ಟನ್‌ಗಳಷ್ಟು ಇಳುವರಿ ಬರುತ್ತಿದೆ. ಹಲಸು ಬಹಳ ಜನಪ್ರಿಯವಾದ ಹಣ್ಣು.

* ಆಯುಕ್ತರು, ಜಲಾನಯನ ಅಭಿವೃದ್ಧಿ, ಇಲಾಖೆ, ಬೆಂಗಳೂರು – 560 009




ಟಿಗಾನಹಳ್ಳಿ ಜಿ.ಎಂ. ಮರಿಯಣ್ಣನವರ ಅಂಗಳದ ನಾಲ್ಕು ವರ್ಷದ ಚಂದ್ರ ಹಲಸಿನ

ಅನಾದಿ ಕಾಲದಿಂದಲೂ ಹೆಚ್ಚಾಗಿ ಬೆಳೆಯುತ್ತಿದ್ದರೂ ಸಹ ಇದೊಂದು ರೈತರಿಗೆ ಆರ್ಥಿಕವಾಗಿ ಲಾಭದಾಯಕ ಎಂಬುದು ಇತ್ತೀಚೆಗೆ ಮನವರಿಕೆಯಾಗುತ್ತಿದೆ. ಸಾವಯವ ಕೃಷಿಯಿಂದ ಬೆಳೆದ ಹಣ್ಣಾದ್ದರಿಂದ, ಇದನ್ನು ಸಾವಯವ ಹಣ್ಣು ಎಂದು ಗುರುತಿಸಿ, ಹೆಚ್ಚಿನ ಬೆಲೆಗೆ ಮಾರಾಟ ಮಾಡಬಹುದು. ವೈವಿಧ್ಯತೆಗೆ ಉಪಯುಕ್ತವುಳ್ಳ ಮರ ಇದಾಗಿದ್ದು, ಉತ್ತಮ ಮರಮುಟ್ಟು, ರಾಸುಗಳಿಗೆ ಮೇವು, ವರ್ಷವಿಡಿ ಹೆಚ್ಚಿನ ಆಮ್ಲಜನಕ ಹಾಗೂ ಮನಸ್ಸಿಗೆ ತಂಪು ಹವಾಗುಣ ನೀಡುವ ನಿತ್ಯಹರಿದ್ವರ್ಣ ಮರ. ಹಲಸು ಬೆಳೆದರೆ ಏನೂ ಶ್ರಮ ಹಾಗೂ ಖರ್ಚಿಲ್ಲದೆ, ಕನಿಷ್ಠ 8 –10 ಟನ್ ಇಳುವರಿ ಪಡೆದು ಪೌಷ್ಟಿಕಾಂಶ ಆಹಾರ ಪೂರೈಕೆಯನ್ನು ಸಹ ಪಡೆಯಬಹುದು. ನಮ್ಮ ರಾಜ್ಯದ ಎಲ್ಲಾ ಹವಾಗುಣಗಳಲ್ಲಿ ಉತ್ತಮವಾಗಿ ಬೆಳೆದು, ಆರ್ಥಿಕವಾಗಿ ರೈತನ ಕೈ ಹಿಡಿಯುವ 'ಕಲ್ಪವೃಕ್ಷ' ಎಂದೇ ಹೇಳಬಹುದು.

## ವಿದೇಶಗಳಲ್ಲಿ ಹಲಸು:

**ವಿಯೆಟ್‌ನಾಮ್:** ಈ ದೇಶದಲ್ಲಿ ಬೆಳೆದ ಶೇ.60 ರಷ್ಟು ಹಲಸಿನ ಬೆಳೆಯನ್ನು ಸಂಸ್ಕರಿಸಲಾಗುತ್ತದೆ. ವಿನಾಮಿಟ್ ಎಂಬ ಕಂಪನಿಯು ತನ್ನದೇ ಆದ ಸ್ವಂತ 10,000 ಹೆಕ್ಟೇರ್‌ದಲ್ಲಿ ಹಲಸನ್ನು ಬೆಳೆದು ಚಿಪ್ಸ್ ತಯಾರಿಸಿ ರಫ್ತು ಮಾಡುತ್ತದೆಯಲ್ಲದೇ ರೈತರ ಜೊತೆ ಹಲಸನ್ನು ಖರೀದಿಸಲೂ ಒಪ್ಪಂದ ಮಾಡಿಕೊಂಡಿದೆ.

**ಮಲಯೇಷಿಯಾ:** ಮಲಯೇಷಿಯಾ ಸರಕಾರವು ದೇಶದ ರಾಷ್ಟ್ರೀಯ ಕೃಷಿ ಯೋಜನೆಯಡಿಯಲ್ಲಿಯೂ ಹಲಸನ್ನು ಸೇರಿಸಿದೆ. Malayasian Agricultural Research Institute ಅನೇಕ ಹೊಸ ತಳಿಗಳನ್ನು ವೃದ್ಧಿಪಡಿಸಿದ್ದಲ್ಲದೇ, ಕೇವಲ 18 ತಿಂಗಳಿಗೆ ಫಲ ನೀಡುವ ತಳಿಗಳನ್ನು ಕಂಡುಹಿಡಿದಿದೆ. ಕಡಿಮೆ ಸಂಸ್ಕರಣೆ (minimally processed) ಮಾಡಿದ ಹಲಸನ್ನು 2 ಡಿಗ್ರಿ ಸೆಂಟಿಗ್ರೇಡ್‌ನಲ್ಲಿ ಮೂರು ವಾರ, 10 ಡಿಗ್ರಿ ಸೆಂಟಿಗ್ರೇಡ್‌ನಲ್ಲಿ ಒಂದು ವಾರ ಮತ್ತು 25 ಡಿಗ್ರಿ ಸೆಂಟಿಗ್ರೇಡ್‌ನಲ್ಲಿ 2 ದಿವಸದವರೆಗೆ ಇಡಬಹುದು. ಹೀಗೆ ಸಂಸ್ಕರಿಸಿದ ಹಲಸನ್ನು ಮಲಯೇಷಿಯಾದ ಕಂಪನಿಗಳು ಯೂರೋಪ್, ಮಧ್ಯ ಪೂರ್ವ ರಾಷ್ಟ್ರಗಳು, ಸಿಂಗಾಪೂರ, ಬ್ರಿಟನ್ ಮತ್ತು ಥ್ಯಾಯಲೆಂಡ್ ದೇಶಗಳಿಗೆ ರಫ್ತು ಮಾಡುತ್ತಿದೆ. 2000 ನೇ ಇಸ್ವಿಯಲ್ಲಿ ಹಲಸಿನ ಕ್ಷೇತ್ರ 6,000 ಹೆಕ್ಟೇರ್ ಇದ್ದದ್ದು 2010ರಲ್ಲಿ 55,000 ಹೆಕ್ಟೇರ್‌ಗೆ ವಿಸ್ತರಿಸಲಾಗಿದೆ.

**ಫಿಲಿಪೈನ್ಸ್ :** ಈ ದೇಶವು ಹಲಸಿಗೆ ಸೂಕ್ತವಾದ ದ್ವೀಪಗಳನ್ನು ಗುರುತಿಸಿ ಈಸ್ಟರ್ ವಿನಾಯಾಸ್ ಎಂಬ ದ್ವೀಪದಲ್ಲಿ ಸುಮಾರು 3,000 ಹೆಕ್ಟೇರ್‌ನಲ್ಲಿ ಹಲಸನ್ನು ಬೆಳೆಸುತ್ತಿದ್ದಾರೆ. ಆಸಕ್ತಿಯುಳ್ಳ ರೈತರಿಗೆ ಹಲಸನ್ನು ಬೆಳೆಸಲು ಪ್ರೇರೇಪಿಸಲು ವಿದ್ಯುನ್ಮಾನ (e-Training) ತರಬೇತಿ ಸೌಲಭ್ಯ ಒದಗಿಸಿದ ದೇಶವೆಂದರೆ ಫಿಲಿಪೈನ್ಸ್ ಆಗಿದೆ.

**ಚೀನಾ:** ಚೀನಾದ ಶೇ.85ರಷ್ಟು ಹಲಸು ಬೆಳೆಯುವ ಕ್ಷೇತ್ರ ಹೈನನ್ ದ್ವೀಪದಲ್ಲಿ ಇದೆ. ಚೀನಾದಲ್ಲಿ 1,80,000 ಹೆಕ್ಟೇರ್ ಪ್ರದೇಶದಲ್ಲಿ ಹಲಸು ಬೆಳೆಯುತ್ತಿದ್ದು ವಾರ್ಷಿಕ ಉತ್ಪಾದನೆ 1,50,000 ಮೆ.ಟನ್ ಇದೆ.

**ಇಂಡೊನೇಷಿಯಾ :** ಈ ದೇಶದ ಶೇ.80 ರಷ್ಟು ಹಲಸಿನ ಬೆಳೆಯು ತರಕಾರಿಯಂತೆ ಉಪಯೋಗಿಸಲ್ಪಡುತ್ತದೆ.

**ಶ್ರೀಲಂಕಾ:** ಶ್ರೀಲಂಕಾದಲ್ಲೂ ಹಲಸನ್ನು ಏಕ ಬೆಳೆಯಾಗಿ ಬೆಳೆಯುತ್ತಿಲ್ಲ. ಆದರೆ ಪ್ರತಿ ಮನೆಯಲ್ಲೂ ಕೆಲವು ಹಲಸಿನ ಮರಗಳು ಇವೆ. ಅನೇಕ ಸಂಸ್ಥೆಗಳು ಹಲಸಿನ ಮೌಲ್ಯ ವರ್ಧನೆಗೆ ತರಬೇತಿ ನೀಡುತ್ತಿವೆ. ಅಡುಗೆ ಮಾಡಲು ಅನುಕೂಲವಾಗುವ (Ready to Cook) ರೀತಿಯಲ್ಲಿ ಹಲಸಿಗೆ ಮೌಲ್ಯ ವರ್ಧನೆ ಮಾಡಿ ಮಾರಾಟ ಮಾಡುತ್ತಿದ್ದಾರೆ. ಹೀಗಾಗಿ ವರ್ಷದ ಹತ್ತು ತಿಂಗಳೂ ಹಲಸು ಲಭ್ಯ.

**ಮೆಕ್ಸಿಕೋ :** ಜಗತ್ತಿನ ಹಲಸಿನ ನಕಾಶೆಯಲ್ಲಿ ಮೆಕ್ಸಿಕೋ ದೇಶವು ಇತ್ತೀಚೆಗೆ ಸೇರಿದೆ. ಮೊದಲು ಹಲಸಿನ ಮರಗಳೇ ಇರಲಿಲ್ಲ. ಆದರೆ ಈಗ ಗಣನೀಯ ಪ್ರಮಾಣದಲ್ಲಿ ಹಲಸನ್ನು ಬೆಳೆದು ನೆರೆ ರಾಷ್ಟ್ರವಾದ ಅಮೇರಿಕಕ್ಕೆ ರಿಫ್ರಿಜರೇಟೆಡ್ ಟ್ರಕ್‌ಗಳಲ್ಲಿ ಸಾಗಾಣಿಕೆ ಮಾಡಿ ರಫ್ತು ಮಾಡುತ್ತಿದೆ.

ಹಲಸನ್ನು ನೆಟ್ಟು ನೀರು ಮತ್ತು ಗೊಬ್ಬರ ಕೊಟ್ಟು ಜಾನುವಾರುಗಳಿಂದ ರಕ್ಷಿಸಿದರೆ, ಆರು ಅಥವಾ ಏಳನೇ ವರ್ಷದಿಂದಲೇ ಫಲ ಕೊಡುತ್ತದೆ. ಕಸಿ ಮಾಡಿದ ಗಿಡಗಳಾದರೆ ಐದು ವರ್ಷದಲ್ಲೇ ಹಣ್ಣನ್ನು ಪಡೆಯಬಹುದು. ಹಲಸಿನ ಮರಕ್ಕೆ ಯಾವುದೇ ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಗಳ ಅವಶ್ಯಕತೆ ಇರುವುದಿಲ್ಲ ಹಾಗೂ ಕಡಿಮೆ ಖರ್ಚಿನಲ್ಲಿ, ಪರಿಸರ ಸಂರಕ್ಷಣೆಗೆ ಸ್ವಾಭಾವಿಕವಾಗಿ ಪೂರಕವಾಗಿದೆ.

ಇದರ ಇನ್ನೊಂದು ವೈವಿಧ್ಯಮಯ ಗುಣವೆಂದರೆ, ಇದು ಅತಿ ಹೆಚ್ಚು ಹಾಗು ಕಡಿಮೆ ಮಳೆ ಬರುವಂತಹ ಹವಾಗುಣದಲ್ಲೂ ಬೆಳೆಯುತ್ತದೆ, ಹಾಗೂ ಉಷ್ಣಾಂಶದಲ್ಲಿಯೂ ಸಹ ಇದರ ಹೊಂದಾಣಿಕೆ ಚೆನ್ನಾಗಿದೆ.

ಕರ್ನಾಟಕದ ಮೈಸೂರು ಮಲ್ಲಿಗೆ, ಕೊಡಗಿನ ಕಿತ್ತಳೆ, ಮಧುಗಿರಿ ದಾಳಿಂಬೆ, ನಂಜನಗೂಡಿನ ರಸಬಾಳೆ, ಧಾರವಾಡದ ಆಪೂಸ್ ಮಾವು, ದೇವನಹಳ್ಳಿಯ ಚಕ್ಕೋತದ ಹಾಗೇ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನ ತೂಬುಗೆರೆ ಹಲಸಿಗೆ ಪ್ರಸಿದ್ಧ. ಬೆಂಗಳೂರಿನಿಂದ ಕೇವಲ ಎರಡು ತಾಸಿನ ದಾರಿ. ತೂಬುಗೆರೆ ಹೋಬಳಿಯಲ್ಲಿ ತೂಬುಗೆರೆ, ಘಾಟಿ, ಆಡೋನಹಳ್ಳಿ, ಹೆಗ್ಡೆಹಳ್ಳಿ ಮತ್ತು ಮೇಳೇಕೋಟೆ



ಎಂಬ ಐದು ಗ್ರಾಮ ಪಂಚಾಯಿತಿಗಳಿದ್ದು 74 ಗ್ರಾಮಗಳನ್ನು ಒಳಗೊಂಡಿದೆ. ಈ ಗ್ರಾಮಗಳು ರಾಜ್ಯದ ಅತಿ ಶ್ರೇಷ್ಠ ಹಲಸಿನ ತಳಿಗಳ ಸಂಪನ್ಮೂಲವನ್ನು ಹೊಂದಿದೆ. ಈ ಹೋಬಳಿಯಲ್ಲಿ ಸುಮಾರು 5000 ಹಲಸಿನ ಮರಗಳಿವೆಯೆಂದು ಅಂದಾಜಿಸಲಾಗಿದೆ.

ಹಲಸಿನ ಮರದ ಲಕ್ಷಾಂತರ ಎಲೆಗಳು ಉದುರುವುದರಿಂದ ಒಳ್ಳೆಯ ಸಾವಯವ ಗೊಬ್ಬರವಾಗಿ ಪರಿವರ್ತನೆಯಾಗುತ್ತದೆ. ಹಸಿರೆಲೆಗಳು ಆಡುಗಳಿಗೆ ಉತ್ತಮವಾದ ಆಹಾರವನ್ನು ಒದಗಿಸುವುದರಿಂದ ರೈತರ ಆರ್ಥಿಕ ಸಬಲತೆಗಾಗಿ ಮನೆ ಮನೆಗಳಲ್ಲಿ ಆಡುಗಳನ್ನು ಸಾಕುತ್ತಿರುವುದು ಗಮನಾರ್ಹ ಸಂಗತಿಯಾಗಿದೆ.

**ಬಹುಶ:** ಸ್ವಾಭಾವಿಕವಾಗಿ ಸಾವಯವ ಕೃಷಿಯಿಂದಲೇ ಮಳೆಯ ಆಶ್ರಿತದಲ್ಲಿ ಬೆಳೆಯುವ ಹಣ್ಣು ಎಂದರೆ ಹಲಸು. ಹಣ್ಣಿನ ಜೊತೆಗೆ ಉತ್ತಮವಾದ ಮರ ಮುಟ್ಟುಗಳನ್ನು ನೀಡುವ ಮರವಾಗಿದೆ. ಈ ತೂಬುಗೆರೆ ಹೋಬಳಿಯ ಒಬ್ಬ ಗ್ರಾಮಸ್ಥರು ಹೇಳುತ್ತಾರೆ "ನಮ್ಮ ಮನೆಗಳಲ್ಲಿ ನಾಲ್ಕು ಮರಗಳಿವೆ ನಮಗೆ ಪ್ರತಿ ಮರದಿಂದ ಸುಮಾರು ಸರಾಸರಿ ಮೂರು ಸಾವಿರ ರೂಪಾಯಿ ಆದಾಯ ಬರುತ್ತದೆ".

6 – 8 ವರ್ಷದ ಹಲಸಿನ ಮರವು ಸರಾಸರಿ 60 ಹಣ್ಣುಗಳನ್ನು ನೀಡುತ್ತದೆ. ಸರಾಸರಿ ಒಂದು ಹಣ್ಣಿಗೆ ರೂ.100/– ಎಂದರೂ ರೂ.6000/– ಆದಾಯ. ಖರ್ಚು ತೆಗೆದರೆ 3 ಸಾವಿರ ರೂಪಾಯಿ ಪ್ರತಿ ಮರದಿಂದ ನಿರೀಕ್ಷಿಸಬಹುದು. ಹಾಗೆ ಮನೆಯಲ್ಲೇ ಒಂದು ಆಡನ್ನು 2500 ರೂ.ಗೆ ಖರೀದಿಸಿ ಹಲಸಿನ ಎಲೆ ಮತ್ತು ಜೋಳ ಮೊದಲಾದ ಆಹಾರವನ್ನು ನೀಡಿ 9 ತಿಂಗಳು ಸಾಕಿದರೆ, ಬಕ್ರೀದ್ ಹಬ್ಬದಲ್ಲಿ ರೂ.10,000/– ರೂ.ಗೆ ಮಾರಾಟ ಮಾಡಬಹುದು.

ತೂಬುಗೆರೆ ಹಲಸಿಗೆ ಮಾನ ತಂದುಕೊಟ್ಟ ಕೀರ್ತಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜೈವಿಕ ತಂತ್ರ ಜ್ಞಾನ ವಿಭಾಗದ ಸಂಪನ್ಮೂಲ ಸಂಕೀರ್ಣದ ಯೋಜನೆಗೆ ಸೇರುತ್ತದೆ. ಜೊತೆಗೆ ಹಾಡೋನಹಳ್ಳಿಯ ಕೃಷಿ ವಿಜ್ಞಾನ ಕೇಂದ್ರವು ಈ ತೂಬುಗೆರೆ ಹಲಸಿನ ತಳಿಗಳನ್ನು ರಕ್ಷಿಸಿ, ಮೊಗ್ಗು ಕಸಿ ಕ್ರಮದಿಂದ ತಳಿಗಳ ಸಸಿಗಳನ್ನು ತಯಾರಿಸಿ ರೈತರಲ್ಲಿ ಹಲಸನ್ನು ವೈಜ್ಞಾನಿಕವಾಗಿ ಬೆಳೆಸಲು ಪ್ರೋತ್ಸಾಹ ನೀಡುತ್ತಾ ಇದೆ.

ತೂಬುಗೆರೆಯಲ್ಲಿ ಕಾಚಹಳ್ಳಿ ಗ್ರಾಮ ಹಲಸಿಗೆ ಪ್ರಸಿದ್ಧ. ನರಸಿಂಹಯ್ಯನವರ ಹೊಲದಲ್ಲಿರುವ 300 ವರ್ಷ ಹಳೆಯದಾದ ಹಲಸಿನ ಮರದಿಂದ, ಕಾಚಹಳ್ಳಿಯು, ಹಲಸು ಬೆಳೆಗಾರರ ನಡುವೆ ಹೆಸರು ಗಳಿಸಿದೆ. "ನಮ್ಮ ಮರದಿಂದ ಮೈಸೂರಿನ ಕೊನೆಯ ರಾಜರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರಿಗೆ ಮತ್ತು ದಿವಾನ ಡಾ.ಎಂ.ವಿಶ್ವೇಶ್ವರಯ್ಯರವರಿಗೆ ಪ್ರತಿ ವರ್ಷ ಹಲಸಿನ ತೊಳೆ ಹೋಗುತ್ತಿತ್ತು ಯಾಕೆಂದರೆ ಅವರು ಇಷ್ಟಪಡುವ ಹಣ್ಣಾಗಿತ್ತು" ಎಂದು 87 ವರ್ಷದ ಶ್ರೀ ನರಸಿಂಹಯ್ಯರವರು, (ತೂಬುಗರೆ ಹಲಸು ಬೆಳೆಗಾರರ ಸಂಘದ ಅಧ್ಯಕ್ಷರು) ಹೆಮ್ಮೆಯಿಂದ ಹೇಳುತ್ತಾರೆ. ಕಾಚಹಳ್ಳಿಯಲ್ಲಿ ಮನೆ ಮನೆಗಳಲ್ಲಿ ಹಲಸು ಇದೆ. ನೆರೆಯ ಆಂಧ್ರ ಪ್ರದೇಶದ ಮದನಪಲ್ಲಿ, ಹೈದರಾಬಾದಗಳಿಂದಲೂ ವ್ಯಾಪಾರಿಗಳು ಬಂದು ಇಲ್ಲಿನ ಹಲಸನ್ನು ಕೊಂಡೊಯುತ್ತಾರೆ. ಈ ಹೋಬಳಿಯ ಎಲ್ಲರ ಜಮೀನುಗಳಲ್ಲಿ ಹಲಸು ಇದೆ. ಒಂದು ಹನಿ ನೀರಾಗಲೀ ಅಥವಾ ಒಂದು ಕಿಲೋ ಗೊಬ್ಬರವಾಗಲೀ ಹಾಕುವುದಿಲ್ಲ.




ಹಲಸು ಕೃಷಿ ಮತ್ತು ಮಾರಾಟ ಪರಿಸ್ಥಿತಿ ಅಧ್ಯಯನ ಮಾಡಿ ಮೊತ್ತ ಮೊದಲನೆಯದಾಗಿ ಒಣ ಭೂಮಿಯಲ್ಲಿ ಹಲಸಿನ ಮಹತ್ವದ ಜಾಗೃತಿ ಮೂಡಿಸಲು ಹಾಡೋನಹಳ್ಳಿಯ ಕೃಷಿ ವಿಜ್ಞಾನ ಕೇಂದ್ರ ಮತ್ತು ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಒಂದು ಪ್ರಾಮಾಣಿಕ ಪ್ರಯತ್ನ ಮಾಡಿವೆ. ಹೀಗಾಗಿ 2007ರಲ್ಲಿ ತೂಬುಗೆರೆ ಹಲಸು ಬೆಳೆಗಾರರ ಸಂಘ ಆಸ್ತಿತ್ವಕ್ಕೆ ಬಂದು ಮೊದಲ

ವರ್ಷ 4 ಲಕ್ಷ ರೂ. ವ್ಯವಹಾರ ಮಾಡಿದರೆ 2013-14ರಲ್ಲಿ 28 ಲಕ್ಷ ರೂ.ಯ ವ್ಯವಹಾರ ಮಾಡಿದೆ. ಸಂಘವು ಬಂದಾಗಿನಿಂದ ವ್ಯಾಪಾರಿಗಳು ಮೊದಲಿನ 3 ಪಟ್ಟು ದರವನ್ನು ರೈತರಿಗೆ ಕೊಡುತ್ತಿದ್ದಾರೆ. ಬೆಂಗಳೂರಿನ ಹಾಪ್‌ಕಾಮ್ಸ್ ಒಂದು ಕೆ.ಜಿ.ಗೆ 10 ರೂ. ನೀಡಿದರೆ ಸಂಘವು 1 ರೂ. ಕಡತ ಮಾಡಿ, ಸಾಗಾಣಿಕೆ-ಮಾರಾಟದ ಖರ್ಚು ಪ್ರತಿ ಕಿಲೋಕ್ಕೆ 3 ರೂ. ಉಳಿದ ನಿವ್ವಳ ರೂ.6/- ರೈತರಿಗೆ ದೊರೆಯುತ್ತಿದೆ.

ಕಾಚಹಳ್ಳಿ ಶ್ರೀ ನರಸಿಂಹಯ್ಯರವರು ಈ ಸಂಘದ ಅಧ್ಯಕ್ಷರು. ಮೇಳೆಕೋಟೆಯ ಶ್ರೀ ರವಿಕುಮಾರ ಈ ಸಂಘದ ಕಾರ್ಯದರ್ಶಿ. ಹಲಸು ಮರ ಬೆಳೆಸಿ ನೆಡುವುದಕ್ಕೆ ಪ್ರೋತ್ಸಾಹ ಮತ್ತು ಮೌಲ್ಯವರ್ಧನೆ ಈ ಸಂಘದ ಉದ್ದೇಶ. ಕಡಿಮೆ ಪ್ರಮಾಣದಲ್ಲಿ ಹಲಸು ಬೆಳೆಯುವವರಿಗೆ ಬೆಂಗಳೂರಿಗೆ ಸಾಗಿಸುವುದು ದುಸ್ತರ. ಒಂದು ವೇಳೆ ಸಾಗಿಸಿದರೂ ಖರ್ಚು ಹೆಚ್ಚು. ಸಂಘ ಹಳ್ಳಿ ಕೇಂದ್ರದಿಂದ ಒಯ್ದು ಮನೆ ಮನೆಗೆ ಹಣ ಪಾವತಿ ಮಾಡುವ ಜವಾಬ್ದಾರಿ ತೆಗೆದುಕೊಳ್ಳುತ್ತದೆ. ಸಾಧಾರಣವಾಗಿ ಒಂದು ಹಣ್ಣು 10 ರಿಂದ 25 ಕೆ.ಜಿ. ತೂಗುತ್ತದೆ. ಮೊದಲು ಫಲ ಗುತ್ತಿಗೆ ಕೊಡುವಾಗ ಗುತ್ತಿಗೆದಾರರು ಬಲಿತ ಮತ್ತು ಎಳೆಯ ಹಣ್ಣುಗಳನ್ನು ಒಂದೇ ಸಲ ಕೆಡವುತ್ತಿದ್ದರು. ಇದರಿಂದ ಹಾಲು ಸೋರಿ ಹೋಗಿ ಮರಕ್ಕೆ ನೋವಾಗುತ್ತಿತ್ತು. ಈ ಸಂಘದ ಕಾರ್ಯಕ್ರಮದಿಂದ, ರೈತರು ಮರಕ್ಕೆ ಹಾನಿಯಾಗದಂತೆ ಹಣ್ಣು ಬಲಿತಂತೆ ಕೊಯ್ಲು ಮಾಡಲು ಅನುಕೂಲವಾಗಿದೆ.

ಶ್ರೀ ರವಿಕುಮಾರ, ಕಾರ್ಯದರ್ಶಿ, ತೂಬುಗೆರೆ ಹಲಸು ಬೆಳೆಗಾರರ ಸಂಘ ಮತ್ತು ಊರವರು ತೂಬುಗೆರೆ ಹಲಸಿನ ಮರಗಳಲ್ಲಿ ವಿಶೇಷವಾದ ತಳಿಗಳನ್ನು ಐದು ವರ್ಗಗಳಲ್ಲಿ ಗುರುತಿಸುತ್ತಾರೆ.

**ಏಕಾದಶಿ ಹಲಸು** : ಋತುವಿನಲ್ಲಿ ತಡ. ಆಗಸ್ಟ್‌ದವರೆಗೂ ಇರುತ್ತದೆ.

**ಶಿವರಾತ್ರಿ ಹಲಸು** : ಮೊಟ್ಟ ಮೊದಲು ಬೆಳೆ ಕೊಡುವಂಥದ್ದು. ಫೆಬ್ರವರಿಯಲ್ಲಿ ಆರಂಭ.

**ಚಂದ್ರ ಹಲಸು** : ಕೆಂಪು ತೊಳೆಯದು

**ಬಂಗಾರದ ಹಲಸು** : ಚಿನ್ನದಂತಹ ಹಳದಿ ಬಣ್ಣ

**ಬೇರು ಹಲಸು** : ಇದರ ಕಾಯಿಗಳು ಬುಡದಲ್ಲಿ ಭೂಗತವಾಗಿ ಆಗುವುದಿದೆ. ಹಣ್ಣಾದರೆ ಅಲ್ಲಿ ಮಣ್ಣು ಸ್ವಲ್ಪ ಬಿರುಕು ಬಿಡುತ್ತದೆ.

ಹಲಸು ಪರಕೀಯ ಪರಾಗಸ್ಪರ್ಶ ಮರವಾಗಿರುತ್ತದೆ ಯಾದರೂ ಸಾಮಾನ್ಯವಾಗಿ ಬೀಜಗಳಿಂದಲೇ ಸಸಿ ಮಾಡಿ ನಾಟಿ ಮಾಡುತ್ತಾರೆ. ಇತ್ತೀಚಿನ ವರ್ಷಗಳಲ್ಲಿ ಉತ್ತಮ ಜಾತಿಯ ಹಲಸಿನ ಮರಗಳಿಂದ ಮೊಗ್ಗು ಕಸಿ ಮಾಡಿ ಸಸಿ ತಯಾರಿಸುವ ವಿಧಾನವನ್ನು ಕೃಷಿ ವಿಜ್ಞಾನ ಕೇಂದ್ರ, ಹಾಡೋನಹಳ್ಳಿಯ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹಿರಿಯ ವಿಜ್ಞಾನಿಗಳಾದ ಡಾ.ಕೆ.ಎನ್.ಶ್ರೀನಿವಾಸಪ್ಪನವರು ದೃಢೀಕರಿಸಿದ್ದಾರೆ ಮತ್ತು ಹಲಸಿನ ಹಣ್ಣಿನ ಮೌಲ್ಯ ವರ್ಧನೆಗೂ ಇವರು ಒತ್ತು ನೀಡಿರುತ್ತಾರೆ.

ಹಲಸಿನ ಹಣ್ಣು ಅಧಿಕ ಪೋಷಕಾಂಶಗಳಿಂದ ಕೂಡಿದ ಆಕರ್ಷಕ ಬಣ್ಣ ಮತ್ತು ಪರಿಮಳ ಹೊಂದಿದ ಹಣ್ಣು, ಇದರಲ್ಲಿ ಮುಖ್ಯ ಪೋಷಕಾಂಶಗಳಾದ ಪ್ರೋಟೀನ್ (ಸಸಾರಜನಕ), ನಾರಿನಾಂಶ, ಶಕ್ತಿ, ಜಿಡ್ಡು, ಜೀವಸತ್ವಗಳಾದ ಎ ಮತ್ತು ಸಿ ಜೀವಸತ್ವ, ಸುಣ್ಣ, ರಂಜಕ, ಕಬ್ಬಿಣದಂಥಾ ಖನಿಜಾಂಶಗಳನ್ನು ಹೊಂದಿದೆ. ತೊಳೆಗಳನ್ನು ಬಿಡಿಸಿ ತಿನ್ನುವುದು ಸಾಮಾನ್ಯ ವಾಡಿಕೆ. ತೊಳೆ, ಬೀಜ ಮತ್ತು ಎಳೆ ದಿಂಡಿನಿಂದ ಹಲವು ಮೌಲ್ಯ ವರ್ಧಿತ ಉತ್ಪನ್ನಗಳನ್ನು ತಯಾರಿಸಬಹುದು. ಎಳೆ ಹಲಸಿನ ಕಾಯಿಯನ್ನು ತರಕಾರಿಯಾಗಿ ಉಪಯೋಗಿಸಬಹುದು. ಹಲಸಿನ ಹಣ್ಣಿನ ತೊಳೆಗಳಿಂದ ಹಲ್ವ, ಜ್ಯೂಸ್, ಜ್ಯಾಮ್ ತಯಾರಿಸಬಹುದು. ಹಸಿ

ತೊಳೆಗಳಿಂದ ಚಿಪ್ಸ್, ಹಪ್ಪಳ ತಯಾರಿಸಬಹುದು. ಅದೇ ರೀತಿ ಬೀಜದ ಹಿಟ್ಟಿನಿಂದ ಬೊಂಡಾ, ಚಪಾತಿ, ಬಿಸ್ಕತ್ತು ತಯಾರಿಸಬಹುದು.

ತೂಬುಗೆರೆ ಹಲಸಿನ ಮರವನ್ನು ಬೆಳೆಸುವದರ ಒಂದು ವೈಶಿಷ್ಟ್ಯವೆಂದರೆ ಈಗಿರುವ 5000 ಹಲಸಿನ ಮರಗಳೂ ಬೀಜದಿಂದಲೇ ಬೆಳೆಸಿದ್ದು. ಈ ಮರದ ಬೀಜದ ಸಸಿ ಮಾಡುವ ವಿಧಾನವೂ ವಿಶೇಷತೆಯಿಂದ ಕೂಡಿದೆ. ಮರದ ತುದಿಯಲ್ಲಿ ಕೊನೇ ರೆಂಬೆಯಲ್ಲಿ ಇರುವ ಹಲಸಿನ ಕಾಯಿಗೆ ಮರದ ಮೇಲೆಯೇ ಹಣ್ಣಾಗಲು ಬಿಟ್ಟು ನಂತರ, ಹಗ್ಗದಿಂದ ಇಳಿಸಿ ಒಂದು ದಿನದೊಳಗೆ ಅದರ ಬೀಜ ತೆಗೆದು ಪ್ಲಾಸ್ಟಿಕ್ ಕವರಿಗೆ ಹಾಕಿ ಸಸಿ ತಯಾರಿಸುತ್ತಾರೆ. 1/4 ಕೆ.ಜಿ. ಗೊಬ್ಬರ ಮತ್ತು 1/4 ಕೆ.ಜಿ. ಮಣ್ಣು ಕಲಸಿದ್ದನ್ನು ಪ್ಲಾಸ್ಟಿಕ್ ಕವರಿನಲ್ಲಿ ಇಟ್ಟು ನೀರು ಹಾಕಿದರಾಯಿತು. ಕವರದಲ್ಲಿದ್ದ ಬೀಜ ಒಂದು ವಾರದಲ್ಲಿ ಮೊಳಕೆಯೊಡೆಯುತ್ತದೆ. ನೀರು ಹಾಕುತ್ತಿರಬೇಕು. ಮತ್ತು ಸ್ವಲ್ಪ ಮಣ್ಣು ಹಾಕುತ್ತಿರಬೇಕು. ಒಂದು ತಿಂಗಳ ನಂತರ ಪ್ಲಾಸ್ಟಿಕ್ ಕವರ್‌ನ ತಳಭಾಗವನ್ನು ಕತ್ತರಿಸಿ, ಜಮೀನಿನಲ್ಲಿ ಮೊದಲೇ ತೆಗೆದ ಗುಂಡಿಯಲ್ಲಿ ನಾಟಿ ಮಾಡಬೇಕು. ತೂಬುಗೆರೆ ಹಲಸಿನ ಹಣ್ಣಿನ ಬೀಜಕ್ಕೂ ಒಳ್ಳೆ ಬೆಲೆ ಇದೆ. ಒಂದು ಬೀಜಕ್ಕೆ ರೂ.2/– ಸಿಗುತ್ತದೆ.

**ಹಲಸಿನ ಮೇಳ:** ತೂಬುಗೆರೆ ಹಲಸು ಬೆಳೆಗಾರರ ಸಂಘವು ಪ್ರತಿ ವರ್ಷ ಅನೇಕ ಹಲಸಿನ ಮೇಳಗಳಲ್ಲಿ ತಮ್ಮ ಹಣ್ಣುಗಳನ್ನು ಪ್ರದರ್ಶಿಸಲು ಸ್ಟಾಲ್ ತೆಗೆದು ಹಲಸಿನ ತೊಳೆಗಳನ್ನು 10 ರೂ.ಗೆ 2 ಅಥವಾ 3 ರಂತೆ ಮಾರುತ್ತಾರೆ. ಈಗಾಗಲೇ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಲಾಲ್‌ಬಾಗ್, ಸಿರ್ಸಿ, ತಿಪಟೂರು, ತುಮಕೂರು ಮೊದಲಾದ ಕಡೆ ನಡೆದ ವಾರ್ಷಿಕ ಹಲಸಿನ ಮೇಳದಲ್ಲಿ ಭಾಗವಹಿಸಿದ್ದಾರೆ. ಬರ ಬರುವುದನ್ನು ತಡೆಯಬೇಕಿದ್ದರೆ ಹಲಸು ನೆಡಬೇಕು. ಯಾಕೆಂದರೆ ಮರದ ಬೇರು ತುಂಬಾ ಆಳಕ್ಕೆ ಹೋಗಿ ಮಳೆ ನೀರು ಇಂಗಲು ಸಹಾಯಕಾರಿಯಾಗುತ್ತದೆ.

## ವಾಣಿಜ್ಯ ಬೆಳೆಯಾಗಿ ಹಲಸು:

ಹಲಸಿನಲ್ಲಿ ಮುಖ್ಯವಾಗಿ ಎರಡು ವಿಧವಾದ ಹಣ್ಣುಗಳನ್ನು ಮಲೆನಾಡಿನಲ್ಲಿ ಕಾಣಬಹುದು. ಅವುಗಳೆಂದರೆ: ಒಂದು ಬಕ್ಕೆ (ಬರಿಕ್ಕ) ಎರಡನೇಯದು ತುಳುವ (ಅಂಬಲಿ). ಇವುಗಳಲ್ಲಿ ವಾಣಿಜ್ಯಕ್ಕಾಗಿ ಎಲ್ಲರೂ ಬಕ್ಕೆಯನ್ನು ಇಷ್ಟಪಡುತ್ತಾರೆ, ಏಕೆಂದರೆ ಇದರ ತೊಳೆಗಳು ಗಟ್ಟಿಯಾಗಿದ್ದು, ಬಿಡಿಸಲು ಹಾಗೂ ತಿನ್ನಲು ಸುಲಭ ಮತ್ತು ಹೆಚ್ಚು ರುಚಿಕರ. ಆದರೆ ತುಳುವ ಅಥವಾ ಅಂಬಲಿ ಹಣ್ಣಾದಾಗ ಸಿಪ್ಪೆಯನ್ನು ಕೈಯಿಂದಲೇ ಬಗೆದು ತೆಗೆಯಬಹುದು. ಆದರೆ ಇದರ ತೊಳೆಗಳು ಹೆಚ್ಚು ನಾರಿನಾಂಶ ಹೊಂದಿರುವುದರಿಂದ, ತಿನ್ನಲು ಕಷ್ಟ ಮತ್ತು ರುಚಿಯು ಕಡಿಮೆ. ಈ ಎರಡು ವಿಧಗಳು ಕಾಯಿಂಯಾಗಿದ್ದಾಗ ಒಂದೇ ತೆರನಾಗಿದ್ದು, ಬೇರ್ಪಡಿಸುವುದು ಬಹಳ ಕಷ್ಟ. ಸಾಮಾನ್ಯವಾಗಿ ತುಳುವ/ಅಂಬಲಿ ಹಲಸು ಮಲೆನಾಡು ಮತ್ತು ಕರಾವಳಿಯಲ್ಲಿ ಹೆಚ್ಚಾಗಿ ಕಂಡುಬರುತ್ತದೆ, ಹಾಗೂ ಇದನ್ನು ಹೆಚ್ಚಾಗಿ ತರಕಾರಿಯಾಗಿ ಮತ್ತು ಹಪ್ಪಳ ಮಾಡಲು ಬಳಸುವುದು ಕಂಡುಬಂದಿದೆ.



ತಾಯಿ ಮರದ ಬೀಜದ ಸಸಿ ಮರ

ಹಲಸಿನ ಹಣ್ಣಿನ ಗಾತ್ರ, ಬಣ್ಣ, ಆಕಾರ, ತೊಳೆಯಬಣ್ಣ, ರುಚಿ ಬಹಳ ವೈವಿಧ್ಯಮಯವಾಗಿರುತ್ತವೆ. ಇವುಗಳಲ್ಲಿ ಹುಣ್ಣಿಮೆ ಚಂದ್ರನಂತೆ ಬಣ್ಣ ಹೊಂದಿರುವ ಚಂದ್ರ ಹಲಸಿಗೆ ಭಾರಿ ಬೇಡಿಕೆ ಇದೆ. ಗುಂಡಾಗಿ ರುದ್ರಾಕ್ಷಿಯನ್ನು ಹೋಲುವಂತಿರುವ, 2ರಿಂದ 3 ಕೆ.ಜಿ. ತೂಕವುಳ್ಳ ರುದ್ರಾಕ್ಷಿ ಹಲಸಿಗೂ ಸಹ ಉತ್ತಮ ಬೇಡಿಕೆ ಇದೆ. ಇಂತಹ ಹಲವಾರು ಮರಗಳನ್ನು ಗುರುತಿಸಲಾಗಿದ್ದು ಅವುಗಳನ್ನು ರೈತರು ಸುಲಭವಾಗಿ ಬೆಳಸಬಹುದಾಗಿದೆ. ರಾಜ್ಯದ ಕರಾವಳಿಯಿಂದ ಬಯಲು ಸೀಮೆಯವರೆಗೆ ಹಲವು ವಿಧದ ಹಲಸಿನ ಹಣ್ಣುಗಳನ್ನು ಕಾಣಬಹುದು. ಆದರೆ ಇಳುವರಿ, ಹಣ್ಣಿನ ಗಾತ್ರ, ಆಕಾರ, ತೊಳೆಯ ಬಣ್ಣ, ರುಚಿ, ಪರಿಮಳ ಇತ್ಯಾದಿಗಳನ್ನು ಗಣನೆಗೆ ತೆಗೆದುಕೊಂಡು, ಕೃಷಿ

ವಿಶ್ವವಿದ್ಯಾನಿಲಯದ ತಜ್ಞರು, ಸಾರ್ವಜನಿಕರು, ಬೆಳೆಗಾರರು, ಗ್ರಾಹಕರು ಕೆಲವು ವಿಶಿಷ್ಟ ಮರಗಳನ್ನು ಗುರುತಿಸಿರುತ್ತಾರೆ. ಅವುಗಳಲ್ಲಿ ಪ್ರಮುಖವಾದವುಗಳು.



ಎಡದಲ್ಲಿ ರವಿಕುಮಾರ್, ಬಲಕ್ಕೆ ಜಿ.ಎಂ. ಮಲಿಂಗಣ್ಣ

1. ದೊಡ್ಡಬಳ್ಳಾಪುರ ತಾಲ್ಲೂಕು ತೂಬುಗೆರೆ ಹೋಬಳಿ ಕಾಚಹಳ್ಳಿ ಹಲಸು
2. ಮಾಗಡಿ ತಾಲ್ಲೂಕು ಜಾಣಗೆರೆ ಹಲಸು
3. ದೊಡ್ಡಬಳ್ಳಾಪುರ ತಾಲ್ಲೂಕು ತಪಸೀಹಳ್ಳಿ 'ಸದಾನಂದ'– ವರ್ಷಪೂರ್ತಿ ಹಣ್ಣು ಬಿಡುವ ಹಲಸು
4. ಮಲೆನಾಡಿನ ಅಂಟುರಹಿತ ಹಲಸು
5. ಸಕ್ಕರೆಪಟ್ಟಣ ಹಲಸು
6. ಬೆಂಗಳೂರು ಜಿಕೆವಿಕೆ ತೋಟಗಾರಿಕಾ ಕ್ಷೇತ್ರದಲ್ಲಿರುವ ಸಿಂಗಪೂರ್ ಹಲಸು (ಸಿಲೋನ್ ಹಲಸು): ಇದು ಒಂದು ಒಳ್ಳೆಯ ತಳಿಯಾಗಿದ್ದು ಬೇಗನೆ ಫಲ ಕೊಡುತ್ತದೆ, ಹಣ್ಣುಗಳು ಮಧ್ಯಮ ಗಾತ್ರದ್ದಾಗಿವೆ.
7. ಹಳ್ಳಿ ಮೈಸೂರು ಹಲಸು
8. ಬೆಂಗಳೂರು ಲಾಲ್‌ಬಾಗ್‌ನಲ್ಲಿರುವ ಲಾಲ್‌ಬಾಗ್ ಮಧುರ ತಳಿ
9. ಇತರೆ ಸ್ಥಳೀಯ ತಳಿಗಳಾದ ಚಂದ್ರ ಹಲಸು, ರುದ್ರಾಕ್ಷಿ, ಮುಂತಾದವುಗಳನ್ನು ರಾಜ್ಯದ ಕೆಲವು ಭಾಗಗಳಲ್ಲಿ ಕಾಣಬಹುದು.

ಜೊತೆಗೆ ರೈತರು, ಹಲಸು ಬಲಿತು ಹಣ್ಣಾಗುವ ಕಾಲಗಳನ್ನನುಸರಿಸಿ, ಸಂಕ್ರಾಂತಿ ಹಲಸು, ಶಿವರಾತ್ರಿ ಹಲಸು, ಯುಗಾದಿ ಹಲಸು, ಏಕಾದಶಿ ಹಲಸು ಹಾಗೂ ವರ್ಷ ಪೂರ್ತಿ ಹಣ್ಣು ಬಿಡುವ ಹಾಗೂ ಅಂಟಿಲ್ಲದ ಮರಗಳನ್ನು ಸಹ ಗುರುತಿಸಲಾಗಿದೆ.

ಇತ್ತೀಚಿನ ದಿನಗಳಲ್ಲಿ ಅನೇಕ ರೈತರು ಹಲಸನ್ನು ವಾಣಿಜ್ಯ ಮತ್ತು ಪೂರ್ಣ ಬೆಳೆಯಾಗಿ (Block Plantation) ಬೆಳೆಯುತ್ತಿದ್ದಾರೆ. ಕೆಲವರಂತೂ ದ್ರಾಕ್ಷಿ ಬೆಳೆಯ ಬದಲು ಹಲಸು ಬೆಳೆಸಿದ್ದಾರೆ.

ಹಾಸನ ಜಿಲ್ಲೆಯ ಅರಕಲಗೂಡಿನ ಶ್ರೀ ಚನ್ನೇಗೌಡರು 8 ಎಕರೆಯಲ್ಲಿ (94484 01016),



ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವೆಂಕಟಗಿರಿಕೋಟೆ ಹಳ್ಳಿಯ ಶ್ರೀ ಕೃಷ್ಣಮೂರ್ತಿ 7 ಎಕರೆಯಲ್ಲಿ (99451 91836), ದಕ್ಷಿಣ ಕನ್ನಡ ಜಿಲ್ಲೆಯ ಮುಳಿಯದ ಹಲಸಿನಕೂಟದ ಶ್ರೀ ವೆಂಕಟಕೃಷ್ಣ ಶರ್ಮಾ (94802 00832), ಎಲ್ಲ 300 ಮರಗಳು ಕಸಿ ಸಸಿಗಳು. ಕಸಿ ಗಿಡಗಳನ್ನು ಹಾಡೋನಹಳ್ಳಿ ಕೃಷಿ ವಿಜ್ಞಾನ ಕೇಂದ್ರ ಒದಗಿಸಿದೆ. ಹನಿ ನೀರಾವರಿ ಮಾಡಲಾಗಿದೆ.

ಒಂದು ಎಕರೆ, ತೂಬುಗೆರೆಯ ಶ್ರೀ ನಾಗರಾಜ 1 1/2 ಎಕರೆ ಮತ್ತು ತೂಬುಗೆರೆಯ ಶ್ರೀ ಪ್ರಕಾಶ 1 ಎಕರೆ ಹೀಗೆ ಅನೇಕ ರೈತರು ಹಲಸನ್ನು ವಾಣಿಜ್ಯ ಬೆಳೆಯಾಗಿ ಬೆಳೆಯುತ್ತಿದ್ದಾರೆ. ತಮಿಳುನಾಡಿನ ಕಡ್ಡಲೂರು ಜಿಲ್ಲೆಯ ಮಲಿಗೆಂಪಟ ಹಳ್ಳಿಯಲ್ಲಿ ಕೆ.ಕರುಣಾಕರನ್ ಅವರು 6 1/2 ಎಕರೆಯಲ್ಲಿ ಹಲಸಿನ ತೋಟ ಮಾಡಿದ್ದಾರೆ. ಕೇರಳ ರಾಜ್ಯದಲ್ಲಿ ಮನೆ ಮನೆಗಳಲ್ಲಿ ಹಲಸಿನ ಮರವನ್ನು ಕಾಣಬಹುದು.

ಹಲಸಿನ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಅಡಿಕೆ ಮಾಸಿಕ ಪತ್ರಿಕೆ ವೆಬ್‌ಸೈಟ್ (www.adikepatrike.com) ವೀಕ್ಷಿಸಬಹುದು. ಅಡಿಕೆ ಪತ್ರಿಕೆಯ ಶ್ರೀ ಪಡ್ರೆಯವರು ಹಲಸಿನ ಪ್ರಚಾರಕ್ಕೆ ನೀಡಿರುವ ದೊಡ್ಡ ಕೊಡುಗೆ ಅಪಾರವಾದದ್ದು. ಅವರು ಅಡಿಕೆ ಪತ್ರಿಕೆಯಲ್ಲಿ ಸುಮಾರು 12 ಹಲಸು ವಿಶೇಷಾಂಕಗಳನ್ನು ಹೊರತಂದಿದ್ದಲ್ಲದೇ, ಉಚಿತವಾಗಿ ಅವರ ವೆಬ್ ಸೈಟ್‌ನಿಂದ ಆಸಕ್ತಿ ಇದ್ದವರು ಓದುವಂತೆ ಅನುಕೂಲ ಮಾಡಿದ್ದಾರೆ. ನಮ್ಮ ದೇಶದಲ್ಲಿ ಹಲಸನ್ನು ಪ್ರಚಾರ ಮಾಡಲು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಜಲಾನಯನ ಪ್ರದೇಶದಲ್ಲಿ ಹಲಸನ್ನು ಬೆಳೆಸಬಹುದು. ಯಾಕೆಂದರೆ ಎರೆ-ಮಣ್ಣಿನಲ್ಲಿಯೂ ಒಂದು ಮೀಟರ್ ಗುಂಡಿ ತೆಗೆದು ಸ್ವಲ್ಪ ಕೆಂಪು ಗರಸು ಮಣ್ಣು, ಬೇವಿನ ಹಿಂಡಿ ಮಿಶ್ರಣ ಮಾಡಿ ಹಲಸಿನ ಸಸಿ ನೆಟ್ಟು ಬೇಲಿ ನಿರ್ಮಿಸಿ, ರಕ್ಷಣೆ ನೀರಾವರಿ ಮಾಡಿ 4-5 ವರ್ಷ ಆರೈಕೆ ಮಾಡಿದರೆ ಮತ್ತೆ ನೂರಾರು ವರ್ಷ ಹಲಸು ರೈತನನ್ನು ಆರ್ಥಿಕವಾಗಿ ಕಾಪಾಡುತ್ತದೆ.

ಹಲಸಿನ ಹಣ್ಣಿನ ಅಂಟು (ಮೇಣ) ಮತ್ತು ಮುಳ್ಳು ಈ ಗುಣಗಳಿಂದ ಈ ಹಣ್ಣು ಇನ್ನೂವರೆಗೆ ಹೆಚ್ಚಾಗಿ ತಿಂಡಿ, ಅಡುಗೆ ಮತ್ತು ಊಟದಲ್ಲಿ ಬಳಕೆಯಾಗುತ್ತಿಲ್ಲ. ಆದರೆ, ಎಳೆ ಹಲಸಿನ ಕಾಯಿಯನ್ನು ಡ್ರೆಸ್ಡ್ ಚಿಕನ್‌ನಂತೆ ಮೌಲ್ಯವರ್ಧನೆ ಮಾಡಿ, ಮಹಿಳೆಯರು ಅಡುಗೆಯಲ್ಲಿ ಬಳಸಲು ಇಷ್ಟಪಡುವಂತೆ ಮಾಡಬಹುದು. ಎಳೆ ಹಲಸಿನ ಕಾಯಿಗೆ ಯಾವುದೇ ಪರಿಮಳ ಇರುವುದಿಲ್ಲ. ಹೀಗಾಗಿ ಇಷ್ಟವಾದ ಪರಿಮಳವನ್ನು ಹಾಕಿ ಮಂಚೂರಿ, ಕಬಾಬ್ ಮತ್ತು ಬಿರಿಯಾನಿಗಳಲ್ಲಿ ಬಳಸಬಹುದು.

ಮಹಾರಾಷ್ಟ್ರದ ವಿದರ್ಭದ ಯವತ್‌ಮಾಲನ ಕಪ್ಪು ಮಣ್ಣಿನ ಕಮತವಾಡಾ ಮತ್ತು ಚಾನಿ ಹಳ್ಳಿಗಳಲ್ಲಿ ಸುಮಾರು 300 ಹಲಸಿನ ಮರಗಳಿವೆ. ಇದೊಂದು ಜನಪ್ರಿಯ ತರಕಾರಿಯಲ್ಲದೇ ಮಾಂಸಾಹಾರಿ ಹೊಟೇಲ್‌ನಲ್ಲಿ ನಕಲೀ ಮಾಂಸವಾಗಿಯೂ ಉಪಯೋಗಿಸುತ್ತಾರೆ. ಹೀಗಾಗಿ ಈ ಹಲಸಿನ ಬೆಳೆಯು ಕೇವಲ ಸಮುದ್ರ ತೀರ ಅಥವಾ ಮಲೆನಾಡು ಪ್ರದೇಶಕ್ಕೆ ಸೀಮಿತ ಎಂದು ಹೇಳಲು ಬರುವುದಿಲ್ಲ. ಹಲಸಿನ ಬೇರು ಅತಿ ಆಳಕ್ಕೆ ಹೋಗುವುದರಿಂದ, ಕಡಿಮೆ ಆಳಕ್ಕೆ ಹೋಗುವ ಮರ-ಗಿಡಗಳಾದ ಕರಿಬೇವು, ನುಗ್ಗೇಕಾಯಿ, ಸೀತಾಫಲ ಮೊದಲಾದವುಗಳೊಡನೆ ಮಿಶ್ರ ಬೆಳೆಯಾಗಿಯೂ ಜಲಾನಯನ ಪ್ರದೇಶಗಳಲ್ಲಿ ಬೆಳೆಯಬಹುದು. ಹೀಗಾಗಿ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲೂ ಹಲಸನ್ನು ಬೆಳೆಸಲು ಪ್ರೋತ್ಸಾಹಿಸುವುದು ಅಗತ್ಯ. ಬರ ಮತ್ತು ಅತಿವೃಷ್ಟಿ ಪರಿಸ್ಥಿತಿಯಲ್ಲಿ ಹಲಸಿನ ಮರ ರೈತರಿಗೆ ವರದಾನವಾಗಲಿದೆ. ಹಲಸಿನ ಅಭಿವೃದ್ಧಿ, ವಿಸ್ತರಣೆ ಮತ್ತು ಮಾರುಕಟ್ಟೆ ಬಗ್ಗೆ ಸಮಗ್ರ ಚಿಂತನೆ ಅವಶ್ಯ.

ಕಾವ್ಯ ವಿಕಾಸ

# ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಪುನಶ್ಚೇತನ

ಗ್ರಾಮ ಪಂಚಾಯಿತಿ ಅಧಿಕಾರಿಗಳಿಗೆ ನೀಡಲು ಚೇತನ
ಎಸ್.ಐ.ಆರ್.ಡಿ ವತಿಯಿಂದ ನೀಡಲಾಯಿತು
ತರಬೇತಿ ಪುನಶ್ಚೇತನ. . . .

ಸಂತಸದ ಕಲಿತೆವು ಒಂದು ವಾರದ ಕಲಿಕೆ
ಆಟಪಾಠಗಳೊಂದಿಗೆ ನಡೆಯಿತು ನಮ್ಮ ಚೇತರಿಕೆ. .

ನಾಗರಾಜ ಕಾರಂತರ ಪ್ರಾಸ್ತಾವಿಕ ನುಡಿ
ಜೊತೆಗೆ ಅಣ್ಣಪ್ಪ ಶೇರ್ವೆಗಾರರ ಮುನ್ನುಡಿ. . .

ಪ್ರಾಣೇಶ್ ಸರ್ ರವರ ಉದ್ಘಾಟನಾ ಭಾಷಣ
ಸಾಣೂರು ಅಧ್ಯಕ್ಷ ಕಾಮತ್ತರ ಯಶೋಗಾನ. .

ಡಾ||ಎನ್.ಎಸ್.ಶೆಟ್ಟರ ಮಾನವ ಅಭಿವೃದ್ಧಿ
ಮತ್ತೆ ವಿಜಯಕುಮಾರರ ಸುಸ್ಥಿರ ಅಭಿವೃದ್ಧಿ. .

ಗಣೇಶ್ ಪ್ರಸಾದ್ ರವರ ಸಂಪನ್ಮೂಲ ಕ್ರೂಢೀಕರಣ
ಅಶೋಕ ರಂಜನ್ ರವರ ಕಚೇರಿ ನಿರ್ವಹಣ.. .

ಅಶೋಕ ರಂಜನ್ನರದೇ ಲೆಕ್ಕಪತ್ರ ವ್ಯವಹಾರ
ವಿಜಯಾನಂದ ನಾಯಕ್‌ರ ತಾಂತ್ರಿಕತೆಯ ಲೆಕ್ಕಾಚಾರ.

ಕಿಶೋರ್ ಕುಮಾರ್ ವಿವರಿಸಿದರು ಆಡಳಿತ ನಿರ್ವಹಣೆ
ಹಾಗೂ ನಮ್ಮ ವೈಯಕ್ತಿಕ ಸವಲತ್ತುಗಳ ಹೊಣೆ. .

ಮತ್ತೊಮ್ಮೆ ನಾಯಕ್ ರವರ ಕುಡಿಯುವ ನೀರಿನ
ಅನುಷ್ಠಾನ ಜೊತೆಗೆ ನೀಡಿದರು ಕಾಮಗಾರಿಗಳನ್ನು
ನಡೆಸುವ ವಿಧಾನ. .

ಡಾ||ಜಗದೀಶ್ ಜೋಗಿಯವರ
ಸಿಹಿಯಾದ ಬೋದನೆ ತಿಳಿಸಿತೆಮಗೆ ನೌಕರರು
ಅನುಸರಿಸಬೇಕಾದ ವರ್ತನೆ. . .

ರಾತ್ರಿ ಎಲ್ಲರೊಂದಿಗೆ ನೋಡಿದೆವು
ಬೇರು ಚಲನಚಿತ್ರ ಅದರಲ್ಲಿದ್ದ ಅಧಿಕಾರಿಯ
ಅನುಭವವೇ ವಿಚಿತ್ರ. . .

ಐರೋಡಿಯಲ್ಲಿ ಕಂಡೆವು ಪಂಚಾಯಿತಿ
ನೋಟ ಜೊತೆಗೆ ಮಲ್ಪೆ ಬೀಚಿನಲ್ಲಿ
ಆಡಿದೆವು ಆಟ. .

ಶೈಲಜಾ ಮೇಡಂರವರ ಉತ್ಸಾಹದ ನುಡಿಗಳು
ನೀಡಿದವು ಮನಸಿಗೆ ಚಿಲುಮೆಯ ಹೊನಲು. . .

ರಾಜೇಶ್ ಶೆಣೈ ನೀಡಿದರು ಪಂಚತಂತ್ರಾ ಬೋದನೆ
ಜೊತೆಗೆ ಎನ್.ಆರ್.ಇ.ಜಿ ಹಾಗೂ ಈ-ಸ್ವತ್ತುಗಳ
ಸಾಧನೆ. . .

ಹೊತ್ತು ಅನೇಕ ವಿಷಯ ವಿಚಾರಗಳ ಭಂಡಾರ ಏರಿ
ಬಂದೆವು ನಾವು ಉಡುಪಿಯಿಂದ
ಚಿಕ್ಕಮಗಳೂರ ತೇರ. . . .

**ಉಡುಪಿ ಜಿಲ್ಲೆಯಲ್ಲಿ ದಿನಾಂಕ:30.06.2014 ರಿಂದ 05.07.2014ರ ವರೆಗೆ ನಡೆಸಲಾದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಪುನಶ್ಚೇತನ ತರಬೇತಿಯ ಕುರಿತು . . .**

**ರುದ್ರಾಂಬಿಕ ಐ.ಓ**
ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಬಾಣೂರು ಗ್ರಾಮ ಪಂಚಾಯಿತಿ
ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ

# ಗ್ರಾಮ ಪಂಚಾಯತಿಗಳ ಜಿಲ್ಲಾವಾರು ಪಂಚತಂತ್ರ ಪ್ರಗತಿಯ ವರದಿ ದಿನಾಂಕ 27-08-2014ರಲ್ಲಿದ್ದಂತೆ

| ಜಿಲ್ಲೆಯ ಹೆಸರು | ಪಂಚಾಯತಿಗಳ ಸಂಖ್ಯೆ | 2011-12ನೇ ಸಾಲಿನ ಬ್ಯಾಲೆನ್ಸ್ ಶೀಟ್ ಪೂರ್ಣಗೊಳಿಸಿದ ಶೇಕಡವಾರು ಗ್ರಾ.ಪಂಗಳು | 2012-13ನೇ ಸಾಲಿನ ಬ್ಯಾಲೆನ್ಸ್ ಶೀಟ್ ಪೂರ್ಣಗೊಳಿಸಿದ ಶೇಕಡವಾರು ಗ್ರಾ.ಪಂಗಳು | 2013-14ನೇ ಸಾಲಿನಲ್ಲಿ ಬೇಡಿಕೆಯಂತೆ ಶೇ 60ಕ್ಕಿಂತ ಹೆಚ್ಚು ಆಸ್ತಿ ತೆರಿಗೆ ವಸೂಲಾತಿ ಮಾಡಿರುವ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ ರಾಜ್ಯದ ಸರಾಸರಿಗಿಂತ ಶೇಕಡ 75ಕ್ಕಿಂತ ಹೆಚ್ಚು ಜಿಎಸ್‌ಸಿ ಬೇಡಿಕೆಗಳನ್ನು ಪಡೆದ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ ಶೇಕಡ 95 ಕ್ಕಿಂತ ಹೆಚ್ಚು ಜಿಎಸ್‌ಸಿ ಬೇಡಿಕೆಗಳನ್ನು ನಿಗದಿತ ಸಮಯದಲ್ಲಿ ವಿತರಿಸಿದ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ, ಹಿಂದಿನ ಮಾಹೆಯಲ್ಲಿ ನಡೆಸಿದ ಸಾಮಾನ್ಯ ಸಭೆ ಹಾಗೂ ಅದರ ನಡವಳಿಯನ್ನು ಸ್ಕ್ಯಾನ್ ಮಾಡಿ ಅಪ್ ಲೋಡ್ ಮಾಡಿರುವ ಶೇಕಡವಾರು ಗ್ರಾ.ಪಂ.ಗಳು | ಹಿಂದಿನ ದಿನದ ಹಾಜರಾತಿ ದಾಖಲಿಸಿದ ಶೇಕಡವಾರು ಗ್ರಾ.ಪಂ.ಗಳು | ಒಟ್ಟಾರೆ ಶೇಕಡ ವಾರು ಸಾಧನೆ | ಶ್ರೇಣಿ |
|---|---|---|---|---|---|---|---|---|---|---|
| ಉಡುಪಿ | 146 | 100 | 99 | 41 | 42 | 82 | 92 | 93 | 78 | 1 |
| ಉತ್ತರ ಕನ್ನಡ | 207 | 100 | 55 | 50 | 56 | 97 | 91 | 91 | 77 | 2 |
| ದಕ್ಷಿಣ ಕನ್ನಡ | 203 | 100 | 93 | 58 | 39 | 91 | 76 | 83 | 77 | 3 |
| ಧಾರವಾಡ | 127 | 100 | 100 | 0 | 92 | 99 | 48 | 62 | 71 | 4 |
| ರಾಮನಗರ | 130 | 100 | 100 | 0 | 97 | 97 | 29 | 61 | 69 | 5 |
| ಮೈಸೂರು | 235 | 100 | 100 | 1 | 73 | 85 | 72 | 50 | 68 | 6 |
| ಹಾವೇರಿ | 208 | 100 | 100 | 0 | 64 | 89 | 67 | 49 | 67 | 7 |
| ಕೊಡಗು | 98 | 100 | 100 | 23 | 6 | 87 | 59 | 93 | 66 | 8 |
| ಶಿವಮೊಗ್ಗ | 260 | 100 | 100 | 6 | 42 | 91 | 65 | 52 | 65 | 9 |
| ದಾವಣಗೆರೆ | 230 | 100 | 93 | 3 | 86 | 97 | 42 | 35 | 65 | 10 |
| ಹಾಸನ | 258 | 100 | 100 | 3 | 20 | 74 | 91 | 58 | 63 | 11 |
| ಬಾಗಲಕೋಟೆ | 161 | 100 | 98 | 4 | 75 | 98 | 46 | 25 | 63 | 12 |
| ಚಿಕ್ಕಮಗಳೂರು | 226 | 100 | 100 | 19 | 15 | 67 | 63 | 73 | 62 | 13 |
| ಚಿಕ್ಕಬಳ್ಳಾಪುರ | 151 | 100 | 80 | 1 | 66 | 91 | 29 | 63 | 61 | 14 |
| ಮಂಡ್ಯ | 232 | 100 | 47 | 0 | 78 | 97 | 38 | 63 | 60 | 15 |
| ಚಿತ್ರದುರ್ಗ | 185 | 100 | 100 | 0 | 64 | 82 | 35 | 38 | 59 | 16 |
| ಬೆಂಗಳೂರು (ನ) | 86 | 100 | 62 | 8 | 51 | 55 | 56 | 81 | 59 | 17 |
| ಬೆಂಗಳೂರು (ಗ್ರಾ) | 98 | 100 | 100 | 0 | 23 | 55 | 47 | 82 | 58 | 18 |
| ಗದಗ | 106 | 100 | 73 | 1 | 83 | 93 | 23 | 32 | 57 | 19 |
| ಗುಲ್ಬರ್ಗಾ | 220 | 100 | 100 | 0 | 69 | 57 | 53 | 11 | 55 | 20 |
| ಬೆಳಗಾವಿ | 486 | 99 | 100 | 1 | 27 | 59 | 49 | 54 | 55 | 21 |
| ಬೀದರ | 175 | 100 | 99 | 0 | 8 | 50 | 83 | 32 | 53 | 22 |
| ಕೊಪ್ಪಳ | 134 | 100 | 91 | 2 | 19 | 71 | 26 | 41 | 50 | 23 |
| ಬಿಜಾಪುರ | 199 | 100 | 100 | 1 | 31 | 58 | 27 | 37 | 50 | 24 |
| ಬಳ್ಳಾರಿ | 189 | 100 | 95 | 2 | 19 | 60 | 43 | 33 | 50 | 25 |
| ಕೋಲಾರ | 156 | 100 | 87 | 0 | 21 | 76 | 20 | 44 | 49 | 26 |
| ರಾಯಚೂರು | 165 | 99 | 89 | 3 | 23 | 49 | 44 | 32 | 48 | 27 |
| ತುಮಕೂರು | 321 | 100 | 100 | 0 | 22 | 50 | 19 | 50 | 48 | 28 |
| ಚಾಮರಾಜನಗರ | 120 | 100 | 31 | 0 | 38 | 90 | 30 | 34 | 46 | 29 |
| ಯಾದಗಿರಿ | 117 | 100 | 59 | 0 | 0 | 43 | 11 | 8 | 31 | 30 |

# ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಜಿಲ್ಲಾವಾರು ಸಕಾಲ ಪ್ರಗತಿ ವರದಿ (ಆಗಸ್ಟ್ 2014)

| ಜಿಲ್ಲೆ | ತಿಂಗಳಲ್ಲಿ ಜಿಎಸ್‌ಸಿ ಸ್ವೀಕೃತಿ (ಸಂಖ್ಯೆ) A | ತಿಂಗಳಲ್ಲಿ ಜಿಎಸ್‌ಸಿ ವಿಲೇವಾರಿ B | ವಿಳಂಬವಾಗಿ ವಿಲೇವಾರಿ ಆಗಿರುವುದು (ಶೇಕಡವಾರು) C | ವಿಳಂಬ ವಿಲೇವಾರಿ ಆಧರಿಸಿ ಪಡೆದ ಶ್ರೇಣಿ D | ಒಂದು ಲಕ್ಷ ಜನಸಂಖ್ಯೆಗೆ ಸ್ವೀಕೃತಿಯಾದ ಜಿಎಸ್‌ಸಿಗಳು E | ಒಂದು ಲಕ್ಷ ಜನಸಂಖ್ಯೆಗೆ ಜಿಎಸ್‌ಸಿ ಸ್ವೀಕೃತಿ ಆಧರಿಸಿ ಪಡೆದ ಶ್ರೇಣಿ F | ಅಂತಿಮವಾಗಿ ಪಡೆದ ಶ್ರೇಣಿ [(ಅ)ಯ ಪ್ರಾಮುಖ್ಯತೆಯನ್ನಾಧರಿಸಿ ಶೇಕಡ 30 ರಷ್ಟು ಮತ್ತು (ಈ)ನ ಪ್ರಾಮುಖ್ಯತೆಯನ್ನಾಧರಿಸಿ ಶೇಕಡ 70 ರಷ್ಟು] G |
|---|---|---|---|---|---|---|---|
| ಚಿಕ್ಕಬಳ್ಳಾಪುರ | 6966 | 6448 | 0 | 1 | 580 | 1 | 1 |
| ಚಿತ್ರದುರ್ಗ | 7402 | 7505 | 0.1 | 5 | 462 | 3 | 2 |
| ರಾಮನಗರ | 4937 | 4520 | 1.2 | 16 | 493 | 2 | 3 |
| ಚಿಕ್ಕಮಗಳೂರು | 4368 | 4114 | 2.7 | 21 | 397 | 4 | 4 |
| ಬೆಳಗಾವಿ | 16765 | 16622 | 2.1 | 20 | 356 | 5 | 5 |
| ಹಾವೇರಿ | 5053 | 4763 | 1.3 | 18 | 336 | 6 | 6 |
| ಚಾಮರಾಜನಗರ | 2986 | 2889 | 0.6 | 11 | 298 | 9 | 7 |
| ಗದಗ | 3049 | 3101 | 0.8 | 14 | 304 | 8 | 8 |
| ಮಂಡ್ಯ | 5018 | 5411 | 0.4 | 10 | 278 | 10 | 9 |
| ಮೈಸೂರು | 6491 | 6629 | 0.2 | 7 | 223 | 12 | 10 |
| ಬಾಗಲಕೋಟೆ | 3412 | 3295 | 0.3 | 8 | 189 | 14 | 11 |
| ದಾವಣಗೆರೆ | 3355 | 3310 | 0.3 | 8 | 176 | 15 | 12 |
| ರಾಯಚೂರು | 6157 | 10049 | 17 | 29 | 324 | 7 | 13 |
| ಬೀದರ್ | 3634 | 3463 | 1.2 | 16 | 213 | 13 | 14 |
| ಬಿಜಾಪುರ | 5196 | 4599 | 4.4 | 23 | 247 | 11 | 15 |
| ಕೋಲಾರ | 2356 | 2195 | 0.7 | 12 | 157 | 17 | 16 |
| ಉತ್ತರ ಕನ್ನಡ | 1452 | 1417 | 0.1 | 5 | 103 | 20 | 17 |
| ಶಿವಮೊಗ್ಗ | 1548 | 1832 | 0 | 1 | 91 | 23 | 18 |
| ದಕ್ಷಿಣ ಕನ್ನಡ | 1347 | 1312 | 0 | 1 | 67 | 26 | 19 |
| ತುಮಕೂರು | 4283 | 3899 | 4.6 | 25 | 164 | 16 | 20 |
| ಧಾರವಾಡ | 1681 | 1669 | 0.8 | 14 | 93 | 22 | 21 |
| ಉಡುಪಿ | 1342 | 1441 | 3 | 22 | 122 | 19 | 22 |
| ಹಾಸನ | 2288 | 2114 | 4.6 | 25 | 134 | 18 | 23 |
| ಕೊಪ್ಪಳ | 1176 | 1517 | 0.7 | 12 | 90 | 24 | 24 |
| ಕೊಡುಗು | 197 | 171 | 0 | 1 | 39 | 29 | 25 |
| ಬೆಂಗಳೂರು ಗ್ರಾಮಾಂತರ | 898 | 1024 | 19.8 | 30 | 99 | 21 | 26 |
| ಗುಲ್ಬರ್ಗಾ | 1837 | 1790 | 4.4 | 23 | 73 | 25 | 27 |
| ಬಳ್ಳಾರಿ | 1339 | 1352 | 1.6 | 19 | 53 | 28 | 28 |
| ಬೆಂಗಳೂರು | 5394 | 4977 | 8.7 | 27 | 56 | 27 | 29 |
| ಯಾದಗಿರಿ | 174 | 207 | 10.1 | 28 | 15 | 30 | 30 |

ಕರ್ನಾಟಕ ಸರ್ಕಾರ

ಸಂಖ್ಯೆ : ಗ್ರಾಪ/142/ಗ್ರಾನೀಸ(4)14

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 6.8.2014

# ಸುತ್ತೋಲೆ

**ವಿಷಯ:** ತೆರೆದ/ನಿರುಪಯುಕ್ತ ಕೊಳವೆ ಬಾವಿಗಳಲ್ಲಿ ಮಕ್ಕಳು ಬಿದ್ದು ಅನಿರೀಕ್ಷಿತ ಅವಘಡಗಳು ಸಂಭವಿಸದಂತೆ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು

**ಉಲ್ಲೇಖ:**
1. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ/181/ಗ್ರಾನೀಸ(4)2012, ದಿ: 07.04.2012 ಮತ್ತು ದಿ: 28.07.2012.
2. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: W–11042/20/2012–Water-II, ದಿನಾಂಕ: 24.07.2012.
3. ಮಾನ್ಯ ಸರ್ವೋಚ್ಚ ನ್ಯಾಯಾಲಯ ಪ್ರಕರಣ ಸಂಖ್ಯೆ: W.P. No. 36 of 2009, ದಿ: 11.02.2010ರ ಆದೇಶ.
4. ಸರ್ಕಾರದ ಸಮಸಂಖ್ಯೆ ಪತ್ರದ ದಿ: 06.08.2012.
5. National Commission for protection of Child Rights ಪತ್ರದ ಸಂಖ್ಯೆ: D.O.F.99–31/2012–NCPCR(PD)/30439, ದಿ: 19.08.2013.
6. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 2356 ಗ್ರಾನೀಸ(4)2012, ದಿ: 7.9.2013.
7. Government Order No. MID 10 AJAA 2012, Bangalore, Dated: 31.12.2012, Issued by Under Secretary to Government Water Resource Department (Minor Irrigation).
8. ಮಾನ್ಯ ಗ್ರಾಅಪಂ.ರಾಜ್ ಸಚಿವರ ಟಿಪ್ಪಣಿ ಸಂಖ್ಯೆ: ಗ್ರಾಪಂರಾಸ/ಟಿ/3204/2014–15, ದಿ: 21/6.2014.
9. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 256 ಗ್ರಾನೀಸ(4) 12, ದಿ: 20.6.2014.
10. ಮಾನ್ಯ ಗ್ರಾಅಪಂ.ರಾಜ್ ಸಚಿವರ ಟಿಪ್ಪಣಿ ಸಂಖ್ಯೆ: ಗ್ರಾಪಂರಾಸ/5458/2014–15, ದಿ: 4.8.2014.

1. ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಅನುಪಯುಕ್ತ/ವಿಫಲವಾದ ತೆರದ ಕೊಳವೆ ಬಾವಿಗಳಲ್ಲಿ ಮಕ್ಕಳು ಬಿದ್ದು ಸಂಭವಿಸುವ ದುರ್ಘಟನೆಗಳನ್ನು ತಡೆಯಲು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವ ಕುರಿತು ಉಲ್ಲೇಖಿತ ಸುತ್ತೋಲೆ/ಆದೇಶಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸೂಚನೆಗಳನ್ನು ಉಲ್ಲೇಖಿಸಿ, ಕಟ್ಟುನಿಟ್ಟಿನ ಸ್ಪಷ್ಟ ಆದೇಶಗಳನ್ನು ಅಸುರಕ್ಷಿತ ತೆರೆದ ಕೊಳವೆ ಬಾವಿಗಳನ್ನು ಸುರಕ್ಷಿತವಾಗಿ ಮುಚ್ಚುವ ಸಂಬಂಧ ಹೊರಡಿಸಲಾಗಿದೆ. ಆದಾಗ್ಯೂ, ದಿ: 3.8.2014ರಂದು ಬಾಗಲಕೋಟೆ ಜಿಲ್ಲೆಯಲ್ಲಿ ಸಂಭವಿಸಿರುವ ಘಟನೆ ತುಂಬ ವಿಷಾದನೀಯವಾಗಿದೆ. ಆದ್ದರಿಂದ, ಇನ್ನು ಮುಂದೆ ಯಾವುದೇ ರೀತಿಯ ಇಂತಹ ದುರ್ಘಟನೆ/ಅವಘಡಗಳು ಸಂಭವಿಸದಂತೆ ಎಚ್ಚರಿಕೆ ವಹಿಸುವುದು ಸ್ಥಳೀಯ ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಹಾಗೂ ಅವರ ವ್ಯಾಪ್ತಿಯಲ್ಲಿ ಬರುವ ಸಂಬಂಧಿಸಿದ ನಿಯಂತ್ರಣಾಧಿಕಾರಿಗಳ ಕರ್ತವ್ಯವಾಗಿದೆ. ಅವರು

ಅನುಸರಿಸಬೇಕಾದ ಕ್ರಮಗಳನ್ನು ಕೆಳಗೆ ವಿವರಿಸಿದೆ. ಇವುಗಳನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಿ: 11.2.10ರ ಆದೇಶ ಮತ್ತು ಉಲ್ಲೇಖ(7)ರ ಸರ್ಕಾರಿ ಆದೇಶದೊಂದಿಗೆ ಪಾಲನೆ ಮಾಡಬೇಕು.

2. ಜನಮನದಲ್ಲಿ ಅರಿವು ಮೂಡಿಸಲು ಕೆಳಕಂಡ ಘೋಷಣೆಯನ್ನು ಪ್ರಚುರಪಡಿಸಬೇಕು.

**"ನಿರುಪಯುಕ್ತ/ವಿಫಲವಾದ ಕೊಳವೆಬಾವಿಗಳನ್ನು ಮುಚ್ಚಿಸಿ, ಮಕ್ಕಳು ಅದರಲ್ಲಿ ಬೀಳುವುದನ್ನು ತಪ್ಪಿಸಿ''**

3. ಈಗಾಗಲೇ ಕೊರೆದ ಸರ್ಕಾರಿ ಹಾಗೂ ಖಾಸಗಿ ವಿಫಲ/ನಿರುಪಯುಕ್ತ ಕೊಳವೆ ಬಾವಿಗಳನ್ನು ಸುರಕ್ಷಿತವಾಗಿ ಮುಚ್ಚುವ ಕುರಿತು ಅನುಸರಿಸಬೇಕಾದ ಪರಿಕ್ರಮಗಳು:

i. ಇಂತಹ ಸರ್ಕಾರಿ ಹಾಗೂ ಖಾಸಗಿ ಕೊಳವೆ ಬಾವಿಗಳ ಬಗ್ಗೆ ಮಾಹಿತಿಯನ್ನು ಸ್ಥಳೀಯ ಗ್ರಾಮ ಪಂಚಾಯತ್‌ನ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಗ್ರಾಮ ಲೆಕ್ಕಿಗರು, ಸ್ಥಳೀಯ ಸಾರ್ವಜನಿಕರಿಂದ ಮತ್ತು ರಿಗ್ ಮಾಲೀಕರಿಂದ ಪಡೆದು ಕೆಳಕಂಡ ತಂಡದೊಂದಿಗೆ ತೆರೆದ ಕೊಳವೆ ಬಾವಿಗಳನ್ನು ಸುರಕ್ಷಿತವಾಗಿ ಮುಚ್ಚಿಸಬೇಕು.

(1) ಸ್ಥಳೀಯ ಗ್ರಾಮ ಪಂಚಾಯತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿ (2) ಗ್ರಾಮ ಲೆಕ್ಕಿಗರು (3) ಸ್ಥಳೀಯ ಕಿರಿಯ ಇಂಜಿನಿಯರ್, ಪಂ.ರಾಜ್ ಇಂಜಿನಿಯರಿಂಗ್ ಉಪ–ವಿಭಾಗ/ವರ್ಕ್ ಇನ್ಸ್‌ಪೆಕ್ಟರ್ (4) ಸ್ಥಳೀಯ ಪೋಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು/ಪೊಲೀಸ್ ಕನ್ಸ್‌ಟೇಬಲ್

ii. ವಿವಿಧ ಸರ್ಕಾರಿ ಸ್ವಾಮ್ಯದ/ಇಲಾಖೆಗಳಿಂದ ಕೊರೆದು ಸಮರ್ಪಕವಾಗಿ ಮುಚ್ಚದಿರುವ ಕೊಳವೆ ಬಾವಿ ಸಂಬಂಧ, ಉಪ ನಿರ್ದೇಶಕರು/ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆಯ ಗಂಗಾ ಕಲ್ಯಾಣ ಯೋಜನೆ ಅನುಷ್ಠಾನಾಧಿಕಾರಿ, ಕೃಷಿ/ತೋಟಗಾರಿಕೆ ಇಲಾಖಾಧಿಕಾರಿ ಇತ್ಯಾದಿಯವರಿಂದ ಜಿಲ್ಲಾಧಿಕಾರಿ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್‌ರವರು ಮಾಹಿತಿ ಪಡೆದು ಮೇಲಿನ ತಂಡದವರಿಂದ ತೆರೆದ ಕೊಳವೆ ಬಾವಿಗಳನ್ನು ಮುಚ್ಚಲು ಕ್ರಮವಹಿಸಬೇಕು.

iii. ವಿಫಲ/ನಿರುಪಯುಕ್ತ ತೆರೆದ ಕೊಳವೆ ಬಾವಿಗಳನ್ನು ದಿ: 31.8.2014ರೊಳಗೆ

4. ಇನ್ನು ಮುಂದೆ ಕೊರೆಸಲಾಗುವ ಸರ್ಕಾರಿ ಅಥವಾ ಖಾಸಗಿ ಬೋರ್‌ವೆಲ್‌ಗಳ ಮಾಲೀಕರು ಅನುಸರಿಸಬೇಕಾದ ಪರಿಕ್ರಮಗಳು:

I. ಕೊಳವೆ ಬಾವಿ ಕೊರೆಯುವಾಗ 15 ದಿನಗಳ ಮುಂಚಿತವಾಗಿ ಜಮೀನಿನ ಮಾಲೀಕ ಹಾಗೂ ಕೊಳವೆ ಬಾವಿ ಕೊರೆಯುವ ಗುತ್ತಿಗೆದಾರು ಅಥವಾ ಸರ್ಕಾರಿ ಸ್ವಾಮ್ಯದ ಕೊಳವೆ ಬಾವಿ ಕೊರೆಸುವ ಇಲಾಖೆ/ಸಂಸ್ಥೆ/ಸಂಬಂಧಿಸಿದ ಗ್ರಾಮ ಪಂಚಾಯತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗೆ/ ಕಾರ್ಯದರ್ಶಿಗೆ ಮಾಹಿತಿ ನೀಡಿ ಸ್ವೀಕೃತಿ ಪಡೆಯಬೇಕು.

ii. ಬೋರ್‌ವೆಲೆ ಕೊರೆಯುವ ಮುನ್ನ ಅತೀ ಶೋಷಿತ ಪ್ರದೇಶವೆಂದು ಅಂತರ್ಜಲ ಪ್ರಾಧಿಕಾರ ಘೋಷಿಸಿದ್ದಲ್ಲಿ, ಅವರಿಂದ ಮತ್ತು ಸ್ಥಳೀಯ ಪಂಚಾಯಿತಿ/ಪ್ರಾಧಿಕಾರದಿಂದ ಅನುಮತಿ ಪಡೆಯಬೇಕು. ಉಳಿದ ಪ್ರದೇಶಗಳಲ್ಲಿ ಖಾಸಗಿ ಬೋರ್‌ವೆಲ್ ಕೊರೆಯಬೇಕಾದಲ್ಲಿ ಕರ್ನಾಟಕ ಅಂತರ್ಜಲ ಸಂರಕ್ಷಣಾ ಕಾಯ್ದೆ ಪ್ರಕಾರ ಸಾರ್ವಜನಿಕರ ಕೊಳವೆ ಬಾವಿ/ ತೆರೆದ ಬಾವಿಯಿಂದ 500 ಮೀಟರ್ ಅಂತರದಲ್ಲಿ ಯಾವುದೇ ರೀತಿಯ ಬಾವಿ ಕೊರೆಯತಕ್ಕದ್ದಲ್ಲ.

iii. ಕೊಳವೆ ಬಾವಿಯನ್ನು ಗ್ರಾಮೀಣ ನೀರು ಪೂರೈಕೆಗಾಗಿ ಕೊರೆಯುತ್ತಿದ್ದರೆ, ಸಂಬಂಧಿಸಿದ ಶಾಖಾಧಿಕಾರಿಗಳು ಭೂವಿಜ್ಞಾನಗಳಿಂದ ಪಡೆದ ಶಿಫಾರಸ್ಸು ಪತ್ರದೊಂದಿಗೆ ರಿಗ್ ಯಂತ್ರದ ಜೊತೆಗೆ ಅನುಮಿತ ಪತ್ರ ನೀಡತಕ್ಕದ್ದು, ಹಾಗೂ ಸಂಬಂಧಿಸಿದ ಪಂಚಾಯತಿಗೆ ಕೊಳವೆಬಾವಿ ಕೊರೆಯುವ ಕುರಿತು ಮಾಹಿತಿ ನೀಡತಕ್ಕದ್ದು.

iv. ಕೊಳವೆ ಬಾವಿ ಕೊರೆಯಲು ಎಲ್ಲಾ ರಿಗ್ ಮಾಲೀಕರು ರಿಗ್ ಯಂತ್ರಗಳ ವಿವರಗಳನ್ನು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ನೊಂದಾಯಿಸತಕ್ಕದ್ದು. ಈ ನೊಂದಣಿ ಮಾಡಿಸದೆ ಕೊಳವೆ ಬಾವಿ ಕೊರೆಸುವ ರಿಗ್ ಮಾಲೀಕರ ವಿರುದ್ಧ ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆ ಕಾನೂನು ರೀತಿ ಕ್ರಮ ಕೈಕೊಳ್ಳಬೇಕು. ಬೇರೆ ರಾಜ್ಯಗಳಿಂದ ಬರುವ ರಿಗ್‌ಗಳ ಬಗ್ಗೆಯು ಇದೇ ನಿಯಮ ಅನ್ವಯಿಸುತ್ತದೆ.

v. ಖಾಸಗಿ ತೆರೆದ ಬಾವಿಗಳನ್ನು/ಕೊಳವೆ ಬಾವಿಗಳನ್ನು ಕೊರೆದಾಗ ಸದರಿ ಬೋರ್‌ವೆಲ್ ಕೊರೆದ ಸಂಸ್ಥೆ ಹಾಗೂ ಜಮೀನಿನ ಮಾಲೀಕರು ವಿಫಲವಾದ/ಸಫಲವಾದ ಕೊಳವೆ ಬಾವಿಗಳನ್ನು ಸಮರ್ಪಕವಾಗಿ ಮುಚ್ಚಬೇಕು.

ಯಾವುದೇ ಅನಾಹುತವಾದಲ್ಲಿ ಬೋರ್‌ವೆಲ್ ಕೊರೆದ ಸಂಸ್ಥೆ ಹಾಗೂ ಜಮೀನಿನ ಮಾಲೀಕರೆ ಜವಾಬ್ದಾರರು. ಇದರಲ್ಲಿ ಯಾವುದೇ ರೀತಿಯ ನಿರ್ಲಕ್ಷತೆ/ವೈಫಲ್ಯ ಕಂಡು ಬಂದಲ್ಲಿ ಜಿಲ್ಲಾಡಳಿತ ಅವರ ಮೇಲೆ ಕಠಿಣ ಕಾನೂನಿನ ಕ್ರಮ ತೆಗೆದುಕೊಳ್ಳತಕ್ಕದ್ದು.

vi. ಕೊಳವೆ ಬಾವಿ ಕೊರೆಯುವ ಸಲುವಾಗಿ ಸಕ್ಷಮ ಪ್ರಾಧಿಕಾರದಿಂದ ಅನುಮತಿ/ಸ್ವೀಕೃತಿ ಪ್ರತಿಯನ್ನು ಪಡೆದುಕೊಳ್ಳಬೇಕು. ರಿಗ್ ಯಂತ್ರ ಜಿಲ್ಲೆಯಲ್ಲಿ ಯಾವುದೇ ಪ್ರದೇಶದಲ್ಲಿ ಹೊರಟಾಗ ಯಾವ ಕೊಳವೆ ಬಾವಿ ಕೊರೆಯಲು ಹೊರಟಿದೆಯೋ ಅದರ ಅನುಮತಿ/ಸ್ವೀಕೃತಿ ಪತ್ರ ಹೊಂದಿರತಕ್ಕದ್ದು. ಇಲ್ಲವಾದಲ್ಲಿ ಆರಕ್ಷಕ ಉಪ ನಿರೀಕ್ಷಕರು ಅಂತಹ ಯಂತ್ರವನ್ನು ವಶಕ್ಕೆ ಪಡೆದು ಕಾನೂನು ಕ್ರಮ ಜರುಗಿಸುವುದು.

**5. ವಿಫಲ/ನಿರುಪಯುಕ್ತ ಕೊಳವೆ ಬಾವಿ ಮುಚ್ಚಲು ತೆಗೆದುಕೊಳ್ಳಬೇಕಾದ ಕ್ರಮ:**

i. ಕೊರೆದ ಕೊಳವೆ ಬಾವಿ ವಿಫಲವಾಗಿ ಕೇಸಿಂಗ್ ಪೈಪ್ ಇಲ್ಲದಿದ್ದಲ್ಲಿ, ಆ ಬಾವಿಯನ್ನು ಕಲ್ಲು ಮಣ್ಣಿನಿಂದ ಪೂರ್ಣವಾಗಿ ಮುಚ್ಚಬೇಕು. ಒಂದು ವೇಳೆ ಕೇಸಿಂಗ್ ಪೈಪ್ ಉಳಿಸಿದರೆ ಕ್ಯಾಪ್ ಹಾಕಿ ಮುಚ್ಚಿಸಬೇಕು. ಕೇಸಿಂಗ್ ಪೈಪ್ ಸುತ್ತ ಕಟ್ಟೆ ನಿರ್ಮಿಸಬೇಕು.

ii. ಸರ್ಕಾರಿ ಕೊಳವೆ ಬಾವಿ ಸಫಲವಾದಲ್ಲಿ ಅದಕ್ಕೆ ಅಗತ್ಯವಾದ ಪಂಪು (ಕೈ ಪಂಪು/ಮೋಟಾರ್ ಪಂಪ್) ಶೀಘ್ರವೇ ಅಳವಡಿಸತಕ್ಕದ್ದು. ಅಲ್ಲಿಯವರೆಗೆ ಕೊಳವೆ ಬಾವಿಯ ಕೇಸಿಂಗ್ ಕ್ಯಾಪ್‌ನ್ನು ಭದ್ರಪಡಿಸಿ ಅದರ ಸುತ್ತಲೂ ಕಾಂಕ್ರೀಟಿನಿಂದ ಮುಚ್ಚತಕ್ಕದ್ದು. ಈ ಕ್ರಮ ಕೈಗೊಂಡಿರುವುದನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರರು ದೃಢೀಕರಿಸಿಕೊಳ್ಳಬೇಕು.

iii. ಒಂದು ವೇಳೆ ಈಗಾಗಲೇ ಕೊರೆದಿರುವ ಮತ್ತು ಮುಂದೆ ಕೊರೆಯುವ ಸಫಲ ಅಥವಾ ವಿಫಲವಾದ ಕೊಳವೆ ಬಾವಿಗಳನ್ನು ಸಮರ್ಪಕವಾಗಿ ಮುಚ್ಚಲು ಖಾಗಿ ವ್ಯಕ್ತಿಗಳು ಕ್ರಮವಹಿಸದೆ ನಿರ್ಲಕ್ಷತೆ ಮಾಡಿದಲ್ಲಿ, ಸ್ಥಳೀಯ ಪೋಲೀಸ್ ನೆರವು/ರಕ್ಷಣೆಯೊಂದಿಗೆ ಸದರಿ ಅಸುರಕ್ಷಿತ ಕೊಳವೆ ಬಾವಿಯನ್ನು ಸಮರ್ಪಕವಾಗಿ ಮುಚ್ಚಲು ಕಂಡಿಕೆ 3 (i) ರಲ್ಲಿನ ತಂಡವು ಕ್ರಮವಹಿಸಿ, ಇಂತಹ ನಿರ್ಲಕ್ಷತೆ ತೋರಿಸಿರುವವರ ಮೇಲೆ ಆರಕ್ಷಕ ಠಾಣೆಯಲ್ಲಿ ದೂರು ದಾಖಲಿಸಿ, ಸುರಕ್ಷತಾ ದೃಷ್ಟಿಯಿಂದ ಅಗತ್ಯ ಕ್ರಮ ಜರುಗಿಸಬೇಕು.

6. ಮೇಲ್ಕಂಡ ಪರಿಕ್ರಮಗಳು ಸರಿಯಾಗಿ ಆಗಿರುವುದನ್ನು/ಆಗುವುದನ್ನು ಖಾತ್ರಿಪಡಿಸಿಕೊಳ್ಳಲು ಕೆಳಕಂಡಂತೆ ಜಿಲ್ಲಾವಾರು ಸಮಿತಿಯು ರಚಿಸಿದೆ.

| | | |
|---|---|---|
| ಜಿಲ್ಲಾಧಿಕಾರಿ | – | ಅಧ್ಯಕ್ಷರು |
| ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ | – | ಉಪಾಧ್ಯಕ್ಷರು |
| ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ | – | ಸದಸ್ಯರು |
| ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ | – | ಸದಸ್ಯರು |
| ಜಿಲ್ಲಾ ಭೂ ವಿಜ್ಞಾನಿ | – | ಸದಸ್ಯರು |
| ಕಾರ್ಯಪಾಲಕ ಇಂಜಿನಿಯರ್, PRED/SRWSD | – | ಸದಸ್ಯ ಕಾರ್ಯದರ್ಶಿ |
| ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ತಹಸೀಲ್ದಾರ್‌ಗಳು | – | ಸದಸ್ಯರು |
| ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಕಾರ್ಯನಿರ್ವಾಹಕ ಅಧಿಕಾರಿಗಳು | – | ಸದಸ್ಯರು |

7. ಈ ಸಮಿತಿಯು ಪ್ರತಿ ಮಾಹೆ ಈ ದಿಸೆಯಲ್ಲಿ ಅಗತ್ಯವಿರುವ ಎಲ್ಲಾ ಮುನ್ನೆಚ್ಚರಿಕೆ ಹಾಗೂ ಸುರಕ್ಷತಾ ಕ್ರಮಗಳು ಆಗಿರುವುದನ್ನು ಖಾತ್ರಿಪಡಿಸಿಕೊಳ್ಳಬೇಕು. ಆಯಾ ಜಿಲ್ಲಾಧಿಕಾರಿಗಳ ಬಳಿ ಜಿಲ್ಲಾ ವ್ಯಾಪ್ತಿಯಲ್ಲಿರುವ ತೆರೆದ/ಕೊಳವೆ ಬಾವಿಗಳ ಸಂಪೂರ್ಣ ಚಿತ್ರಣವಿರಬೇಕು.

**(ಟಿ.ಎಂ.ವಿಜಯ ಭಾಸ್ಕರ್)**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಪ್ರಭಾಷ್ ಚಂದ್ರ ರೇ, ಭಾಅಸೇ**
ವಿಶೇಷ ಆಯುಕ್ತರು (ಅರಣ್ಯ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್, ರಾಜ್ ಇಲಾಖೆ

**ಕರ್ನಾಟಕ ಸರ್ಕಾರ**

**ಕರ್ನಾಟಕ ಸರ್ಕಾರದ ಸಚಿವಾಲಯ – 2**
**3ನೇ ಗೇಟ್, 2ನೇ ಮಹಡಿ,**
**ಕೊಠಡಿ ಸಂಖ್ಯೆ:204, ಬಹುಮಹಡಿ ಕಟ್ಟಡ,**
**ಬೆಂಗಳೂರು – 560 001**

**ಸಂಖ್ಯೆ ಗ್ರಾಅಪ 538 ಉಖಾಯೋ 2014** **ದಿನಾಂಕ: 20–06–2014**

ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಿನಾಂಕ: 12–06–2014ರಂದು ಗ್ರಾಮೀಣಾಭಿವೃದ್ಧಿ ಭವನದಲ್ಲಿ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸಿದ್ದರು. ಈ ಸಂದರ್ಭದಲ್ಲಿ ಪ್ರತಿ ಗ್ರಾಮ ಪಂಚಾಯತಿಗೆ ಕನಿಷ್ಠ 2 ಕುಡಿಯುವ ನೀರಿನ ಕೊಳವೆ ಬಾವಿಗಳಿಗಾಗಿ ಮರುಪೂರಣ ವ್ಯವಸ್ಥೆಯನ್ನು (Bore well Recharge Structure) ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಈ ಯೋಜನೆಯ ಕಾಯಿದೆ ಮತ್ತು ಕಾರ್ಯಾಚರಣೆ ಮಾರ್ಗಸೂಚಿ 2013 4ನೇ ಆವೃತ್ತಿ ಪ್ರಕಾರ ಅನುಷ್ಠಾನಿಸುವಂತೆ ಸೂಚನೆ ನೀಡಿದ್ದಾರೆ. ಇದಕ್ಕಾಗಿ ಜಿಲ್ಲೆಗಳಿಗೆ ಗುರಿಯನ್ನು ನಿಗದಿ ಪಡಿಸಿ ಇದರೊಂದಿಗೆ ಅನುಬಂಧಿಸಿದೆ.

ಇದಕ್ಕಾಗಿ ಈಗಾಗಲೇ ಮಾದರಿ ಅಂದಾಜು ಪತ್ರಿಕೆಗಳನ್ನು ನೀಡಲಾಗಿದ್ದು ಪ್ರತಿಯನ್ನು ಸಿದ್ಧ ಅವಗಾಹನೆಗಾಗಿ ಲಗತ್ತಿಸಿದೆ.

ಅದಲ್ಲದೇ ತಮ್ಮ ಜಿಲ್ಲೆಯಿಂದ ಕನಿಷ್ಠ 3 ವಿವಿಧ ಮಾದರಿಯ ಅಂದಾಜು ಪತ್ರಿಕೆಗಳನ್ನು ಆಯುಕ್ತಾಲಯಕ್ಕೆ ಒಂದು ವಾರದಲ್ಲಿ ಸಲ್ಲಿಸಲು ಸೂಚಿಸಿದೆ. ಈ ಮಾದರಿ ಅಂದಾಜು ಪತ್ರಿಕೆಗಳನ್ನು ಪರಿಶೀಲಿಸಿ ಇವುಗಳನ್ನು ಮಾದರಿ ಅಂದಾಜು ಪಟ್ಟಿಗಳನ್ನಾಗಿ ಪರಿಗಣಿಸಲು ಆದೇಶ ಹೊರಡಿಸಲು ಕ್ರಮವಹಿಸಲಾಗುವುದೆಂದು ತಿಳಿಯಪಡಿಸಿದೆ.

ಇದೇ ಸಂದರ್ಭದಲ್ಲಿ ಸನ್ಮಾನ್ಯ ಸಚಿವರು, ರಾಜ್ಯದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಆಟದ ಮೈದಾನಗಳನ್ನು ನಿರ್ಮಾಣ ಮಾಡುವ ಕುರಿತು ಪ್ರಸ್ತಾಪಿಸಿದರು. ಈ ಕುರಿತು ಈಗಾಗಲೇ ಗುರಿಯನ್ನು ನಿಗದಿ ಪಡಿಸಲಾಗಿದೆ. ಆದರೆ ಈ ಆಟದ ಮೈದಾನಗಳನ್ನು ಶಾಲಾ ಕಾಲೇಜುಗಳಲ್ಲಿ ನಿರ್ಮಾಣ ಮಾಡುತ್ತಿದ್ದು, ಗ್ರಾಮಗಳಲ್ಲಿ ಎಲ್ಲರಿಗೂ ಉಪಯುಕ್ತವಾಗುವಂತೆ ಸಮುದಾಯ ನಿವೇಶನದಲ್ಲಿ ಅಥವಾ ಸರ್ಕಾರಿ ಜಮೀನುಗಳಲ್ಲಿ ಇಂತಹ ಆಟದ ಮೈದಾನಗಳನ್ನು ನಿರ್ಮಾಣ ಮಾಡಲು ಸೂಚಿಸಿದ್ದಾರೆ. ಕೇವಲ ಶಾಲಾ ಕಾಲೇಜುಗಳಲ್ಲಿ ಆಟದ ಮೈದಾನ ಅಭಿವೃದ್ಧಿಪಡಿಸಿದಲ್ಲಿ ಇದು ಎಲ್ಲರಿಗೂ ಎಲ್ಲಾ ಸಮಯದಲ್ಲಿಯೂ ಉಪಯುಕ್ತವಾಗುವುದಿಲ್ಲ. ಆದ್ದರಿಂದ ಇವುಗಳ ಜೊತೆ ಗ್ರಾಮೀಣ ಭಾಗದಲ್ಲಿಯೂ ಸಹ ಆಟದ ಮೈದಾನಗಳನ್ನು ನಿರ್ಮಾಣ ಮಾಡಲು ಕ್ರಮವಹಿಸುವಂತೆ ತಮ್ಮನ್ನು ಈ ಮೂಲಕ ಕೋರಿದೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

ಗೆ
ಶ್ರೀ/ಶ್ರೀಮತಿ
ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ್,

ಕರ್ನಾಟಕ ಸರ್ಕಾರ

ಸಂಖ್ಯೆ : ಗ್ರಾಅಪ/416/ಗ್ರಾಪಂಅ/2014

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 30.6.2014

# ಸುತ್ತೋಲೆ

**ವಿಷಯ:** ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳನ್ನು ಮತ್ತು ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳನ್ನು ಸರ್ಕಾರದ ಅನುಮತಿ ಇಲ್ಲದೆಯೇ ಜಿಲ್ಲಾ ಪಂಚಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸ್ಥಳೀಯ ಮಟ್ಟದಲ್ಲಿ ಆಂತರಿಕ ಬದಲಾವಣೆ/ನಿಯೋಜನೆ/ಬೇರೆ ಇಲಾಖಾ ವ್ಯಾಪ್ತಿಗೆ ನಿಯೋಜನೆ/ವರ್ಗಾವಣೆ ಮಾಡಬಾರದೆಂದು–ಸೂಚನೆಗಳು

**ಉಲ್ಲೇಖ:** 1. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 83 ಗ್ರಾಪಂಕಾ 2011 ದಿನಾಂಕ: 06–09–11.

2. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 388 ಗ್ರಾಪಂಕಾ 2010, ದಿನಾಂಕ: 14–12–2010.

3. ಸರ್ಕಾರ ಸುತ್ತೋಲೆ ಸಂಖ್ಯೆ: ಗ್ರಾಅಪ 83 ಗ್ರಾಪಂಕಾ 2011, ದಿನಾಂಕ: 07–06–2011.

ಉಲ್ಲೇಖ 1,2,3ರ ಸುತ್ತೋಲೆಗಳಲ್ಲಿ ಗ್ರಾ.ಪಂ. ಅಭಿವೃದ್ಧಿ ಅಧಿಕಾರಿಗಳನ್ನು ಮತ್ತು ಕಾರ್ಯದರ್ಶಿಗಳನ್ನು ಗ್ರಾ.ಪಂ.ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸಲು ಸೂಕ್ತ ಅವಕಾಶಗಳನ್ನು ಕಲ್ಪಿಸಿಕೊಡುವ ಬಗ್ಗೆ ಕಟ್ಟುನಿಟ್ಟಿನ ಕ್ರಮ ಅನುಸರಿಸಲು ಸೂಚಿಸಲಾಗಿತ್ತು.

ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಹಂತದಲ್ಲಿ ವರ್ಗಾವಣೆ ನೀತಿಗಳನ್ನು ಉಲ್ಲಂಘಿಸಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳನ್ನು ನಿಯೋಜನೆ ಹೆಸರಿನಲ್ಲಿ ಪರೋಕ್ಷವಾಗಿ ವರ್ಗಾವಣೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದ ಹಿನ್ನೆಲೆಯಲ್ಲಿ ಹಾಗೂ ಇದನ್ನೇ ಆಧಾರವಾಗಿಟ್ಟುಕೊಂಡು ಬಂದ ಹಿನ್ನೆಲೆಯಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳ ಹಂತದಲ್ಲಿ ನಿಯೋಜನೆ ಮಾಡುತ್ತಿರುವುದನ್ನು ರದ್ದುಪಡಿಸಲು ದಿನಾಂಕ: 7–6–2011ರ ಸುತ್ತೋಲೆಯಲ್ಲಿ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ/ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅದಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಹೀಗಿದ್ದರೂ ಸಹ ಸ್ಥಳೀಯ ಒತ್ತಡ, ನೌಕರರ ಕೋರಿಕೆ, ಇತ್ಯಾದಿ ನೆಪಗಳ ಆಧಾರದ ಮೇಲೆ ಈ ನಿಯೋಜನೆಗಳನ್ನು ಇಂದಿಗೂ ಮುಂದುವರೆಸುತ್ತಿರುವುದು ಹಾಗೂ ಹೊಸದಾಗಿ ನಿಯೋಜನೆಗಳನ್ನು ಮಾಡುತ್ತಿರುವುದು ನಡೆಯುತ್ತಲೇ ಇರುತ್ತದೆ.

1993ರ ಪಂಚಾಯತ್ ರಾಜ್ ಕಾಯ್ದೆಯ ಅನುಷ್ಠಾನದಲ್ಲಿ ಮತ್ತು ಅಧಿಕಾರ ವಿಕೇಂದ್ರೀಕರಣ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮದಲ್ಲಿ ರಾಷ್ಟ್ರಮಟ್ಟದಲ್ಲಿಯೇ ಕರ್ನಾಟಕ ಸರ್ಕಾರ ಉನ್ನತ ಪ್ರಗತಿಯನ್ನು ಸಾಧಿಸಿದೆ ಎಂದು ತಿಳಿಸಲು ಹರ್ಷವಾಗುತ್ತದೆ.

ಪಂಚಾಯತ್ ರಾಜ್ ಮೂಲ ಉದ್ದೇಶ ಅಧಿಕಾರ ವಿಕೇಂದ್ರೀಕರಣದಲ್ಲಿ ಜನಸಾಮಾನ್ಯರು ಪಾಲ್ಗೊಂಡು ರಾಷ್ಟ್ರದ ಪ್ರಗತಿಗೆ ಸಹಕಾರಿಯಾಗುವುದೇ ಆಗಿದೆ. ಸರ್ಕಾರದ ವಿವಿಧ ಯೋಜನೆಗಳು, ಕಲ್ಯಾಣ ಕಾರ್ಯಕ್ರಮಗಳು ಈ ತಂತ್ರಜ್ಞಾನ ಯುಗದಲ್ಲಿ ಜನಸಾಮಾನ್ಯರಿಗೆ ತಲುಪಿಸಿ ಜನರ ಜೀವನಮಟ್ಟವನ್ನು ಉನ್ನತೀಕರಿಸಿವುದು ಸರ್ಕಾರದ ಧ್ಯೇಯೋದ್ದೇಶವಾಗಿದೆ.

ಈ ನಿಟ್ಟಿನಲ್ಲಿ ಸರ್ಕಾರದ ಪ್ರಯತ್ನ ಪ್ರಶಂಸನೀಯವಾಗಿದೆ. ಈ ಮೂಲ ಉದ್ದೇಶಕ್ಕಾಗಿದೆಯೇ ಸರ್ಕಾರದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು ಪ್ರತಿಯೊಂದು ಪಂಚಾಯಿತಿಗಳಿಗೆ ನೇಮಕ ಮಾಡಿದ್ದು ಸರ್ಕಾರದ ಯೋಜನೆಗಳನ್ನು ಫಲಾನುಭವಿಗಳಿಗೆ ತಲುಪಿಸಿ ಸಮೃದ್ಧ ಜೀವನ ನಡೆಸಲು ಸ್ಥಳೀಯ ಮಟ್ಟದಲ್ಲಿ ಸಕಲ ನಾಗರೀಕ ಸೇವಾ ಸೌಲಭ್ಯಗಳನ್ನು ನೀಡಲು ಇಚ್ಚಿಸಿದೆ ಮತ್ತು ಸಾಧಿಸಿದೆ.

ಆದರೆ ಕೆಲವೊಂದು ಸ್ಥಳೀಯ ಮಟ್ಟದಲ್ಲಿ ಸರ್ಕಾರದ ಗಮನಕ್ಕೆ ತರದೇ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು ಮತ್ತು ಕಾರ್ಯದರ್ಶಿಗಳನ್ನು ಸ್ಥಳೀಯ ಹಂತದಲ್ಲಿ ನಿಯೋಜನೆ/ವರ್ಗಾವಣೆಗೆ ಒತ್ತಡ ತರುವುದು/ಶಿಫಾರಸ್ಸು ಕೋರಿಕೆಗಳನ್ನು ಮಾಡುತ್ತಿರುವುದು/ಇತರೆ ಇಲಾಖೆಗಳಿಗೆ ನಿಯೋಜನೆಗೆ ಒತ್ತಡ ತರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಮೇಲ್ಕಂಡ ಕ್ರಮಗಳಿಂದ ಸರ್ಕಾರದ ಕಾರ್ಯಕ್ರಮಗಳು ನಿಯಮಾನುಸಾರ ಜನಸಾಮಾನ್ಯರಿಗೆ ತಲುಪಲು ಪಾರದರ್ಶಕತೆ ಕೊರತೆ ಎದ್ದು ಕಾಣುತ್ತದೆ. ಸ್ವಜನ ಪಕ್ಷಪಾತತೆ, ವೃತ್ತಿಪರ ಸೇವಾ ದಕ್ಷತೆಗೆ ಧಕ್ಕೆ ಬರುತ್ತದೆ. ಹಾಗೂ ಅಧಿಕಾರ ವಿಕೇಂದ್ರೀಕರಣದ ಪ್ರಕ್ರಿಯೆಗೆ ತಡೆ ಉಂಟುಮಾಡುವ ಹಾಗೂ ಸರ್ಕಾರದ ವಿವಿಧ ಕಾರ್ಯಕ್ರಮಗಳನ್ನು ತ್ವರಿತ ಅನುಷ್ಠಾನಗೊಳಿಸುವಲ್ಲಿ ವಿಳಂಬತೆ, ಕ್ರಿಯಾಶೀಲತೆ ಕೊರತೆಯಿಂದ ಪಂ.ರಾಜ್ ಇಲಾಖೆ ಆಡಳಿತಕ್ಕೆ ಹಿನ್ನಡೆಯಾಗುವ ಸಂಭವವಿರುತ್ತದೆ.

ಆದ್ದರಿಂದ ಇನ್ನು ಮುಂದೆ ಯಾವುದೇ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ/ ಕಾರ್ಯದರ್ಶಿಗಳನ್ನು ಸ್ಥಳೀಯ ವೃಂದ ಮಟ್ಟದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ/ಸರ್ಕಾರದ ಗಮನಕ್ಕೆ ಬಾರದೇ ನಿಯೋಜನೆ/ವರ್ಗಾವಣೆ ಬೇರೆ ಇಲಾಖೆಗಳಿಗೆ ನಿಯೋಜನೆ/ಕೋರಿಕೆ ಶಿಫಾರಸ್ಸುಗಳನ್ನು ಮಾಡಬಾರದೆಂದು ಕಟ್ಟುನಿಟ್ಟಿನ ಆದೇಶ ನೀಡಲಾಗಿದೆ. ಇದನ್ನು ಪಾಲಿಸದ ಅಧಿಕಾರಿಗಳ ವಿರುದ್ಧ ಸರ್ಕಾರದಿಂದ ಶಿಸ್ತಿನ ಕ್ರಮ ಜರುಗಿಸಲಾಗುವುದು. ಈಗಾಗಲೇ ಸ್ಥಳೀಐ ಮಟ್ಟದಲ್ಲಿ ನಿಯೋಜನೆಗೊಂಡಿರುವ ಪಂಚಾಯ್ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿಗಳ ಅನ್ಯ ಕಾರ್ಯನಿಮಿತ್ತದ ಆಧಾರದ ಮೇಲೆ ಮಾಡಿರುವ ಆದೇಶವನ್ನು ಕೂಡಲೇ ರದ್ದುಗೊಳಿಸಲು ಸೂಚಿಸಿದೆ.

**ಈ ಮೇಲ್ಕಂಡ ಎಲ್ಲಾ ಸೂಚನೆಗಳನ್ನು ಮತ್ತು ಉಲ್ಲೇಖಿತ ಸುತ್ತೋಲೆಯಲ್ಲಿನ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು/ಎಲ್ಲಾ ತಾಲ್ಲೂಕು ಪಂಚಾಯುತ್ ಕಾರ್ಯನಿರ್ವಹಣಾಧಿಕಾರಿಗಳು/ಎಲ್ಲಾ ಗ್ರಾವು ಪಂಚಾಯುತ್ ಅಭಿವೃದ್ಧಿ ಅಧಿಕಾರಿಗಳಿಗೆ/ಕಾರ್ಯದರ್ಶಿಗಳಿಗೆ ಮತ್ತೊಮ್ಮೆ ತಿಳಿಸಿದೆ.**

**(ಕೆ. ಯಾಲಕ್ಕಿಗೌಡ)**
ನಿರ್ದೇಶಕರು (ಪಂ.ರಾಜ್) ಹಾಗೂ
ಸರ್ಕಾರದ ಪದನಿಮಿತ್ತ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ

# ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಸಭೆ/ಪತ್ರಿಕಾಗೋಷ್ಠಿ ಕಾರ್ಯಕ್ರಮಗಳ ಚಿತ್ರಣ





ದೆಹಲಿಯ ವಿಜ್ಞಾನ ಭವನದಲ್ಲಿ ಗ್ರಾಮೀಣ ನೈರ್ಮಲ್ಯ ಮತ್ತು ಕುಡಿಯುವ ನೀರಿನ ಯೋಜನೆಗಳ ಬಗ್ಗೆ
ದಿನಾಂಕ : 25.8.2014ರಂದು ನಡೆದ ರಾಷ್ಟ್ರೀಯ ಪರಿಶೀಲನಾ ಸಭೆಯಲ್ಲಿ
ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು





ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಯೋಜನೆಗಳ ಬಗ್ಗೆ ವಿಧಾನ ಸೌಧದಲ್ಲಿ
ದಿನಾಂಕ : 12.8.2014ರಂದು ನಡೆದ ಪತ್ರಿಕಾಗೋಷ್ಠಿಯಲ್ಲಿ
ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

# KARNATAKA VIKAS : SEPTEMBER 2014

**A Monthly Magazine for Rural Development and Panchayat Raj Department, Government of Karnataka**
**Regd No. KA/ BGGPO/2531/2012-14, Licence to Post "without Prepayment" WPP-32**
**RNI No. : 28103/1974 Total No. of Pages 52, Posted at Bangalore GPO on 9th, 10th, 11th of Every Month**


## ‘ಕರ್ನಾಟಕ ವಿಕಾಸ’ ಮಾಸ ಪತ್ರಿಕೆಯ ಚಂದಾಹಣ ಪರಿಷ್ಕೃತಗೊಂಡಿದೆ.

| | |
|---|---|
| ಪತ್ರಿಕೆಯ ಬಿಡಿ ಪ್ರತಿ | ₹ 10 |
| ವಾರ್ಷಿಕ ಚಂದಾಹಣ ವ್ಯಕ್ತಿಗಳಿಗೆ | ₹ 100 |
| ಸಂಘ / ಸಂಸ್ಥೆಗಳಿಗೆ | ₹ 120 |

ವಾರ್ಷಿಕ ಚಂದಾಹಣವನ್ನು ಒಂದು ವರ್ಷದ ಕಾಲಾವಧಿಗಾಗಿ ಮಾತ್ರ ಪಾವತಿಸಲು ಕೋರಿದೆ. ಚಂದಾಹಣವನ್ನು ಡಿ.ಡಿ/ಚೆಕ್ ರೂಪದಲ್ಲಿ ಸ್ವೀಕರಿಸಲಾಗುವುದಿಲ್ಲ. ಚಂದಾದಾರರು ಪೋಸ್ಟಲ್ ಮನಿ ಆರ್ಡರ್ ಮೂಲಕ ಮಾತ್ರ ಚಂದಾಹಣವನ್ನು ಪಾವತಿಸಲು ಕೋರಿದೆ.

ಚಂದಾದಾರರು ಚಂದಾಹಣವನ್ನು ಅಂಚೆ ಕಚೇರಿಯಲ್ಲಿ ಪೋಸ್ಟಲ್ ಮನಿ ಆರ್ಡರ್ ಮೂಲಕ ಪಾವತಿಸುವಾಗ ಮನಿ ಆರ್ಡರ್ ಫಾರಂನಲ್ಲಿ ಚಂದಾದಾರರ ಹೆಸರು ಮತ್ತು ಸಂಪೂರ್ಣ ಅಂಚೆ ವಿಳಾಸ ಪಿನ್‌ಕೋಡ್‌ನೊಂದಿಗೆ ಸ್ಪಷ್ಟವಾಗಿ ನಮೂದಿಸಿದೆಯೇ? ಎಂದು ಖಚಿತಪಡಿಸಿಕೊಳ್ಳಲು ಕೋರಿದೆ. ಚಂದಾದಾರರ ಮೊಬೈಲ್ ಸಂಖ್ಯೆ ನಮೂದಿಸಿದರೆ ಉತ್ತಮ. ಸ್ಪಷ್ಟ ಅಂಚೆ ವಿಳಾಸಗಳಿಲ್ಲದ ವಾರ್ಷಿಕ ಚಂದಾಹಣವನ್ನು ಸ್ವೀಕರಿಸಲಾಗುವುದಿಲ್ಲ. ಚಂದಾಹಣವನ್ನು ಪಾವತಿಸಬೇಕಾದ ’ಕರ್ನಾಟಕ ವಿಕಾಸ’ದ ಕಚೇರಿ ವಿಳಾಸ ಈ ಕೆಳಕಂಡಂತಿದೆ.


**ಸಂಪಾದಕರು**

**ಕರ್ನಾಟಕ ವಿಕಾಸ,**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,**
**ನಂ.309, 3ನೇ ಮಹಡಿ, ಗೇಟ್ ನಂ.1, ಬಹುಮಹಡಿ ಕಟ್ಟಡ, ಡಾ॥ಅಂಬೇಡ್ಕರ್ ವೀಧಿ, ಬೆಂಗಳೂರು – 560 001.**
**ದೂರವಾಣಿ ಸಂಖ್ಯೆ : 080 – 22353857.**
ಇ–ಮೇಲ್: kvrdpr@gmail.com, ವೆಬ್‌ಸೈಟ್: www.rdpr.kar.nic.in



Published & Owned by :
**Director ( Panchayat Raj)**
Rural Development and
Panchayat Raj Department

Name of the Editor
**Y. Mahankalappa**

Place & Publications
**Karnataka Vikas**
No. 309, 3rd Floor, Gate No.1,
M.S. Building, Dr. Ambekar Veedhi,
Bangalore - 560 001.

Printed by
The Director,
**Government Press**
Bangalore, Karnataka.

Price : ₹ 10.00
ಬೆಲೆ : ₹ 10.00